# ಪುರುಷವೇಷದ ಪೊಗರು



## ಹಾರಾಡಿ ಕುಷ್ಟ ಗಾಣಿಗ

ಪ್ರಕಾಶಕರು:
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

# ಪುರುಷವೇಷದ ಪೊಗರು



## ಹಾರಾಡಿ ಕುಷ್ಟ ಗಾಣಿಗ

ಪ್ರಕಾಶಕರು:
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

# ಪುರುಷವೇಷದ ಪೊಗರು–ಹಾರಾಡಿ ಕುಷ್ಟ ಗಾಣಿಗ

ಪ್ರಕಾಶಕರು:
**ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು**

ಸಹಕಾರ:
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು**

ಪ್ರಧಾನ ಸಂಪಾದಕ:
**ನಾಡೋಜ ಬೆಳಗಲ್ಲು ವೀರಣ್ಣ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

ಸಂಪಾದಕ:
**ಪ್ರೊ। ಎಸ್. ವಿ. ಉದಯ್ ಕುಮಾರ್ ಶೆಟ್ಟಿ**
'ಮಂದಿರಾ', ಮಂಗಳಾ ಕಾಲೋನಿ, ಅಲೆವೂರು ರಸ್ತೆ, ಮಣಿಪಾಲ – 574 104
ಉಡುಪಿ ಜಿಲ್ಲೆ, ದೂರವಾಣಿ: 9449367729

ಪುಟಗಳು:

ಮೊದಲನೆ ಆವೃತ್ತಿ: 2017

ಬೆಲೆ: 70/–

ಮುದ್ರಣ: ಭಾರತ್ ಪ್ರೆಸ್, ಕಲ್ಸಂಕ, ಉಡುಪಿ – 2

# ಅಧ್ಯಕ್ಷರ ಮಾತು

ಯಕ್ಷಗಾನ, ಬಯಲಾಟ ಕ್ಷೇತ್ರಗಳಲ್ಲಿ ಶ್ರೇಷ್ಠಸಾದನೆಗೈದು ಈ ವರ್ಷಕ್ಕೆ – ಜನ್ಮ ಶತಮಾನ ವರ್ಷ, ಹಾಗೆ ನೂರ ಒಂದು, ನೂರ ಎರಡು ವರ್ಷಗಳನ್ನು ಪೂರೈಸುತ್ತಿರುವ, ಹಿರಿಯರನ್ನು ಸಂಸ್ಮರಿಸಿ ಅವರ ಕುರಿತು ಪುಸ್ತಕ ಪ್ರಕಾಶನ ಸಂಸ್ಮರಣ ಕಾರ್ಯಕ್ರಮವನ್ನು ಏರ್ಪಡಿಸಬೇಕೆಂಬುವುದು ಅಕಾಡಮಿಯ ಯೋಜನೆ. ಅದರಂತೆ ಬಡಗುತಿಟ್ಟು ಯಕ್ಷಗಾನದ ಹಿಂದಿನ ತಲೆಮಾರಿನ ಅಗ್ರ ಪಂಕ್ತಿಯ ಕಲಾವಿದರಲ್ಲಿ ಓರ್ವರಾದ ಹಾರಾಡಿ ಕುಷ್ಟ ಗಾಣಿಗರ ಕುರಿತಾದ ಕಾರ್ಯಕ್ರಮದಲ್ಲಿ ಈ ಪುಸ್ತಕವು ಹೊರಬರುತ್ತಿದೆ.

ಈ ಪುಸ್ತಕವನ್ನು ಶೀರ್ಷವಾಗಿ ಸಂಪಾದಿಸಿದ ಪ್ರೊ. ಎಸ್. ವಿ. ಉದಯ ಕುಮಾರ್ ಶೆಟ್ಟಿ ಯಕ್ಷಗಾನ ವಿಮರ್ಶಕ ಅವರಿಗೆ, ಜನ್ಮ ಶತಮಾನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಎಲ್ಲರಿಗೆ ಅಕಾಡೆಮಿಯು ಆಭಾರಿಯಾಗಿದೆ.

**ನಾಡೋಜ ಬೆಳಗಲ್ಲು ವೀರಣ್ಣ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ
ಬೆಂಗಳೂರು – 560002

ಬೆಂಗಳೂರು
20–8–2017

# ಪ್ರಸ್ತಾವನೆ

ಯಕ್ಷಗಾನದ ಬಡಗುತಿಟ್ಟಿನ ಅಗ್ರಮಾನ್ಯ ಪುರುಷ ವೇಷಧಾರಿಯಾಗಿ ಮೆರೆದಾಡಿದ ಹಾರಾಡಿ ಕುಷ್ಟ ಗಾಣಿಗರ ಹೆಸರನ್ನು ಕೇಳದ, ವೇಷವನ್ನು ಕಾಣದ ಕಲಾರಸಿಕರೇ ವಿರಳವೆನ್ನಬಹುದು. ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಕೀರ್ತಿ ಶೇಷ ಹಾರಾಡಿ ರಾಮ ಗಾಣಿಗರ ಮತ್ತು ಕುಷ್ಟ ಗಾಣಿಗರ ಜೋಡಿ "ಕರ್ಣಾರ್ಜುನರ ಜೋಡಿ" ಎಂದೇ ಪ್ರಸಿದ್ಧವಾದುದು. ಹಾರಾಡಿ ರಾಮಗಾಣಿಗರು ಕರ್ಣನಾಗಿ ವಿಜೃಂಭಿಸಿದರೆ, ಕುಷ್ಟ ಗಾಣಿಗರು ಅರ್ಜುನನಾಗಿ ಮೆರೆದಾಡಿದವರು.

ಕುಷ್ಟ ಗಾಣಿಗರು ಯಕ್ಷಗಾನದ ಅರ್ಜುನನೇ. ಅವರು ನಿರ್ವಹಿಸದ ಅರ್ಜುನನ ಪಾತ್ರವೇ ಇಲ್ಲವೆನ್ನಬಹುದು. ಕೃಷ್ಣ ಗಾಣಿಗರ ಕೇದಗೆ ಮುಂದಲೆಯ ಸೊಬಗು, ಅದನ್ನು ನಾಗರ ಹೆಡೆಯಂತೆ ಆಡಿಸುತ್ತಿದ್ದ ರೀತಿ, ಅವರ ವಿಶಿಷ್ಟ ಹೆಜ್ಜೆಗಾರಿಕೆ ಅಪೂರ್ವವಾದುದು; ಅನನ್ಯವಾದುದು.

ನಲುವತ್ತು ವರ್ಷಗಳಷ್ಟು ಸುಧೀರ್ಘಕಾಲ ಮಂದಾರ್ತಿ ಮತ್ತು ಸೌಕೂರು ಮೇಳಗಳಲ್ಲಿ ಸೇವೆ ಸಲ್ಲಿಸಿದ ಕುಷ್ಟ ಗಾಣಿಗರು ಹಾರಾಡಿ ಪರಂಪರೆಯ ಆದ್ಯರಲ್ಲಿ ಒಬ್ಬರು. ಅನೇಕರು ಅವರನ್ನು ಅನುಸರಿಸುತ್ತ ಬಂದರೂ, ಕೃಷ್ಣ ಗಾಣಿಗರ ಔನ್ನತ್ಯವನ್ನು ಸಾಧಿಸಿಲ್ಲ. ಆದರೆ, ಅವರನ್ನು ಇಂದಿಗೂ ನೆನಪಿಸುತ್ತಿದ್ದಾರೆ.

ಗಾಣಿಗರು ಶತಮಾನದ ಸಂಸ್ಮರಣೆಯ ಕಲಾಚೇತನ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಯಕ್ಷಗಾನದ ಸಂಸ್ಮರಣೆಯ ಕಲಾವಿದರನ್ನು ನೆನಪಿನಲ್ಲಿಡುವಲ್ಲಿ ಕಿರು ಹೊತ್ತಗೆಯನ್ನು ಪ್ರಕಟಿಸುವ ಮೂಲಕ ಸಾರ್ಥಕ ಕೆಲಸಮಾಡುತ್ತಿದೆ. ಇದು ಮುಂದಿನ ತಲೆಮಾರಿನ ಮಾರ್ಗದರ್ಶಿಯೂ ಆಗುವುದರಲ್ಲಿ ಸಂದೇಹವಿಲ್ಲ.

ಕೀರ್ತಿ ಶೇಷ ಕುಷ್ಟ ಗಾಣಿಗರ ನೆನಪಿನ ಈ ಪುಸ್ತಕದ ಸಂಪಾದಕತ್ವವನ್ನು ಪ್ರೀತಿಯಿಂದ ವಹಿಸಿಕೊಂಡು ನೇರ್ಪುಗೊಳಿಸಿದ ಯಕ್ಷಗಾನ ಭಾಗವತ ವಿಮರ್ಶಕ ಮಿತ್ರ ಪ್ರೊ. ಎಸ್. ವಿ. ಉದಯ ಕುಮಾರ ಶೆಟ್ಟಿ ಅವರಿಗೆ, ತಮ್ಮ ಲೇಖನಗಳನ್ನು ಒದಗಿಸಿಕೊಟ್ಟ ಲೇಖಕರಿಗೆ ಹಿರಿಯರಾದ ಅಂಬಾತನಯ ಮುದ್ರಾಡಿ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಭಾರತ್ ಪ್ರೆಸ್, ಉಡುಪಿ ಅವರಿಗೆ ಕೃತಜ್ಞತೆ ಅರ್ಪಿಸುತ್ತೇನೆ.

ಹಿರಿಯ ಕಲಾಚೇತನ ಹಾರಾಡಿ ಕುಷ್ಟ ಗಾಣಿಗರ ಶತಮಾನೋತ್ಸವ ಆಚರಣೆಯ ಸಂಚಾಲಕತ್ವದ ಅವಕಾಶ ನನ್ನ ಸೌಭಾಗ್ಯವೆಂದು ಪರಿಭಾವಿಸುತ್ತ ಗೌರವವಂದನೆ ಸಲ್ಲಿಸುತ್ತಿದ್ದೇನೆ.

**ಯಕ್ಷಗಾನಂ ಗೆಲ್ಗೆ**

**ಪಿ. ಕಿಶನ್ ಹೆಗ್ಡೆ**
ಸಂಚಾಲಕರು
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ
ಬೆಂಗಳೂರು

20–8–2017
ಕೋಟ

# ಉಪಾಸನೆಗೊಂದು ಸ್ವಸ್ತಿ



ಕರಾವಳಿ ಕರ್ನಾಟಕದ ರಮ್ಯಾದ್ಭುತ ಕಲೆ ಯಕ್ಷಗಾನ. ಒಮ್ಮೆ ಪಾಮರಕಲೆಯೆಂದು ವಿದ್ವದ್ವಲಯದಲ್ಲಿ ಕರೆಯಲ್ಪಡುತ್ತಿದ್ದ ಯಕ್ಷಗಾನ ಇಂದು ಪಂಡಿತ ಪಾಮರರಿಬ್ಬರಿಗೂ ಪ್ರಿಯವಾದ ಕಲೆಯಾಗಿ ರಾಜ ಮನ್ನಣೆಗೆ ಪಾತ್ರವಾಗಿದೆ. ಕಡಲಕರೆಯ ಈ ಯಕ್ಷಗಾನ ಸಹ್ಯಾದ್ರಿಯನ್ನು ಉತ್ತರಿಸಿ ಸಮಗ್ರ ಕರ್ನಾಟಕದ ದೇಸಿ ಕಲೆಯಾಗಿ ಮೆರೆದಿದೆ. ಹಿಮಾಲಯದಿಂದ ಕನ್ಯಾಕುಮಾರಿ ವರೆಗೆ ಯಕ್ಷಗಾನದ ಚಂಡೆ ಮದ್ದಳೆಗಳು ಅನುರಣಿಸಿ ಕಲಾಸಕ್ತರ ಮನಸ್ಸನ್ನು ಸೂರೆಗೊಂಡಿದೆ. ಇಪ್ಪತ್ತನೆ ಶತಮಾನದ ಏಳನೆ ದಶಕದಿಂದ ಈಚೆಗಂತೂ ಯಕ್ಷಗಾನ ಸಪ್ತ ಸಾಗರದಾಟಿ ಪೂರ್ವ ಪಶ್ಚಿಮ ದೇಶಗಳ ಕಲಾಸಕ್ತರ ಹೃದಯವನ್ನು ಸೂರೆಗೊಂಡಿದೆ.

ಇಂತಹ ಸಂಪನ್ನ ಕಲೆ, ಇಪ್ಪತ್ತನೆಯ ಶತಮಾನದ ಪ್ರಾರಂಭದ ದಿನಗಳಲ್ಲಿ ಇಂದಿನ ರೀತಿಯಲ್ಲಿ ಸಾಮಾಜಿಕ ಮೇಲ್ ಸ್ತರದದಲ್ಲಾಗಲೀ, ವಿದ್ವತ್ತ್ ವಲಯದಲ್ಲಾಗಲಿ ಮಾನ್ಯತೆ ಪಡೆದಿರಲಿಲ್ಲ. ಸಾಮಾಜಿಕವಾಗಿ ಗೌರವದ ಸ್ಥಾನಮಾನ ಹೊಂದಿರಲಿಲ್ಲ. ಕಲೆ ಮಡಿ ಮೈಲಿಗೆಗೂ ಒಳಗಾಗಿತ್ತು. ಮೇಲ್ವರ್ಗದಲ್ಲಿ ಯಕ್ಷಗಾನ ನೋಡಿ ಬಂದರೆ ಸ್ನಾನ ಮಾಡದೆ ಮನೆಗೆ ಹೋಗುವಂತಿರಲಿಲ್ಲ ಯಕ್ಷಗಾನ ಕಲಾವಿದರು ಬಂದರೆ ಹೊರಗಿನಿಂದ ಹೊರಗೆ ಅವರನ್ನು ಸಾಗ ಹಾಕುವ ಪರಿಸ್ಥಿತಿ ಇದ್ದದ್ದು ಇಂದಿನ ತಲೆಮಾರಿನ ಅನೇಕರಿಗೆ ತಿಳಿದಿರಲಿಕ್ಕಿಲ್ಲ.

ಯಕ್ಷಗಾನದಂತ ಸದ್ಯೋಜಾತ ಕಲೆಗಳು ತತ್ಕಾಲದಲ್ಲಿ ಎಷ್ಟೇ ಅದ್ಭುತಗಳನ್ನು ಸಾದಿಸಿದರೂ ಆಯಾಯಕಾಲದ ಕಲಾಸ್ಥಿತಿಗಳ ನಿರ್ಮಾಣದಲ್ಲಿ ವಹಿಸಿದ ಪಾತ್ರಗಳೇನು ಎಂದು ನಿರ್ದರಿಸಲು ಅಗತ್ಯವಾದ ದಾಖಲೆಗಳಿಲ್ಲದಿರುವುದು. ಲಿಖಿತ ಕಲಾಪ್ರಕಾರಗಳಾಗಲಿ ಸೆಲ್ಯುಲಾಯಿಡ್ ಮಾದ್ಯಮಕ್ಕಾಗಲಿ ಇರುವ ಸೌಲಭ್ಯ ಸದ್ಯೋಜಾತ ಕಲೆಗಳಿಗಿಲ್ಲ. ಕೇವಲ 2–3 ತಲೆಮಾರಿನವರೆಗೆ ಮಾತ್ರ ಉಳಿಯಬಹುದಾದ ದಂತಕಥೆಗಳು ಗಾದೆಗಳು ಮಾತ್ರ ನಮಗೆ ಲಭ್ಯವಾಗುತ್ತದೆ. ಇವು ಕಲಾ ಪ್ರಕಾರದ ಅಂತಸ್ಥ ಕೊರತೆಗಳು. ಅದಕ್ಕೆ ಕಾಲ ಕಾಲಕ್ಕೆ ಸಮಕಾಲೀನ ಕಲಾಸ್ಥಿತಿಯನ್ನು ಕಲಾವಿದರ ಸಾದನೆಯನ್ನೂ ವಿಚಾರ ಸಂಕಿರಣ ಏರ್ಪಡಿಸಿ ಅಲ್ಲಿನ ಪ್ರಬಂದ ಪ್ರತಿಕ್ರಿಯೆಯನ್ನು ಸಂಗ್ರಹಿಸಿ, ವಿವರಗಳನ್ನು ಸಂಗ್ರಹಿಸಿ, ಗ್ರಂಥ ಮುದ್ರಿಸುವುದು ಅಗತ್ಯ. ಆಧುನಿಕತೆಯ ಗ್ರಾಹಕೀಕರಣಕ್ಕೆ ಒಳಗಾಗಿ ಯಕ್ಷಗಾನ ತನ್ನ ಕಲಾತ್ಮತೆಯನ್ನು ಸ್ವಂತಿಕೆಯನ್ನು ಕಳೆದುಕೊಳ್ಳುವ ಕಾಲಘಟ್ಟದಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿ ಮೂಲಕ ಇಂತಹ ಒಂದು ಕಾರ್ಯ ಆಗುತ್ತಿರುವುದು ಶ್ಲಾಘನೀಯ.

ಬಡಗುತಿಟ್ಟಿನ ಮಟ್ಟಿಗೆ ಉಪ್ರಳ್ಳಿ ಶೇಷ, ಸಕ್ಕಟ್ಟುಗಣಪತಿ ಪ್ರಭು, ಕೊಕ್ಕರ್ಣೆ ನರಸಿಂಹ ಕಾಮತ್ ಪೆರ್ಡೂರು ರಾಮ, ಹಾರಾಡಿ ರಾಮಗಾಣಿಗ, ವಂಡಾರು ಬಸವ ನಾಯರಿ, ಕುಂಜಾಲು ಶೇಷಗಿರಿ ಕಿಣಿ, ಜಾನುವಾರುಕಟ್ಟೆ ಭಾಗವತರು, ನೀಲಾವರ ರಾಮಕ್ರಷ್ಣಯ್ಯ, ಗುಂಡ್ಮಿ ರಾಮಚಂದ್ರ ನಾವಡ, ನಾರಣಪ್ಪ ಉಪ್ಪೂರ್, ಕೋಟ ವೈಕುಂಠ ಅರಾಟೆ ಮಂಜುನಾಥ, ಶಿರಿಯಾರ ಮಂಜು ನಾಯಕ್, ರಾಮ ನಾಯರಿ, ಮಟಪಾಡಿ ವೀರಭದ್ರ ನಾಯಕ್, ಗೋರ್ಪಾಡಿ ವಿಠಲ ಪಾಟೀಲ್, ನೆಲ್ಲೂರು ಮರಿಯಪ್ಪಾಚಾರ್, ಹುಂಚದಕಟ್ಟೆ ಶ್ರೀನಿವಾಸ ಆಚಾರ್, ಕೆಮ್ಮಣ್ಣು ಆನಂದ, ಉಡುಪಿ ಬಸವ, ಮೊಳಹಳ್ಳಿ ಹೆರಿಯ ಇನ್ನೂ ಅನೇಕರು ರಂಗದಲ್ಲಿ ಮೆರೆದು ಕಾಲಗರ್ಭದಲ್ಲಿ ಸೇರಿಹೋಗಿದ್ದಾರೆ. ಅಂತಹ ಕಲಾವಿದರ ಪಂಕ್ತಿಗೆ ಸೇರಿದ ಅಲ್ಲ ಅವರನ್ನೂ ಮೀರಿದ ಸರ್ವ ಶ್ರೇಷ್ಠ ಕಲಾವಿದ ಹಾರಾಡಿ ಕುಷ್ಟ ಗಾಣಿಗರು ತನ್ನ ಶ್ರೀಮಂತ ಕಲಾವಂತಿಕೆಯಿಂದ ದೀಮಂತ ವ್ಯಕ್ತಿತ್ವದಿಂದ ಯಕ್ಷಗಾನದ ಮರೆಯಲಾರದ ದಂತಕಥೆ ಎನಿಸಿದ್ದಾರೆ.

ಹಾರಾಡಿ ಇಂದು ಯಕ್ಷಗಾನದ ವಲಯಕ್ಕೆ ಸಂಬಂದಿಸಿದಂತೆ ಊರಹೆಸರಾಗಿ ಉಳಿದಿಲ್ಲ ವ್ಯಕ್ತಿ ನಾಮ. ಹಾರಾಡಿ ಎನ್ನುವ ಮೂರಕ್ಷರವು ಯಕ್ಷಗಾನ ಪ್ರಿಯರ ಮೈರೋಮಾಂಚನಗೊಳ್ಳುವಷ್ಟು ಧೃಡವಾದದ್ದು. ಯಕ್ಷಗಾನಕ್ಕೆ ಹೊಸ ಶೈಲಿಯನ್ನು ಸ್ರಷ್ಟಿಸಿದ ಕೀರ್ತಿ ಈ ಮನೆತನಕ್ಕಿದೆ. ಬಡಗುತಿಟ್ಟು ಯಕ್ಷಗಾನಕ್ಕೆ ಗಾಣಿಗ ಕಲಾವಿದರ ಕೊಡುಗೆ ಅಪಾರ. ಬಡಗುತಿಟ್ಟು ಯಕ್ಷಗಾನಕ್ಕೆ ಪ್ರಥಮರಾಷ್ಟ್ರ ಪ್ರಶಸ್ತಿ ತಂದಿತ್ತ ರಾಮಗಾಣಿಗರು ಮಂದಾರ್ತಿ ಒಂದೇ ಮೇಳದಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿ ಮೇಳಕ್ಕೂ ಯಕ್ಷಗಾನಕ್ಕೂ ಘನತೆ ತಂದಿತ್ತ ರಾಮಗಾಣಿಗರು, ಅವರ ಸಹೋದರ ಅಳಿಯ ಕುಷ್ಟ ಗಾಣಿಗರು ಬದುಕಿರುವಾಗಲೇ ದಂತಕಥೆಯಾದವರು.

ಕುಷ್ಟ ಗಾಣಿಗರದ್ದು ಯಕ್ಷಗಾನಕ್ಕೆ ಹಿಮ್ಮೇಳ ಸಹಿತ ಯಕ್ಷಗಾನದ ಎಲ್ಲಾ ಪ್ರಕಾರದ ವೇಷದಾರಿಗಳನ್ನು ನೀಡಿದ್ದ ಬಹು ಖ್ಯಾತ ಹಾರಾಡಿ ಕುಟುಂಬ. ಇವರು ಮೇಳಕ್ಕೆ ಸೇರಿದಾಗ ಇಪ್ಪತ್ತು ಮಂದಿ ಇವರ ಮನೆತನದವರು ರಂಗಸ್ಥಳದಲ್ಲಿದ್ದರು. ಹಾಗಾಗಿ ರಂಗಸ್ಥಳವೇ ಇವರ ಗುರುಕುಲ. ಇವರ ಮನೆತನವೇ ಯಕ್ಷಗಾನ ಕುಟುಂಬ. ಇವರ ಉದ್ಯೋಗವೂ ಕೂಡ ಅದೇ ಆಗಿತ್ತು. ಅಳಿಯ ಸಂತಾನ ಪರಂಪರೆಯ ಅವರ ಮಾವ ರಾಷ್ಟ್ರ ಪ್ರಶಸ್ತಿ ವಿಜೇತ ಹಾರಾಡಿ ರಾಮಗಾಣಿಗರು, ಅವರ ಮಾವ ಶೇಷ ಗಾಣಿಗ ಅವರ ಮಾವ ಮಂಜ ಗಾಣಿಗ ಹೀಗೆ ಅವರ ಏಳು ತಲೆಮಾರಿನ ಕಲಾವಿದರು ಹಾರಾಡಿಯಲ್ಲಿ ಜನಿಸಿ ಯಕ್ಷಲೋಕ ಪ್ರವೇಶ ಮಾಡಿದ್ದರು. ಕುಷ್ಟಗಾಣಿಗರ ಅಳಿಯಂದಿರಾದ ದಿ. ಉದ್ಯಾವರ ಬಸವ ಗಾಣಿಗರು, ಮತ್ತು ಕೋಡಿ ಶಂಕರಗಾಣಿಗರು ಬಡಗುತಿಟ್ಟಿನ ಎರಡನೇ ವೇಷದಾರಿಯಾಗಿ ಮೆರೆದರೆ, ಇನ್ನೋರ್ವ ಅಳಿಯ ದಿ. ಹಾರಾಡಿ ಮಹಾಬಲ ಗಾಣಿಗರು ಕೋರೆ ಮುಂಡಾಸಿನಲ್ಲಿ ಖ್ಯಾತಿವೆತ್ತವರು, ಹಾರಾಡಿ ಬಸವ ಗಾಣಿಗ ಮತ್ತು ಬಾಬು ಗಾಣಿಗರು ಪ್ರಸಿದ್ದ ಕಲಾವಿದರಾಗಿ ಮೆರೆದವರು. ಪ್ರಸ್ತುತ ಪ್ರಸಿದ್ದ ಕಲಾವಿದರಾದ ಹಾರಾಡಿ ಸರ್ವೋತ್ತಮ ಗಾಣಿಗ ಹಾರಾಡಿ ರಮೇಶ ಗಾಣಿಗ, ಪ್ರವೀಣ ಗಾಣಿಗರು ಕುಷ್ಟ ಗಾಣಿಗರ ಮೂರನೇ ಪೀಳಿಗೆಯವರು, ಹಾರಾಡಿ ಕುಟುಂಬದ ಸಂಬಂಧಿಗಳೂ ಕುಷ್ಟ ಗಾಣಿಗರ ಮೊಮ್ಮಕ್ಕಳಾದ ಆಜ್ರಿ ಗೋಪಾಲ ಗಾಣಿಗ ಮತ್ತು ಕೋಡಿ ವಿಶ್ವನಾಥ ಗಾಣಿಗರು ಸುದೀರ್ಘ ಕಾಲದಿಂದ ಮಂದಾರ್ತಿ ಮತ್ತು ಸೌಕೂರು ಮೇಳದ ಎರಡನೇ

ವೇಷಧಾರಿಗಳಾಗಿ ದುಡಿಯುತ್ತಿದ್ದಾರೆ. ಇದು ಹಾರಾಡಿ ಕುಟುಂಬಕ್ಕೂ ಶ್ರೀ ಮಂದಾರ್ತಿ ಮತ್ತು ಸೌಕೂರು ಮೇಳಕ್ಕೂ ಇರುವ ಅವಿನಾಭಾವವನ್ನು ಸೂಚಿಸುತ್ತದೆ ,

ಕುಷ್ಟ ಗಾಣಿಗರೆಂದೇ ಖ್ಯಾತಿವೆತ್ತ ಹಾರಾಡಿ ಕೃಷ್ಣ ಗಾಣಿಗರ ತಿರುಗಾಟವೇ ಯಕ್ಷಗಾನದ ಸುವರ್ಣ ಯುಗವಾಗಿತ್ತು. ಖ್ಯಾತಿವೆತ್ತ ನಡುತಿಟ್ಟು ಭರತ ಖಂಡವನ್ನಾಳಿದ ಎರಡು ವಂಶಗಳಾದ ಸೂರ್ಯ ವಂಶ ಮತ್ತು ಚಂದ್ರವಂಶದಂತೆ ಎರಡು ಸಮರ್ಥ ಶೈಲಿಗಳಿಂದ ಕಂಗೊಳಿಸುತಿತ್ತು. ಒಂದು ಹಾರಾಡಿತಿಟ್ಟು ಇನ್ನೊಂದು ಮಟ್ಪಾಡಿತಿಟ್ಟು ಹಾರಾಡಿತಿಟ್ಟಿನಲ್ಲಿ ಪ್ರಭಲರಾದ ನಾರಾಯಣ ಗಾಣಿಗ ರಾಮ ಗಾಣಿಗರ ಸಹಿತ ಅನೇಕ ಗಾಣಿಗ ಕಲಾವಿದರಿದ್ದರೆ ಮಟ್ಪಾಡಿತಿಟ್ಟಿನಲ್ಲಿ ಗುರು ವೀರಭದ್ರ ನಾಯಕ್ ಶ್ರೀನಿವಾಸ ನಾಯ್ಕ್ ಚಂದು ನಾಯ್ಕರಂತ ಘಟಾನುಘಟಿಗಳಿದ್ದರು. ಮಟಪಾಡಿ ಕಲಾವಿದರು ಮಾರಣಕಟ್ಟೆ ಮೇಳದಲ್ಲೂ, ಹಾರಾಡಿ ಕಲಾವಿದರು ಮಂದಾರ್ತಿ ಮೇಳದಲ್ಲೂ ಸೇವೆಸಲ್ಲಿಸುತಿದ್ದರು. ಜೋಡಾಟಗಳಲ್ಲಿ ಕುಷ್ಟ ಗಾಣಿಗರ ವೇಷ ಮಂದಾರ್ತಿ ಮೇಳದಲ್ಲೂ ವೀರಭದ್ರ ನಾಯ್ಕರ ವೇಷ ಮಾರಣಕಟ್ಟೆ ಮೇಳದಲ್ಲಿ ಎದುರು ಬದುರು ಬರುವುದನ್ನು ನೋಡಿದ ಹಿರಿಯರು ಇಂದಿಗೂ ನೆನಪಿಸುತ್ತಾರೆ.

ಉಡುಪಿ ಜಿಲ್ಲೆಯ ಯಕ್ಷಗಾನದ ತವರೂರು ಬ್ರಹ್ಮಾವರ ಸಮೀಪ ಹಾರಾಡಿಯಲ್ಲಿ 1916ರಲ್ಲಿ ಜನಿಸಿದ ಕುಷ್ಟ ಗಾಣಿಗರು ಶಾಲೆಯ ಮೆಟ್ಟಿಲನ್ನೂ ಏರಿದವರಲ್ಲ, ಆಗಿನ ಹಿರಿಯ ಕಲಾವಿದರಂತೆ ಸುತ್ತಮುತ್ತಲೂ ಮತ್ತು ಮನೆತನದಲ್ಲೂ ಯಕ್ಷಗಾನದ ವಾತಾವರಣ ದಟ್ಟವಾಗಿದ್ದರಿಂದ ತಮ್ಮ ಮಾವ ಹಾರಾಡಿ ರಾಮಗಾಣಿಗರೊಂದಿಗೆ ಮಂದಾರ್ತಿ ಮೇಳದಲ್ಲಿ ಗೆಜ್ಜೆಕಟ್ಟಿದರು. ಈಗಿನ ಕಲಾವಿದರಂತೆ ದಿಢೀರ್ ಪುರುಷವೇಷದಾರಿಯಾಗದೇ ಕೋಡಂಗಿ ಬಾಲಗೋಪಾಲ ಪೀಠಿಕಾ ವೇಷ ಒಡ್ಡೋಲಗ ಹೀಗೆ ಹಂತ ಹಂತವಾಗಿ ಮೇಲೇರಿ ಪುರುಷವೇಷದಾರಿಯಾಗಿ ಮೆರೆದವರು. ರಾಮಗಾಣಿಗರ ಎರಡನೇ ವೇಷ ಕುಷ್ಟ ಗಾಣಿಗರ ಪುರುಷವೇಷ ನಾರಾಯಣ ಗಾಣಿಗರ ಸ್ತ್ರೀವೇಷ ಮಹಾಬಲ ಗಾಣಿಗರ ಮುಂಡಾಸುವೇಷ ಆಗಿನ ಮಂದಾರ್ತಿ ಮೇಳಕ್ಕೆ ಕೀರ್ತಿಘನತೆಯನ್ನುತಂದಿತ್ತು ಎಂದು ಆ ಗತ ವೈಭವಕ್ಕೆ ಸಾಕ್ಷಿಯಾಗಿದ್ದ ಹಿರಿಯರ ಅಂಬೋಣ. ಸಾವಿರಾರು ಪ್ರಯೋಗ ಕಂಡ ರಾಮಗಾಣಿಗರಿಗೆ ಕೀರ್ತಿತಂದಿತ್ತ ಅತುಳಬಲ ಕರ್ಣನಿಗೆ ಅವಸಾನ ತರುವ ಕರ್ಣಾರ್ಜುನ ಕಾಳಗ ಪ್ರಸಂಗದಲ್ಲಿ ರಾಮಗಾಣಿಗರ ಕರ್ಣನಿಗೆ ಕುಷ್ಟ ಗಾಣಿಗರ ಅರ್ಜುನ ನಾರಾಯಣ ಗಾಣಿಗರ ಕೃಷ್ಣ ವಂಡ್ಸೆ ಮುತ್ತ ಗಾಣಿಗರ ಶಲ್ಯ ಒಂದು ಅಪೂರ್ವ ಜೋಡಿಯಾಗಿದ್ದು ರಾಮಗಾಣಿಗರಿಗೆ ರಾಷ್ಟ್ರ ಪ್ರಶಸ್ತಿ ಬರುವಲ್ಲಿ ಈ ಪ್ರದರ್ಶನದ ಕೊಡುಗೆಯೂ ಇದೆ ಎಂದು ಹಿರಿಯ ವಿಮರ್ಶಕ ದಿ. ಹಂದಾಡಿ ಸುಬ್ಬಣ್ಣ ಭಟ್ಟರು ಅಭಿಪ್ರಾಯ ಪಟ್ಟಿದ್ದರು. ಸ್ವಲ್ಪ ಕಾಲ ಸೌಕೂರು ಮೇಳದಲ್ಲೂ ಸೇವೆಸಲ್ಲಿಸಿದ ಗಾಣಿಗರು ಕೆಲವು ವರ್ಷ ಅಮೃತೇಶ್ವರಿ ಮೇಳದಲ್ಲೂ ಯಜಮಾನರಾಗಿ ಕಲಾವಿದರಾಗಿಯೂ ಸೇವೆ ಸಲ್ಲಿಸಿ ಜೀವಿತದ ಕೊನೆಯವರೆಗೂ ಶ್ರೀ ಮಂದಾರ್ತಿ ಮೇಳವಂದರಲ್ಲೇ ಸೇವೆಸಲ್ಲಿಸಿ ನಿವೃತ್ತಿಯಾದರು, ಮಂದಾರ್ತಿ ಮೇಳದಲ್ಲಿ ಅವರ ಯಶಸ್ಸಿಗೆ ಕುಂಜಾಲು ಹಾಡುಗಾರಿಕೆ ಶೈಲಿಯ ಕುಂಜಾಲು ಶೇಷಗಿರಿಕಿಣಿ, ಜಾನುವಾರುಕಟ್ಟೆ ಗೋಪಾಲ ಕಾಮತ್, ಗೋರ್ಪಾಡಿ ವಿಠಲ ಪಾಟೀಲರ ಬಾಗವತಿಕೆ ಹಿರಿಯಡ್ಕ ಗೋಪಾಲ ರಾಯರ ಮದ್ದಳೆ ಚಂಡೆಕಿಟ್ಟುವಿನ

ಚಂಡೆಯೂ ಪ್ರಮುಖ ಕಾರಣವಾಗಿತ್ತಂತೆ. ಅಂದಿನ ಮಂದಾರ್ತಿ ಮೇಳದಲ್ಲಿ ಹಿರಿಯ ಸಹಕಲಾವಿದರಾಗಿದ್ದ ಹಾರಾಡಿ ನಾರಾಯಣ ಗಾಣಿಗ, ಮಾರ್ಗೋಳಿ ಗೋವಿಂದ ಸೇರೆಗಾರ್, ವಂಡ್ಸೆ ನಾರಾಯಣ ಗಾಣಿಗ ಕೊಕ್ಕರ್ಣೆ ನರಸಿಂಹ ಕಾಮತರ ಸ್ತ್ರೀ ವೇಷವೂ ಅವರ ಪುರುಷವೇಷಕ್ಕೆ ಸಾಕಷ್ಟು ಪುಷ್ಟಿ ನೀಡಿತ್ತು.

ಮಂದಾರ್ತಿ ಮೇಳದಲ್ಲಿ ಗಾಣಿಗರು ಹೆಚ್ಚು ಪ್ರಸಿದ್ಧರಾದದ್ದು ಕಟ್ಟು ಮೀಸೆಯೊಂದಿಗೆ ಅಟ್ಟೆ ನಿರ್ಮಿತ ಕೇದಲೆ ಮುಂದಲೆಯೊಂದಿಗೆ ಕಂಗೊಳಿಸುವ ಪುರುಷವೇಷಕ್ಕೆ, ಮತ್ತು ಅಪೂರ್ವವೂ ಇಂದು ಅಪರೂಪವೂ ಅಗಿರುವ ಹಾರಾಡಿ ಶೈಲಿಯ ಕಿರುಹೆಜ್ಜೆಯಿಂದ. ಕುಂದಾಪುರದ ಆಡುಬಾಷೆಯಂತೆ 'ಉಂಗುರ ಹಾಕಿ ಉಂಗುರ ತೆಗೆಯಬಹುದಾದ' ಅಚ್ಚುಕಟ್ಟಿನ ರಂಗನಡೆ, ಸಂಪ್ರದಾಯವೆಂದರೆ ಏನೆಂದು ತಿಳಿಯಲು ಗಾಣಿಗರ ವೇಷ ನೋಡಬೇಕು ಅನ್ನುವುದು ವಿಮರ್ಶಕರ ಒಟ್ಟು ಅಭಿಪ್ರಾಯ. ಚುರುಕಿನ ನಾಟ್ಯ ವಿಶಿಷ್ಟವಾದ ಹಾರಾಡಿ ಶೈಲಿಯ ಒಂಟಿ ಕಾಲಿನಲ್ಲಿ ಬಿಲ್ಲುಬಾಣ ಸೊಂಟಕ್ಕೆ ತಾಗಿಸುವ ನಿಲುವು, ವೈಶಿಷ್ಟ್ಯ ಪೂರ್ಣ ನಡೆ, ಪದ್ಯದ ಎತ್ತುಗಡೆ, ಕೈತಟ್ಟಿ ಮಿಂಚಿನಂತೆ ಸೆಳೆಯುವ, ಎಡಗೈ ಮೇಲೆ ಹೋದಾಗ ಎಡಗಣ್ಣು ಅದೇ ಭಂಗಿಯಲ್ಲಿ ತಿರುಗುವ ಅಪೂರ್ವವಾದ ಹಾರಾಡಿ ಶೈಲಿಯ ಏಕತಾಳದ ಪದ್ಯಗಳ ಕಿರುಹೆಜ್ಜೆ. "ದೀಮ್‌ತದ್ದೀಂ ದಿಮಿತದೀಂ" ಮತ್ತು "ದೀಮ್‌ದಿನ್ನ ತಕದಿನ್ನ" ನಡೆಯ ಪದ್ಯಗಳ ಅಪೂರ್ವ ಕಿರುಹೆಜ್ಜೆ ಗಾಣಿಗರ ಸಂಪತ್ತು. ಅಪೂರ್ವವಾದ ಶ್ರುತಿಬದ್ಧತೆ ಅವರ ಇನ್ನೊಂದು ದನಾತ್ಮಕ ಅಂಶ. ಕರ್ಣಾರ್ಜುನ ಅರ್ಜುನ, ವೀರಮಣಿ ಕಾಳಗದ ಪುಷ್ಕಳ ಮೈರಾವಣದ ವಿಭೀಷಣ, ಸೈಂದವ ವದೆಯ ಅರ್ಜುನ ಮುಂತಾದವುಗಳು ಗಾಣಿಗರಿಗೆ ಆ ಕಾಲದಲ್ಲಿ ಖ್ಯಾತಿತಂದಿತ್ತ ಪಾತ್ರಗಳು, ವೀರಭದ್ರ ನಾಯ್ಕರ ಬೀಷ್ಮನಿಗೆ ಪರಶುರಾಮ, ಶಂತನುವಿಗೆ ದೇವವ್ರತ, ರಾಮನಿಗೆ ಭರತ ಮುಂತಾದ ಪಾತ್ರಗಳು ಮಳೆಗಾಲದ ಅನೇಕ ಆಟಗಳಲ್ಲಿ ಪ್ರೇಕ್ಷಕರಿಗೆ ರಸದೌತಣ ನೀಡುತಿತ್ತು. ಸೈಂದವ ವದೆಯಾಗಿ ಬರುವ ಅರ್ಜುನನಿಗೆ ಮಂಗಳಾಂಗಿನಿಯರು ಆರತಿ ಬೆಳಗಿ ಸ್ವಾಗತಿಸುವ ಸಂದರ್ಭದಲ್ಲಿ ಅಭಿಮನ್ಯುವದೆಯ ಅಪಶಕುನದ ಛಾಯೆವನ್ನು ಬಿಂಬಿಸಲು ಆರತಿಯನ್ನು ಎತ್ತಿ ಬಿಸಾಡುವ ಸಂದರ್ಭದಲ್ಲಿ ಆರತಿತಟ್ಟೆ ತಾದ್ಯಾತ್ಮತೆಯಿಂದ ಹಾಡುತಿದ್ದ ಭಾಗವತ ಸದ್ಯ 93 ವರ್ಷದ ಹಿರಿಯ ಭಾಗವತ ಮತ್ಯಾಡಿ ನರಸಿಂಹ ಶೆಟ್ಟರ ತಲೆಯ ಮೇಲೆ ಹಾರಿ ಕೆಳಗೆ ಬಿದ್ದ ಸನ್ನಿವೇಷವನ್ನು ಅವರು ನೆನಪಿಸುತ್ತಾರೆ. ಕೃಷ್ಣಾರ್ಜುನ ಕಾಳಗದಲ್ಲಿ ಹಾರಾಡಿ ರಾಮಗಾಣಿಗರ ಅರ್ಜುನನಿಗೆ, ಕುಷ್ಟ ಗಾಣಿಗರ ಕೃಷ್ಣ, ಜಂಬೂರು ರಾಮಚಂದ್ರ ಶ್ಯಾನುಬೋಗರ ಅಭಿಮನ್ಯು ಸಹ ಆ ಕಾಲದ ಅಪೂರ್ವ ಜೋಡಿಯಾಗಿತ್ತು. ಯಾವುದೇ ಕಲ್ಯಾಣ ಪ್ರಸಂಗದಲ್ಲಿ ಬರುವ ರಾಮಗಾಣಿಗರ ಬಲರಾಮನಿಗೆ ಕುಷ್ಟ ಗಾಣಿಗರಕೃಷ್ಣ ಸಹ ಮರೆಯಲಾಗದ ಜೋಡಿಯಾಗಿತ್ತಂತೆ. ಕುಷ್ಟಗಾಣಿಗರ ಛಾಯೆಯನ್ನು ಮುಂದಿನ ತಲೆಮಾರಿಗೆ ದಾಟಿಸಿದವರಲ್ಲಿ ದಿ. ಶಿರಿಯಾರ ಮಂಜು ನಾಯ್ಕ್, ದಿ. ಮೊಳಹಳ್ಳಿ ಹೆರಿಯ ನಾಯ್ಕರು, ಐರೋಡಿ ಗೋವಿಂದಪ್ಪ ನೀಲಾವರ, ಮಹಾಬಲ ಶೆಟ್ಟಿಕೋಟ ಸುರೇಶ, ಐರಬೈಲು ಆನಂದ ಶೆಟ್ಟಿ ಮತ್ತು ಹಾರಾಡಿ ಸರ್ವೋತ್ತಮಗಾಣಿಗ ಮುಂತಾದವರು ಪ್ರಮುಖರಾಗಿ ನಿಲ್ಲುತ್ತಾರೆ.

ಕಲಾವಿದನಾಗಿ ವ್ಯಕ್ತಿಯಾಗಿ ಸಾದನೆ ಮನ್ನಣೆ ಗಳಿಸಿದ, ಕುಟುಂಬದಲ್ಲಿ ಪ್ರೇಕ್ಷಕವರ್ಗದಲ್ಲಿ ಸಾರ್ವತ್ರಿಕ ಮನ್ನಣೆ ಗಳಿಸಿದ ಇಂತಹ ಉತ್ಕೃಷ್ಟ ಕಲಾವಿದನ ಜೀವನ ಸಾದನೆ ಎಲ್ಲಿಯೂ ದಾಖಲಾಗದಿದ್ದದ್ದು ದೌರ್ಭಾಗ್ಯ, ಮನಸಂತೋಷಕ್ಕಾಗಿ ಕಲೆಯನ್ನು ಆರಾದಿಸಿ ದಂತಕಥೆಯಾದ ಕುಷ್ಟ ಗಾಣಿಗರಿಗೆ ಸಮಕಾಲೀನರಾದ ಅವರಷ್ಟೇ ಯೋಗ್ಯತೆ ಇರುವ ಹಾರಾಡಿ ರಾಮಗಾಣಿಗ ಮತ್ತು ಮಟಪಾಡಿ ವೀರಭದ್ರ ನಾಯಕರಷ್ಟು ಪ್ರಸಿದ್ಧಿ ಪ್ರಶಸ್ತಿ ಇವರಿಗೆ ಬರಲಿಲ್ಲ ಅನ್ನುವುದು ಸಹಾ ಅಷ್ಟೇ ಸತ್ಯ. ಅದಕ್ಕೆ ಅವರಿಗೆ ಇಲ್ಲದ ಜನಬಳಕೆಯೂ ಒಂದು ಕಾರಣವಾಗಿರಬಹುದು. ಜೀವಂತ ಇರುವಾಗಲೇ ಆಗಬೇಕಿದ್ದ ಅವರ ಕುಣಿತದ ಶೈಲಿ, ಒಂಟಿ ಕಾಲಲ್ಲಿ ಬಿಲ್ಲು ಹಿಡಿದು ನಿಲ್ಲುವ ಅವರ ನಡುತಿಟ್ಟಿನ ವಿಶಿಷ್ಟ ಶೈಲಿ, ಬಡಗುತಿಟ್ಟಿನಲ್ಲಿ ಛಾಲ್ತಿ ಇರುವ ನಾಮ ಮುಖವರ್ಣಿಕೆ ಕೇದಗೆ ಮುಂದಲೆಕಟ್ಟೋಣ ಕಟ್ಟು ಮೀಸೆಗಳ ವೇಷಗಳನ್ನು ದಾಖಲಿಕರಣ ಮಾಡಿ ಪುಸ್ತಕರೂಪವಾಗಿ ಪ್ರಕಟಿಸುವ ಕರ್ನಾಟಕ ಯಕ್ಷಗಾನ ಅಕಾಡೆಮಿ ಮತ್ತು ಕನ್ನಡ ಸಂಸ್ಕೃತಿ ಇಲಾಖೆಯ ಯೋಚನೆ ಯೋಜನೆ ನಿಜವಾಗಿಯೂ ಯೋಗ್ಯವಾದದ್ದು. ಅದೂ ಗಾಣಿಗರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಅವರಿಗೆ ಸಲ್ಲಿಸುವ ಗೌರವ ಪೂರ್ಣ ಶ್ರದ್ಧಾಂಜಲಿಯಾಗಿದೆ, ಈ ನಿಟ್ಟಿನಲ್ಲಿ ಅಕಾಡೆಮಿಯ ಅಧ್ಯಕ್ಷರೂ ಸರ್ವ ಸದಸ್ಯರೂ ಅಭಿನಂದನೀಯರು.

ಈ ಗ್ರಂಥ ಸಂಪಾದಿಸುವಲ್ಲಿ ಸಹಕರಿಸಿದವರು ಅನೇಕರು. ಬಯಲಾಟ ಅಕಾಡೆಮಿ ಅಧ್ಯಕ್ಷ ಬೆಳಗಲ್ಲು ವೀರಣ್ಣ ಅವರಿಗೆ ನಾನು ಚಿರಋಣಿ. ಸೂಕ್ತ ಮಾರ್ಗದರ್ಶನ ನೀಡಿದ ಸದಸ್ಯ ಸಂಚಾಲಕರಾದ ಪಿ. ಕಿಶನ್ ಹೆಗ್ಡೆ ಮತ್ತು ಅಂಬಾತನಯ ಮುದ್ರಾಡಿಯವರಿಗೆ ನಾನು ಆಬಾರಿಯಾಗಿದ್ದೇನೆ, ಕ್ಲಪ್ತ ಸಮಯದಲ್ಲಿ ಲೇಖನಗಳನ್ನು ನೀಡಿದ ವಿವಿದ ಲೇಖಕರಿಗೂತಮ್ಮ ಅನುಭವಗಳನ್ನು ಹಂಚಿದ ಕಲಾವಿದ ಮಿತ್ರರಿಗೂ, ಗಾಣಿಗರ ಭಾವಚಿತ್ರಗಳನ್ನು ನೀಡಿದ ಶ್ರೀನಿವಾಸ ಗಾಣಿಗ, ಸುದೇಶ ಶೆಟ್ಟಿಯವರಿಗೂ ಕೃತಜ್ಞತೆಗಳು. ಅಂದವಾಗಿ ಮುದ್ರಿಸಿ ಕೊಟ್ಟ ಭಾರತ್ ಪ್ರಿಂಟರ್ಸ್ ಇವರಿಗೂ ಧನ್ಯವಾದಗಳು. ಓದುಗರ ಅಭಿಪ್ರಾಯಗಳಿಗೆ ಮುಕ್ತ ಸ್ವಾಗತ.

ಯಕ್ಷಗಾನಂ ಗೆಲ್ಗೆ–ಬಾಳ್ಗೆ

**ಪ್ರೊ. ಎಸ್. ವಿ. ಉದಯಕುಮಾರ ಶೆಟ್ಟಿ ಮಣಿಪಾಲ**

ಸಂಪಾದಕ

## ಪರಿವಿಡಿ


1. ಯಕ್ಷಗಾನದ ಪುರುಷವೇಷದಾರಿ ಹಾರಾಡಿ ಕುಷ್ಟ ಗಾಣಿಗ – 7

2. ಬಡಗುತಿಟ್ಟಿನ ಪ್ರಸಿದ್ದ ಪುರುಷವೇಷದಾರಿ ಹಾರಾಡಿ ಕುಷ್ಟ ಗಾಣಿಗ – 11

3. ಹಾರಾಡಿ ಕೃಷ್ಣಗಾಣಿಗರು – 13

4. ಹಾರಾಡಿ ಕುಷ್ಟ ಗಾಣಿಗ–ನಾ ಕಂಡಂತೆ – 15

5. ಅಬಿಜಾತ ಕಲಾವಿದ ಹಾರಾಡಿ ಕುಷ್ಟ ಗಾಣಿಗರು – 17

6. ನನ್ನ ಗುರುಗಳು–ಹಾರಾಡಿ ಕುಷ್ಟ ಗಾಣಿಗರು – 18

7. ಕುಷ್ಟ ಗಾಣಿಗರನ್ನು ಕುಣಿಸಿದ ಹೆಮ್ಮೆಇದೆ – 20

8. ಹಾರಾಡಿ ಕುಟುಂಬದೊಂದಿಗೆ ಅನ್ಯೋನ್ಯತೆ ಇದೆ – 20

9. ಹಾರಾಡಿ ಕುಟುಂಬದಲ್ಲಿ ಜನಿಸಿದ ಬಗ್ಗೆ ಹೆಮ್ಮೆ ಇದೆ – 20

10. ನಾನು ಕಂಡಂತೆ ನನ್ನಅಜ್ಜ – 21

11. 2011ರಲ್ಲಿ ಹಂದಾಡಿ ದಿ। ಸುಬ್ಬಣ್ಣ ಭಟ್ಟರು ಬರೆದ ಲೇಖನ – 23

12. ಯಕ್ಷಗಾನದ ಕೋಲ್ಮಿಂಚು ಹಾರಾಡಿ ಕೃಷ್ಣ ಗಾಣಿಗ – 42

13. ಮಗನ ಪಾದಕ್ಕೆರಗಿದ ತಂದೆ – 44

14. ಸಾಹಿತ್ಯ ಕುಣಿಯುವ ಕುಷ್ಟ – 47

# ಯಕ್ಷಗಾನದ ಪುರುಷವೇಷದಾರಿ ಹಾರಾಡಿ ಕುಷ್ಟ ಗಾಣಿಗ



ಉಡುಪಿ ತಾಲೂಕು ಬ್ರಹ್ಮಾವರದ ಪಡುದಿಶೆಯ ಗ್ರಾಮ ಹಾರಾಡಿ, ಮೂಡು ದಿಶೆಯ ಊರು ಮಟಪಾಡಿ. ಈ ಎರಡು ಹಳ್ಳಿಗಳು ಯಕ್ಷಗಾನದ ಎರಡುತಿಟ್ಟು ಮಟ್ಟು ಶೈಲಿಗಳ ಉಗಮಸ್ಥಾನ. ತಮ್ಮ ತಮ್ಮ ಹುಟ್ಟೂರಿನ ಹೆಸರಿನಿಂದಲೇ 70–8 ವರ್ಷಗಳ ಹಿಂದೆ ಹಾರಾಡಿತಿಟ್ಟು ಮತ್ತು ಮಟ್ಪಾಡಿತಿಟ್ಟು ಎನ್ನುವ ಪ್ರಬೇದವಾಗಿ ಮೆರೆಯುತಿದ್ದವು, ಈ ಎರಡು ಶೈಲಿಗಳಲ್ಲಿ ಯಾವುದು ಮೇಲು ಯಾವುದು ಕೆಳಗೆ ಎನ್ನುವಂತಿಲ್ಲ. ಇವೆರಡೂ ತಮ್ಮದೇ ಆದ ಬಿನ್ನ ಭಿನ್ನ ವೈಶಿಷ್ಯಗಳಿಂದ ಜನಮನ ರಂಜಿಸಿದ್ದವು. ಹಾರಾಡಿ ರಾಮಗಾಣಿಗರ ಹಿರಿಯರಿಂದ ಆರಂಭವಾದ ಈ ಶೈಲಿ ಹಾರಾಡಿತಿಟ್ಟು ಎಂದು ಪ್ರಸಿದ್ದವಾಯಿತು, ನಿದಾನ ಲಯಗಾರಿಕೆ, ಗಂಬೀರ ಹೆಜ್ಜೆಗಾರಿಕೆ, ಸುಂದರ ವೇಷಗಾರಿಕೆ, ಶ್ರುತಿಬದ್ದ ಮಾತುಗಾರಿಕೆ, ಪದ್ಯಎತ್ತುಗಡೆ, ಮಿತವಾದ ಮಾತುಗಾರಿಕೆ ಇದರ ಹೆಚ್ಚುಗಾರಿಕೆ. ಗುರು ವೀರಭದ್ರ ನಾಯ್ಕರಿಂದ ರಂಗಕ್ಕೆ ಬಂದ ಇನ್ನೊಂದು ಶೈಲಿ ಮಟಪಾಡಿತಿಟ್ಟು ಎಂದೆನಿಸಿತ್ತು. ಚುರುಕುಗತಿಯ ತಾಳ ಲಯ, ಕಿರುಹೆಜ್ಜೆ, ಚಾಲುಕುಣಿತ ಛಾಲ್ತಿಯಲ್ಲಿ ಇಲ್ಲದ ಹೊಸ ಪ್ರಸಂಗಗಳ ಪ್ರಯೋಗ, ಇವು ಈ ಶೈಲಿಯ ವೈಶಿಷ್ಯ. ಎರಡೂ ಶೈಲಿಯ ಪ್ರಮುಖರಾದ ಹಾರಾಡಿ ರಾಮಗಾಣಿಗ ಮತ್ತು ಮಟಪಾಡಿ ವೀರಭದ್ರ ನಾಯ್ಕರು ರಾಷ್ಟ್ರಪ್ರಶಸ್ತಿ ಪುರಸ್ಕ್ರತರು ಎನ್ನುವುದು ಗಮನಾರ್ಹ.

ರಂಗಸ್ಥಳದ ರಾಜನಾಗಿ ಮೆರೆದ ಹಾರಾಡಿ ರಾಮಗಾಣಿಗರ ಹತ್ತಿರದ ಸಂಬಂದಿ ಹಾರಾಡಿ ಕ್ರಷ್ಣಗಾಣಿಗರು ಯಕ್ಷಗಾನ ವಲಯದಲ್ಲಿ ಕುಷ್ಟ ಗಾಣಿಗರೆಂದೇ ಪ್ರಸಿದ್ದರು. ಇವರೀರ್ವರ ಎರಡನೇ ವೇಷ ಮತ್ತು ಪುರುಷ ವೇಷ ಮನೆಮಾತಾಗಿತ್ತು. ಗಾಣದಿಂದ ಎಣ್ಣೆ ತೆಗೆಯುವ ವ್ರತ್ತಿ ಇವರ ಹಿರಿಯರದ್ದು. ರಂಗಸ್ಥಳದಲ್ಲಿ ಸುದನ್ವನೋಜಯಂತನೋ ಆಗಿ ಮೆರೆಯುತಿದ್ದ ಇವರ ವಾಸ ಹುಲ್ಲಿನ ಗುಡಿಸಲು. ಕಡು ಬಡತನದ ಬದುಕು ನಡೆಸುತಿದ್ದ ಗಾಣಿಗರು ಶ್ರೀಮಂತ ಬಂಟ ದನಿಗಳ ಗೇಣಿದಾರರಾಗಿ ಬೇಸಾಯವನ್ನು ಮಾಡುತಿದ್ದರು, ಈಗಿನಂತೆ ಪರಿಸರದಲ್ಲಿ ಶಾಲಾ ಕಾಲೇಜುಗಳು ಇಲ್ಲದ ಕಾಲವದು. ದೂರದ ಪ್ರಾಥಮಿಕ ಶಾಲೆಯಲ್ಲಿ ಅಕ್ಷರ ಅಭ್ಯಾಸ ಮಾಡಿದವರಷ್ಟೇ ಜೀವನೋಪಾಯಕ್ಕಾಗಿ ಬಾಲ್ಯದಲ್ಲೇ ಮೇಳ ಸೇರಿ ಹಂತ ಹಂತವಾಗಿ ಮೇಲೇರಿದ ಕಲಾವಿದರು. ಪ್ರಸಿದ್ದ ಸ್ತ್ರೀವೇಷದಾರಿ ನಾರಾಯಣ ಗಾಣಿಗರು ಇವರ ಖಾಸಾ ಸಹೋದರರು, ಒಟ್ಟಾಗಿ ಒಂದೇ ಮೇಳ ಸೇರಿತಿರುಗಾಟ ಮಾಡಿದ್ದೇ ಹೆಚ್ಚು, ಮೇಳ ಸೇರಿ ಯಕ್ಷಗಾನ ತರಬೇತಿ ಪಡೆಯುತಿದ್ದ ಇವರಿಗೆ ಮಟಪಾಡಿ ಮುಕುಂದ ನಾಯಕರ ಗುರುತ್ವ ಮಾರ್ಗದರ್ಶನ ದೊರೆಯಿತು. ವೀರಭದ್ರ ನಾಯಕ್ ಶ್ರೀನಿವಾಸ ನಾಯಕ್, ಕುಷ್ಟ ಗಾಣಿಗರು ಮುಕುಂದ ನಾಯ್ಕರಿಂದ ತರಬೇತಿ ಪಡೆದವರು. ಮೂವರ ಹೆಜ್ಜೆಗಾರಿಕೆ ಅತ್ಯಂತ ಸುಂದರವಾದದ್ದು. ಕುಷ್ಟಗಾಣಿಗರ ನೃತ್ಯ ಅದಕ್ಕೂ ಮಿಗಿಲು ಕಾರಣ ಅವರಿಗೆ

ದೈವದತ್ತವಾಗಿ ಬಂದ ಮೈಕಟ್ಟು, ಸುಂದರ ಆಳಂಗ ದೇಹ ಬಾಷೆ, ಇತ್ಯಾದಿ. ಮೇಲಾಗಿ ಕೇದಗೆ ಮುಂದಲೆ, ಕೆಂಪು ಮುಂಡಾಸು ರಚನೆಯ ವೈಖರಿ, ಶ್ರುತಿಬದ್ದ ಮಾತುಗಾರಿಕೆ, ಏರುಸ್ವರ, ರಸಾಭಿವ್ಯಕ್ತಿ ರಂಗ ನಡೆಯ ಝಾಪು ಚಾಪು ವರ್ಣಿಸಲಸದಳ. ಹೀಗಾಗಿ ತಮ್ಮ ನಿವೃತ್ತಿಯವರೆಗೂ ಜೋಡಿಲ್ಲದ ಪುರುಷ ವೇಷದಾರಿಯಾಗಿ ರಂಗದಲ್ಲಿ ಮೆರೆದಾಡಿದ ಕಲಾವಿದರಿವರು, ತಲೆಯ ಮೇಲಿನ ಶಿರೋಭೂಷಣದಿಂದ ಮೈ ಕೈಗಳ ಆಭರಣಗಳು ಯಾವುದೂ ಕಟ್ಟಿ ಕೊಂಡವುಗಳು ಎಣಿಸುವುದಿಲ್ಲ, ಬದಲು ಹುಟ್ಟಿ ಬಂದವುಗಳು ರಾತ್ರಿ ಇಡೀ 2–3 ವೇಷಗಳನ್ನು ಮಾಡಿ ಬೆಳಿಗ್ಗೆ ಹೋಟೆಲ್‌ನಲ್ಲಿ ಚಾ ತಿಂಡಿ ಮುಗಿಸಿ 9–10 ಮೈಲು ನೆಡೆದುಕೊಂಡೇ ಸಾಗಿ ಮುಂದಿನ ಆಟ ಆಡಿಸುವವರ ಮನೆ ಸೇರಬೇಕು. ಮದ್ಯಾಹ್ನ ಕುಚ್ಚಿಗೆ ಅಕ್ಕಿ ಅನ್ನ ಕುಂಬಳ ಹುಳಿ ನೀರುಳ್ಳಿ ಬೆಳ್ಳುಳ್ಳಿ ಗೊಜ್ಜು ತೆಂಗಿನೆಣ್ಣೆ ನೀರು ಮಜ್ಜಿಗೆ ಊಟ. ಸಂಜೆ ಆರು ಗಂಟೆಗೆ ಅದೇ ಊಟ. ಹಾಲು ಮೊಸರು ತಿರುಗಾಟದಲ್ಲಿ ಇಲ್ಲವೇ ಇಲ್ಲ. ಹಗಲು ಮಲಗಲು, ಸ್ನಾನದ ವ್ಯವಸ್ಥೆ ಹೇಳತೀರದು. ಈ ಎಲ್ಲಾ ಪ್ರತಿರೋದಗಳ ಮದ್ಯೆ ತಮ್ಮ ಆರೋಗ್ಯ ಕಾಪಾಡಿಕೊಂಡು ರಾತ್ರಿ 2–3 ಪಾತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಕಲಾವಿದರಿವರು. ಆ ಕಾಲದಲ್ಲಿ ಆಡಿಸುವ ಯಜಮಾನ ಹೇಳಿದ ಪ್ರಸಂಗವಾಗಬೇಕು, ಅಂದು ಇಂದಿನ ಹಾಗೆ ಪಾತ್ರ ಹಂಚಿಕೆ ಮಾಡುವ ಕ್ರಮ ಇರಲಿಲ್ಲ. ಕಲಾವಿದರು ಪ್ರತಿ ಪ್ರಸಂಗದಲ್ಲಿ ಯಾವ್ಯಾವ ವೇಷ ಮಾಡಬೇಕೆಂಬ ಅಲಖಿತ ನಿಯಮದಂತೆ ತಮ್ಮ ತಮ್ಮ ವೇಷಗಳನ್ನು ನಿರ್ವಹಿಸುವ ಬದ್ದತೆ ಉಳ್ಳವರಾಗಿದ್ದರು. ಸುಧನ್ವ ಕಾಳಗದ ಸುಧನ್ವ ಕರ್ಣಾರ್ಜುನದ ಅರ್ಜುನ ವಿದ್ಯುನ್ಮತಿಯ ಜಯಂತ ಚಿತ್ರಕೇತು, ರತ್ನಾವತಿಯ ದ್ರಡವರ್ಮ ವತ್ಸಾಕ್ಯ ವೀರಣಿಯ ಪುಷ್ಕಳ ಬೀಷ್ಮ ವಿಜಯದ ಪರಶುರಾಮ ವೇಷಗಳು ಪುರುಷ ವೇಷದಾರಿಗಳಿಗೆ  ಮೀಸಲು. ಈ ಎಲ್ಲಾ ವೇಷಗಳಲ್ಲಿ ಸಿದ್ದಿ ಪ್ರಸಿದ್ದಿ ಪಡೆದವರು ಕುಷ್ಟ ಗಾಣಿಗರು. ಕೆಂಪು ಮುಂಡಾಸಿನ ಕೌಂಡ್ಲೀಕ, ತಾಮ್ರದ್ವಜ, ಅಂಗಾರವರ್ಣ, ಎಲ್ಲವೂ ಅತ್ಯಾಕರ್ಷಕ. ಅಂಗಾರವರ್ಣನಂತ ಪಾತ್ರಗಳ ಜಲಕ್ರೀಡೆಕೋಲಾಟ, “ಕಂತುಪಿತನಕರಿರೇ” ಪದ್ಯದಜಲಕ್ರೀಡೆ ಮನಮೋಹಕವಾಗಿದ್ದವು. ಒಂಟಾಟವಿರಲಿ, ಜೋಡಾಟವಿರಲಿ ಕುಷ್ಟ ಗಾಣಿಗರ ವೇಷಗಳ ಮಿಂಚಿನ ಪ್ರವೇಶ, ಪದ ಎತ್ತುಗಡೆ, ಕುಣಿತಗಳನ್ನು ಪ್ರೇಕ್ಷಕರು ಬಲು ಕುತೂಹಲದಿಂದ ನಿರೀಕ್ಷಿಸುತಿದ್ದರು, ಕೀಚಕವದೆಯವಲಲನ ಗರ್ಜನೆ ಕೇಳಿಯೇ ಜನ ಖುಷಿ ಪಡುತಿದ್ದರು, ಸುದನ್ವನಾಗಿ “ಜವನಾತ್ಮಜನ. ತಾಯೆ ಕೇಳ್ ಶ್ರೀ ಕ್ರಷ್ಣ . ಜಯಂತನಾಗಿ ಬಿಸಜ ಗಂದಿನಿ ಕೇಳು . ಕೇಳು ಗಂದರ್ವೇಶ ನೀನು ಪರಶುರಾಮನಾಗಿ ಕರಗಳ ಜೋಡಿಸಿ ಅರ್ಜುನನಾಗಿ “ಇಷ್ಟರ ಬಲುಮೆ ಇವು ಪದ್ಯ ಎತ್ತುಗಡೆಯ ಕೆಲವು ಮಾದರಿ

ಐರಾವತದ ಇಂದ್ರಕೀಲಕದ ಅರ್ಜುನ, ಜಯದ್ರಥ ವದೆಯ ಅರ್ಜುನ ಗಾಣಿಗರಂತೆ ನಿರ್ವಹಿಸಿದ ಕಲಾವಿದರನ್ನು ನಾನು ನೋಡಿಲ್ಲ. ದಿ. ಪಾಂಡೇಶ್ವರ ಪುಟ್ಟಯ್ಯನವರು ಈ ವೇಷಗಳನ್ನು ಚೆನ್ನಾಗಿ ನಿರ್ವಹಿಸುತಿದ್ದರು ಎಂದು ತಂದೆ ರಾಮದೇವ ಹಂದೆಯವರು ಹೇಳುತಿದ್ದರು. ದಿ. ಮೊಳಹಳ್ಳಿ ಹೆರಿಯ ನಾಯ್ಕರು ಕುಷ್ಟ ಗಾಣಿಗರ ನೆನಪು ಮಾಡುತಿದ್ದರು.

ಅಂದು ಕುಣಿತದಲ್ಲಿ ಕುಷ್ಟ ಗಾಣಿಗರಿಗೆ ಇದಿರಾಗಿ ನಿಲ್ಲುವ ಯೋಗ್ಯತೆ ವೀರಭದ್ರ ನಾಯಕರಿಗೆ ಮಾತ್ರಸಿದ್ದಿಸಿತ್ತು. ಹಾಗಾಗಿ ಜೋಡಾಟಗಳಲ್ಲಿ ತಾವು ಎರಡನೆ

ವೇಷಧಾರಿಗಳಾಗಿದ್ದರೂ ಕುಷ್ಟ ಗಾಣಿಗರ ಎದುರು ಪುರುಷವೇಷ ದಾರಿಯಾಗಿಯೇ ಕಾಣಿಸಿಕೊಳ್ಳುತ್ತಿದ್ದರು. ಅವರೀರ್ವರ ಸ್ಪರ್ಧಾತ್ಮಕ ಕುಣಿತಗಳು ಬಲು ರೋಚಕ ವಾಗಿದ್ದವು. ಅಂತಹ ಸಂದರ್ಭ ಕುಷ್ಟ ಗಾಣಿಗರ ಪೂರ್ಣತಾಕತ್ತು ಏನು ಎಂದು ಪ್ರಕಟಗೊಳ್ಳುತಿತ್ತು, ಸಹೋದರ ನಾರಾಯಣ ಗಾಣಿಗರ ಕೃಷ್ಣ ಕುಷ್ಟ ಗಾಣಿಗರ ಅರ್ಜುನ ಇದಿರು ಮೇಳದಲ್ಲಿ ಸ್ಪರ್ದೆಗೆ ನಿಲ್ಲುವವರು ಮಾರ್ಗೋಳಿ ಗೋವಿಂದ ಸೇರೆಗಾರರ ಕೃಷ್ಣ ವೀರಭದ್ರ ನಾಯ್ಕರ ಅರ್ಜುನ "ಯಾದವೋತ್ತಮ ಕೇಳು' ಪದ್ಯಕ್ಕೆ ಜೋಡಿ ಕುಣಿತ ವರ್ಣಿಸಲಸದಳ. ಆ ಸನ್ನಿವೇಷವನ್ನು ನೋಡದ ಯಕ್ಷಗಾನಾಸಕ್ತರು ವಂಚಿತರೆಂದೇ ಹೇಳಬೇಕು.

ಅಂದಿನ ಅಮ್ರತೇಶ್ವರಿ ಸೌಕೂರು ಮಂದರ್ತಿ ಮಾರಣಕಟ್ಟೆ ಮೇಳಗಳಲ್ಲಿ ತಿರುಗಾಟ ಮಾಡಿದ ನಂತರ ಕೆಲವು ಕಾಲ ಅಮೃತೇಶ್ವರಿ ಮೇಳದ ಯಜಮಾನಿಕೆಯನ್ನೂ ಮಾಡಿದ್ದರು. ಕಷ್ಟ ನಷ್ಟ ಅನುಭವಿಸಿದ್ದರು. ಇವರಕೇದಗೆ ಮುಂದಲೆ ವೇಷ ಬಲು ಮೋಹಕ, ಜೋಡಾಟಗಳಲ್ಲಿ ಕೆಲವು ಬಾರಿ ಮೂರೂ ಪ್ರಸಂಗಗಳಲ್ಲಿ ಇವರಿಗೆಕೇದಗೆ ಮುಂದಲೆ ವೇಷಗಳೇ ಬಂದರೆ ಇವರು ಸಂತೋಷ ಪಡುತಿದ್ದರು. ಅಂತಹ ಸಂದರ್ಭಜಯಂತನ ವೇಷಕ್ಕೆ ಕದಗೆ ಮುಂದಲೆ, ಕರ್ಣಾರ್ಜುನದಲ್ಲಿ ಕಪ್ಪು ಕೇದಗೆ ಮುಂದಲೆ ದರಿಸಿ ಎದುರು ಮೇಳವನ್ನು ಮಾತ್ರವಲ್ಲ ಜೋಡಾಟದ ಅಭಿಮಾನಿಗಳನ್ನು ಮಂತ್ರಮುಗ್ದರನ್ನಾಗಿಸುವ ಜೋಡಾಟದ ಹಿಕ್ಮತ್ತು ತೋರಿಸುತಿದ್ದರು. ಗಾಣಿಗರ ಹುಡುಗಾಟದ ಅಭಿಮನ್ಯು ಬಬ್ರುವಾಹನನ ವೀರಾವೇಷ ಅಂದು ಮನೆ ಮಾತಾಗಿತ್ತು. ಮೂರನೇ ವೇಷಗಳ ಮಂಡಿತಿರುಗುವುದರಲ್ಲೂ ಇವರಿಗೆ ಸರಿಸಾಟಿಇಲ್ಲ.

ಒಂಟಾಟದಲ್ಲಿ ಕರ್ಣಾರ್ಜುನದಲ್ಲಿ ಕೃಷ್ಣಅರ್ಜುನ ಪ್ರವೇಶ ವ್ರಷಸೇನ ಬೀಮನನ್ನು ಸೋಲಿಸಿದ ಮೇಲೆ ಕಾತರಿಸಿ ಕಲಿಬೀಮ ಶಸ್ರದ ಪದ್ಯಕ್ಕೆ, ಆದರೆ ಜೋಡಾಟದಲ್ಲಿ ರುದ್ರಬೀಮನಪಂಥಾಹ್ವಾನವಿತ್ತಾಗ ಕೃಷ್ಣಅರ್ಜುನರ ಪ್ರವೇಶ. ಒಮ್ಮೆ ಜೋಡಾಟದಲ್ಲಿ ಅಣ್ಣತಮ್ಮಂದಿರು ದುಶ್ಯಾಸನ ರಣರಂಗಕ್ಕೆ ಪ್ರವೇಶವಾದೊಡನೆ "ಅರಿಯ ಬರವನು" ಅನ್ನುವ ಪದ್ಯಕ್ಕೆ ದಿಡೀರನೆ ಪ್ರವೇಶ ನೀಡಿತಮ್ಮ ಮೇಳದ ಹಿಮ್ಮೇಳವನ್ನು ತಳಮಳಗೊಳಿಸಿದ್ದಲ್ಲದೆ ಸಮಸ್ತ ಪ್ರೇಕ್ಷಕರನ್ನು ಸೆಳೆಯುವಲ್ಲಿ ಸಫ್ಲಲರಾದರು. ಇದು ಉದಾಹರಣೆಯಷ್ಟೆ.

ಒಮ್ಮೆ ಬೆಂಗಳೂರಿನ ಅಶೋಕ ಹೋಟೆಲಿನಲ್ಲಿ ವಿದೇಶಿಯರಿಗಾಗಿ ಮುಕ್ಕಾಲು ತಾಸಿನ ಸಮಯ ಮಿತಿಯ ಯಕ್ಷಗಾನಕ್ಕೆ ವ್ರತ್ತಿಯಿಂದ ನಿವ್ರತ್ತಿಯಾದ ಗಾಣಿಗರನ್ನು ಕರೆದುಕೊಂಡು ಹೋಗಿದ್ದೆ, ಅಲ್ಲಿನ 4ನೇ ಮಾಳಿಗೆಯಲ್ಲಿ ಚೌಕಿ. 2ನೇ ಮಾಳಿಗೆಯಲ್ಲಿ ಪ್ರದರ್ಶನ.5ನೇ ಮಾಳಿಗೆಯಲ್ಲಿ ಉಪಹಾರ. ಮೇಲೆ ಕೆಳಗೆ ಇಳಿದಾಡುವುದರಲ್ಲೇ ಸುಸ್ತು. ಮೇಕಪ್ಪಿಗೆ ಮುಕ್ಕಾಲು ಗಂಟೆ. ಗಡಿಬಿಡಿ ವೇಷ ತಯಾರಾಗಲಿಲ್ಲ ವ್ಯವಸ್ಥಾಪಕರೊಬ್ಬರು ನಡುಗುವ ಕೈಯಲ್ಲಿ ಬಣ್ಣ ಹಚ್ಚಿಕೊಳ್ಳುತಿದ್ದ ಗಾಣಿಗರಲ್ಲಿ "ಸ್ವಾಮಿ ಅಟ್ಟೆಕಟ್ಟೇದಗೆ ಮುಂದಲೆ ವೇಷ ಮಾಡದಿದ್ದರೆ ತೊಂದರೆ ಇಲ್ಲ ಕಿರೀಟ ಇಟ್ಟು ಮಾಡಿ. ವಿದೇಶಿ ಜನರಿಗೆ ಸಂಪ್ರದಾಯ ಶೈಲಿ ಅರ್ಥವಾಗುವುದಿಲ್ಲ" ಎಂದರು. ಆಗ ಗಾಣಿಗರು ಇದುವರೆಗೆ ಈ ಕಲಾದೇವಿಯ ಅನುಗ್ರಹದಿಂದಲೇ ಅನ್ನಉಂಡವನು ನಾನು. ಅಪಾರ ಗೌರವವನ್ನೂ ಪಡೆದವನು ಇಲ್ಲಿಗೆ ಬಂದು ಈ ಮುದಿತನದಲ್ಲಿ ಪರಂಪರೆಗೆ ಅಪಚಾರ ಮಾಡಲಾರೆ.

ಸಮಯಕ್ಕೆ ಸರಿಯಾಗಿ ನನ್ನ ವೇಷ ಬಂದರಾಯ್ತಲ್ಲ ಎಂದು ಎಂದು ನಡುಗುವ ಕೈಯಲ್ಲಿ ಅಟ್ಟೆಕಟ್ಟಿ ಹುಲ್ಲುಜಡೆ ಬಿಗಿದು ಸುಂದರ ಕೇದಗೆ ಮುಂದಲೆ ರಚಿಸಿದ ಹಿರಿಯರಿವರು. ಅಂದಿನ ಕಲಾನಿಷ್ಠೆ, ಪರಂಪರೆಯ ಮೇಲಿನ ಬದ್ಧತೆಇಂದು ಎಷ್ಟು ಮಂದಿಗಿದೆ? ಹಾರಾಡಿತಿಟ್ಟು ಮಟ್ಟು ಮಾಯವಾದದ್ದು ಮಾತ್ರವಲ್ಲ ಅಂದಿನ ವೇಷಭೂಷಣಗಳ ಮಾದರಿಯೂ ಇಲ್ಲವಾಗಿದೆ. ನೆರಿಯುಡುಗೆ ಇಲ್ಲದ ಕೃಷ್ಣ, ಬಣ್ಣದ ವೇಷದ ವೃತ್ತಾಕಾರದ ಎದೆಕಟ್ಟು, ಸಮತಲವಾದ ಭುಜಕೀರ್ತಿ ನೋಡುವ ಕಾಲ ಬಂದಿದೆ. ಅಂದಿನ ನೈಜ ಯಕ್ಷಗಾನವನ್ನು ನೋಡಿದ ಕಲಾಸಕ್ತರಿಗೆ , ಚಪ್ಪಾಳೆ ಸಿಳ್ಳುಗಳ ಹಿಂದೆ ಹೋಗದೆ ಹಿಂದಿನ ಪರಂಪರೆಯನ್ನು  ನೆನಪಿಸುವ ಕೆಲವು ಕಲಾವಿದರು ಬೆರಳೆಣಿಕೆಯಲ್ಲಿ ಇಂದೂ ಇದ್ದರು ಎನ್ನುವುದು ಸಮಾದಾನಕರ. ಆದರೆ ಹಾರಾಡಿ ರಾಮಗಾಣಿಗ ಕೃಷ್ಣಗಾಣಿಗರಂತ ಎರಡನೇ ವೇಷ, ಪುರುಷ ವೇಷ ಕಾಣುತ್ತಿಲ್ಲ. ಮುಂದೆ ಆ ಯೋಗ ಬಂದೀತು ಎಂದು ಆಶಿಸೋಣ

**ಎಚ್. ಶ್ರೀಧರ ಹಂದೆ**
ಸಂಚಾಲಕರು
ಸಾಲಿಗ್ರಾಮಮಕ್ಕಳ ಮೇಳ
ಪಟೇಲರ ಮನೆ, ಕೋಟ–576221

# ಬಡಗುತಿಟ್ಟಿನ ಪ್ರಸಿದ್ಧ ಪುರುಷವೇಷದಾರಿ ಹಾರಾಡಿ ಕುಷ್ಟ ಗಾಣಿಗ


(ದಿ)ವೀರಭದ್ರ ನಾಯಕ್ (ದಿ)ಕುಷ್ಟ ಗಾಣಿಗ (ದಿ)ಸಂಜೀವ ಗಾಣಿಗ

ಬಡಗುತಿಟ್ಟಿನಲ್ಲಿ ಪ್ರಸಂಗದ ಮುಖ್ಯ ಪಾತ್ರ ನಿರ್ವಹಿಸುವವನಿಗೆ ಎರಡನೆ ವೇಷದಾರಿ ಎಂತಲೂ ನಂತರದ ಪ್ರಮುಖ ವೇಷಗಳನ್ನು ಮಾಡುವವರಿಗೆ ಪುರುಷ ವೇಷದಾರಿ ಎಂತಲೂ, ಕ್ರಷ್ಣ ಬಬ್ರುವಾಹನ ಅಭಿಮನ್ಯು ಮುಂತಾದ ಪಾತ್ರಗಳನ್ನು ನಿರ್ವಹಿಸುವವರಿಗೆ ಪುಂಡು ವೇಷದಾರಿ ಎಂದು ಕರೆಯುವುದು ಲಾಗಾಯ್ತಿನಿಂದಲೂ ಬಂದರೂಡಿ. ಈ ನಿಟ್ಟಿನಲ್ಲಿ ಹಾರಾಡಿ ಕುಷ್ಟ ಗಾಣಿಗರು ಪುರುಷ ವೇಷದಾರಿಯಾಗಿ ಪ್ರಸಿದ್ದರು.

ಸಾಮಾನ್ಯವಾಗಿ ಕರ್ಣಾರ್ಜುನದ ಅರ್ಜುನ, ಸುದನ್ವಕಾಳಗ, ಇಂದ್ರಕೀಲಕ ಚಿತ್ರಸೇನ ಕಾಳಗ ದ್ರೌಪದಿಪ್ರತಾಪದ ಅರ್ಜುನ, ರುಕ್ಮಿಣಿಕಲ್ಯಾಣ ಜಾಂಬವತಿಕಲ್ಯಾಣ ಪಾರಿಜಾತ ಸುಭದ್ರಾಕಲ್ಯಾಣದ ಕ್ರಷ್ಣ, ಕೌಂಡ್ಲೀಕ ಮೈರಾವಣ ಕಾಳಗದ ವಿಭೀಷಣ ಮುಂತಾದವುಗಳು ಗಾಣಿಗರ ಪ್ರಸಿದ್ದ ವೇಷಗಳು. ತಮ್ಮ ಸಾಂಪ್ರದಾಯಬದ್ದ ಹೆಜ್ಜೆ, ಲಾಲಿತ್ಯಪೂರ್ಣ ನ್ರತ್ಯ ಶ್ರುತಿಬದ್ದ ಮಾತುಗಾರಿಕೆಯಿಂದ ಅವರು ನಿರ್ವಹಿಸಿದ ಪ್ರತೀ ವೇಷವೂ ಸುಂದರ, ಅರ್ಜುನನ ಪಾತ್ರವಂತೂ ಅವರಿಗೆ ಮೀಸಲು, ವೀರರಸ ಪ್ರದಾನವಾದ ಈ ಪಾತ್ರದಲ್ಲಿ ಮಿಂಚಿನಂತೆ ಪ್ರವೇಶಚುರುಕು ನಡೆಯಿಂದ ಅರ್ಜುನನೆಂದರೆ ಗಾಣಿಗರು ಗಾಣಿಗರೆಂದರೆ ಅರ್ಜುನ ಎನ್ನುವಷ್ಟು ಪ್ರಸಿದ್ದಿಯನ್ನು ತಂದುಕೊಟ್ಟ ಪಾತ್ರವದು,

ಬಡಗುತಿಟ್ಟಿನ ವೇಷದಾರಿಗಳಲ್ಲಿ ಪಾಂಡೇಶ್ವರ ಪುಟ್ಟಯ್ಯನವರು ನೃತ್ಯದಲ್ಲಿ ಪ್ರಾವೀಣ್ಯತೆ ಪಡೆದವರು. 'ನರ್ತನಸ್ಯ ಪುಟ್ಟಯ್ಯ' ಎಂಬ ಬಿರುದಿಗೆ ಪಾತ್ರರಾದವರು. ಇವರ ಬಳಿಕ ಈ ಕೀರ್ತಿ ವೀರಭದ್ರ ನಾಯ್ಕ್ ಮತ್ತು ಕುಷ್ಟ ಗಾಣಿಗರಿಗೆ ಸಲ್ಲುತ್ತದೆ, ವೈವಿಧ್ಯತೆ ಮತ್ತು ಚುರುಕು ನಡೆಗೆ ನಾಯ್ಕರು ಪ್ರಸಿದ್ದಿ ಪಡೆದರೆ ಲಾಲಿತ್ಯಪೂರ್ಣ ಹೆಜ್ಜೆಗಾರಿಕೆ ಇದು ಕುಷ್ಟ ಗಾಣಿಗರಿಗೆ ಸಿದ್ದಿಸಿದೆ. ಇವರಿಬ್ಬರೂ ಒಂದೇ ಗುರುಗಳಿಂದ ಪಳಗಿದವರು. ಇವರಿಬ್ಬರ ಹೆಚ್ಚುಗಾರಿಕೆ ನೋಡಲು ಜೋಡಾಟ ನೋಡಬೇಕು. ಒಮ್ಮೆ ಜೋಡಾಟದಲ್ಲಿ ಅವರ ಸುದನ್ವನ ಸ್ಪರ್ದೆಯ ಕುಣಿತವನ್ನು ನೋಡಿ ಸಂತೋಷ ಪಟ್ಟವರಲ್ಲಿ ನಾನೂ ಒಬ್ಬನಾಗಿದ್ದೇನೆ. ಇವರ ಹೆಚ್ಚಿನ ತಿರುಗಾಟ ಮಂದಾರ್ತಿ ಮೇಳದಲ್ಲಿ ರಾಮಗಾಣಿಗರ ಎರಡನೇ ವೇಷಕ್ಕೆ ಇವರ ಪುರುಷ ವೇಷ. ಎಂತಹ ಜೋಡಿ ಏನೊಂದು ಹೊಂದಾಣಿಕೆ. ಕರ್ಣಾರ್ಜುನದ ಕರ್ಣ-ಅರ್ಜುನ ಭೀಷ್ಮ ವಿಜಯದ ಬೀಷ್ಮ-ಪರಶುರಾಮ ಇಂದ್ರಕೀಲಕದ ಶಬರ-ಅರ್ಜುನ, ಚಿತ್ರಸೇನ-ಅರ್ಜುನ ಮರೆಯ ಲಾರದ ಅಪೂರ್ವ ಜೋಡಿ. ಸುದನ್ವ ಕಾಳಗದ ಸುದನ್ವ ಅವರ ಸಾಲಿನ ವೇಷ ಅಲ್ಲದಿದ್ದರೂ ರಾಮಗಾಣಿಗರು ಆ ವೇಷವನ್ನು ಅವರಿಂದಲೇ ಮಾಡಿಸುತಿದ್ದರು. ಆ ಪಾತ್ರವೂ ಅವರಿಗೆ ಪ್ರಸಿದ್ದಿಯನ್ನು ತಂದಿದೆ,

ತುಂಬು ಮೀಸೆಯುಳ್ಳ ಗಾಣಿಗರು ಕ್ರಷ್ಣನ ವೇಷಕ್ಕೆ ಮೀಸೆ ಕಟ್ಟುತಿದ್ದರು. ಇದು ಪರಂಪರೆಗೆ ಹೊರತಾಗಿದ್ದರೂ ಜನ ಅದನ್ನು ಒಪ್ಪುತ್ತಿದ್ದರು. ಶ್ರುತಿಬದ್ಧವಾಗಿ ಸೂಕ್ತ ರಾಗದಲ್ಲಿ ಶ್ರುತಿಬದ್ಧವಾಗಿ ಪದ್ಯಎತ್ತುಗಡೆ ಮಾಡುವಲ್ಲಿ ಇವರಿಗೆ ಸರಿಸಾಟಿಯೇ ಇಲ್ಲ. ಹೀಗೆ ಕಿರೀಟ ಕೇದಗೆ ಮುಂದಲೆ, ಮುಂಡಾಸು ಹೀಗೆ ಎಲ್ಲಾ ತರಹದ ವೇಷಗಳಿಗೂ ಹೊಂದುವ ಆಳಂಗ ಇವರದ್ದು. ವೇಷಗಾರಿಕೆ, ನರ್ತನ, ಮಾತುಗಾರಿಕೆ ಪದ್ಯದ ಎತ್ತುಗಡೆಯಿಂದ ಪ್ರಸಿದ್ದ ಪುರುಷ ವೇಷದಾರಿಯಾದ ಇವರಿಂದ ಕಲೆ ಬೆಳೆಯಿತು ಅವರೂ ಬೆಳಗಿದರು.

**ಕಂದಾವರ ರಘುರಾಮ ಶೆಟ್ಟಿ**<br>
ಪ್ರಸಂಗಕರ್ತರು<br>
ಅಂಚೆ ನೂಜಾಡಿ, ಕುಂದಾಪುರ

# ಹಾರಾಡಿ ಕೃಷ್ಣಗಾಣಿಗರು



ಯಕ್ಷಗಾನ ಕ್ಷೇತ್ರದಲ್ಲಿ ನಮಗೆ ತಿಳಿದದ್ದು ಮೂರು ತಿಟ್ಟುಗಳು. ತೆಂಕುತಿಟ್ಟು, ಬಡಗುತಿಟ್ಟು ಮತ್ತು ಬಡಾಬಡಗುತಿಟ್ಟು, ಅದರಲ್ಲಿ ಬಡಗುತಿಟ್ಟು ಬ್ರಹ್ಮಾವರ–ಕುಂದಾಪುರ ಮದ್ಯಬಾಗದಲ್ಲಿ ಕಂಡುಬರುವ ಒಂದು ಸಾಂಪ್ರದಾಯಿಕ ನೆಲೆಗಟ್ಟು ಇರುವ ಯಕ್ಷ ವೈವಿದ್ಯ ಬ್ರಹ್ಮಾವರ ಕುಂದಾಪುರದ ಯಕ್ಷಗಾನ ವಿಜ್ರಂಬಿಸಿದ ರೀತಿ ಒಂದು ಹಾರಾಡಿಯ ಮುಂಡಾಸು ಮಟಪಾಡಿಯ ಹೆಜ್ಜೆಗಾರಿಕೆ. ನಮ್ಮಕಣ್ಣ ಮುಂದೆ ತೋರಿ ಬಂದ ಕಲಾವಿದರು ಹಾರಾಡಿ ರಾಮಗಾಣಿಗರು ಕುಷ್ಟ ಗಾಣಿಗರು, ನಾರಾಯಣ ಗಾಣಿಗರು ಮಹಾಬಲ ಗಾಣಿಗರು ಬಾಬು ಗಾಣಿಗರು, ಅಣ್ಣಪ್ಪ ಗಾಣಿಗರು. ಉದ್ಯಾವರ ಬಸವ ಗಾಣಿಗರು ಕೋಡಿ ವಿಶ್ವನಾಥಗಾಣಿಗರು ಮುಂತಾದವರು ಮಟಪಾಡಿ ಮುಕುಂದ ನಾಯ್ಕರು, ಶ್ರೀನಿವಾಸ ನಾಯ್ಕರು, ವೀರಭದ್ರ ನಾಯ್ಕರು ಶೀನ ನಾಯ್ಕರು ಚಂದು ನಾಯ್ಕರು. ಇವರೆಲ್ಲ ಒಂದು ಕಾಲದಲ್ಲಿ ಪ್ರಖ್ಯಾತರಾಗಿ ಪೌರಾಣಿಕ ಯುಗವನ್ನೇ ಕಣ್ಣಮುಂದೆ ನಿಲ್ಲಿಸಿದವರು ಆದರೆ ಮುಖ್ಯವಾಗಿ ಈಗಲೂ ನಮ್ಮಕಣ್ಣಮುಂದೆ ನಿಲ್ಲುವ ವೇಷಗಳು ಕುಷ್ಟ ಗಾಣಿಗರದ್ದು. ನಾನು ಕಂಡ ಅವರ ವೇಷಗಳು ಕರ್ಣಾರ್ಜುನದ ಅರ್ಜುನ, ಸೈಂದವ ವದೆಯ ಅರ್ಜುನ ಬೀಷ್ಮ ವಿಜಯದ ಪರಶುರಾಮ ದ್ರೌಪದಿ ಪ್ರತಾಪದ ಅರ್ಜುನ, ಸುಭದ್ರಾಕಲ್ಯಾಣದ ಅರ್ಜುನ, ಇಂದ್ರಕೀಲಕದ ಅರ್ಜುನ, ವೀರಮಣಿಯ ಪುಷ್ಕಳ ಎಲ್ಲಿ ನೋಡಿದರೂ ಅರ್ಜುನ.

ಬೇರೆ ವೇಷಗಳನ್ನೂ ಮಾಡಿ ಅದಕ್ಕೆ ನ್ಯಾಯ ಒದಗಿಸಿದ್ದರು. ನಾನು ಯುವ ಹವ್ಯಾಸಿ ಕಲಾವಿದನಾಗಿ ಬಾಗವತನಾಗಿ ಗಾಣಿಗರ ಸುದನ್ವ ಕಾಳಗದ ಅರ್ಜುನ ಬೀಷ್ಮ ವಿಜಯದ ಪರಶುರಾಮ ಪಾತ್ರಕ್ಕೆ ಪದ್ಯ ಹೇಳಿ ಬೆರಗಾಗಿದ್ದೆ, ಅವರಿಂದ ಹೊಗಳಿಸಿಕೊಂಡದ್ದು ಇದೆ. ಅವರ ವೇಷದ ನಡೆಯ ವೈಖರಿಕರ್ಣಾರ್ಜುನದಲ್ಲಿ ಕ್ರಷ್ಣ ವ್ರಷಸೇನ ಬೀಮನನ್ನು ಸೋಲಿಸಿದ ನಂತರ "ಇಷ್ವರ ಬಲುಮೆಯಂಕೊಟ್ಟವರಾರು" ಎತ್ತುಗಡೆ ಮಾಡಿ ಹಾರಿಸುರಥವನ್ನು ರಂಗದಲ್ಲಿತಿರುಗುವ ನೆಡೆ ಇದು ಇತರರಿಗೆ ಸಾದ್ಯವಾಗದ ನಡೆ, ಸೈಂದವ ವದೆಯ ಪ್ರಸಂಗದಲ್ಲಿ ಸಮಸಪ್ತಕರಲ್ಲಿ ಯುದ್ದ ಮಾಡಿ ಕ್ರಷ್ಣಾರ್ಜುನರುಡೇರೆ ಪ್ರವೇಶ ಮಾಡುವಾಗ ನಾರಿಯರು ಆರತಿ ಮಾಡುವಾಗ ಅಭಿಮನ್ಯು ವದೆಯ ಸೂಕ್ಷ್ಮವನ್ನು ಅರಿತ ಅರ್ಜುನ ಸಿಟ್ಟಿನಿಂದ ಆರತಿ ತಟ್ಟೆಯನ್ನು ಮೇಲಕ್ಕೆ ತಟ್ಟಿ ಅದು ಬಾಗವತರ ತಲೆಯ ಮೇಲೆ ಹಾರುವಂತೆ ಮಾಡುವ ಆ ಸಿದ್ದಿ ಇತರರಿಗೆ ಸಿದ್ದಿಸಿಲ್ಲ.

ಕುಷ್ಟ ಗಾಣಿಗರಿಗೆ ಎರಡನೇ ವೇಷದಾರಿಯಾಗಿ ಹಾರಾಡಿ ರಾಮಗಾಣಿಗರು ವೀರಭದ್ರ ನಾಯ್ಕರು, ಉಡುಪಿ ಬಸವ. ಪೆರ್ಡೂರುರಾಮ, ಮೊದಲಾದವರು ಇದ್ದರು. ಅವರ ಒಂದು ವಿಶೇಷವೆಂದರೆ ಕ್ರಷ್ಣನ ಪಾತ್ರಕ್ಕೂ ಮೀಸೆ ಇಡುವುದು.

ಅವರ ಗಿಡ್ಡವಾದ ಆಳ್ತನ ಅವರು ಯಾವ ವೇಷ ಮಾಡಿದರೂ ಎರಡನೇ ವೇಷದ ಸ್ಥಾನಕ್ಕೆ ಬರುವ ಹಾಗಿರಲಿಲ್ಲ, ಪುರುಷವೇಷವೇ ಅವರಿಗೆ ಮೀಸಲು. ಕಂಚಿನ ಕಂಠ, ಸ್ಪಷ್ಟವಾದ ವಾಕ್‌ಚಾತುರ್ಯ ಅವರ ಹೆಚ್ಚುಗಾರಿಕೆ. ಕರ್ಣಾರ್ಜುನ ಕೃಷ್ಣ ಅರ್ಜುನನಾಗಿ ನಾರಾಯಣ ಗಾಣಿಗರು ಮತ್ತು ಕುಷ್ಟ ಗಾಣಿಗರು ಯಾದವೋತ್ತಮ ಪದ್ಯಕ್ಕೆ ಇದಿರು ಬದಿರಾಗಿ ಕುಳಿತು ಅರ್ಥ ಹೇಳುವ ಪರಿ ವರ್ಣಿಸಲಸದಳ. ಸಂಭಾಷಣೆಯಲ್ಲಿ ಇಬ್ಬರ ಪ್ರಶ್ನೋತ್ತರಗಳು ವಿಷಯವನ್ನು ಪ್ರಸ್ತಾಪಿಸುತ್ತದೆ. ಒಟ್ಟಿನಲ್ಲಿ ಕುಷ್ಟ ಗಾಣಿಗರಿಗೆ ಅವರೇ ಸರಿಸಾಟಿ. ಸಾಗರಕ್ಕೆ ಸಾಗರವೇ ಸಾಟಿ. ಅವರ ಮನೆತನದಲ್ಲಾಗಲಿ ಶಿಷ್ಯವರ್ಗದಲ್ಲಾಗಲಿ ಯಾರೂ ಉಳಿಯಲಿಲ್ಲ ಎಂಬುದು ಸತ್ಯವಾದರೂ ಈಗ ನಮ್ಮ ಮುಂದೆ ಇರುವ ಆಜ್ರಿ ಗೋಪಾಲ ಗಾಣಿಗ, ಕೋಡಿ ವಿಶ್ವನಾಥ ಗಾಣಿಗ , ಹಾರಾಡಿ ಸರ್ವಗಾಣಿಗ, ರಮೇಶ ಗಾಣಿಗರ ಕುಣಿತ ನೋಡಿದಾಗ ಕಣ್ಣೆದುರಿಗೆ ಹಾರಾಡಿ ಹಾರಾಡಿ ಹೋದಂತೆ ಬಾಸವಾಗುತ್ತದೆ, ಕುಷ್ಟ ಗಾಣಿಗ ಜನ್ಮ ಶತಮಾನೋತ್ಸವ ಆಗಲೇ ಬೇಕಾದ ಕಲಾ ಸೇವೆ

**ತೋನ್ಸೆ ಜಯಂತ ಕುಮಾರ್,** ಹವ್ಯಾಸಿ ಭಾಗವತರು
ಸವ್ಯಸಾಚಿ-ಸಂತೆಕಟ್ಟೆ ಕಲ್ಯಾಣಪುರ ಅಂಚೆ

## ಹಾರಾಡಿ ಕುಷ್ಟ ಗಾಣಿಗ–ನಾ ಕಂಡಂತೆ



ಅರವತ್ತರ ದಶಕದ ಮೊದಲ ವರ್ಷಗಳಲ್ಲಿ ಹೆಚ್ಚು ಬಯಲಾಟ ನೋಡುವ ಅವಕಾಶ ನನ್ನ ಪಾಲಿಗಿತ್ತು. ಆ ಕಾಲಕ್ಕೆ ಬಡಗುತಿಟ್ಟಿನಲ್ಲಿ ಹಾರಾಡಿ ಕುಷ್ಟ ಗಾಣಿಗರಿಗೆ ಅಗ್ರಪಂಕ್ತಿಯ ಪುರುಷ ವೇಷಧಾರಿ ಎಂಬ ಹೆಸರಿತ್ತು. ನಾನೂ ಅವರ ವೇಷಗಳನ್ನು ನೋಡಿ ಪ್ರಭಾವಿತನಾದವನೆ. ಈಗಿರುವಷ್ಟು ಮೇಳಗಳು ಆಗ ಇರಲಿಲ್ಲ. ಸಾರಿಗೆ ಸಂಪರ್ಕವೂ ತೀರಾ ಕಡಿಮೆ ಇದ್ದುದರಿಂದ ಕಾಲ್ನಡಿಗೆಯಲ್ಲಿಯೇ ಆರೇಳು ಮೈಲಿ ದೂರಕ್ಕೆ ಆಟ ನೋಡಲು ಹೋಗುತ್ತಿದ್ದೆ. ನಾನು ಮುಖ್ಯವಾಗಿ ಕುಷ್ಟಗಾಣಿಗರ ವೇಷ ನೋಡಲೆಂದೇ ಹೋಗುತಿದ್ದೆ. ಅವರ ಅರ್ಜುನ, ಜಯಂತ, ಪುಷ್ಕಳ, ಕಾರ್ತವಿರ್ಯಾರ್ಜುನ, ಪರಶುರಾಮ, ಅಂಗಾರವರ್ಮ, ವೀರಮಣಿ, ನಂದಿ ಮತ್ತು ವಲಲ ಮುಂತಾದ ಅನೇಕ ವೇಷಗಳನ್ನು ಕಂಡ ನೆನಪು. ಯಾವ ವೇಷದಲ್ಲೇ ಆಗಲಿ ಅವರ ಪ್ರವೇಶ ಮಿಂಚು ಬಡಿದ ಹಾಗೆ.

ಅವರು ಎತ್ತರದ ವ್ಯಕ್ತಿಯಲ್ಲ. ಹಾಗೆಂದು ಕುಬ್ಜನೂ ಅಲ್ಲ. ಹದ ಎತ್ತರದ ಆಳಂಗ ಶುದ್ಧ ಹಾಗು ಮಾಟವಾದ ಮೈಕಟ್ಟು ಇರುವ ವ್ಯಕ್ತಿ. ಹತ್ತಿರದಲ್ಲಿ ನೋಡಿ ಮಾತಾಡಿಸಿದ ನೆನಪು ಸ್ಪಷ್ಟವಾಗಿದೆ. ನಿಸರ್ಗದತ್ತವಾದ ರೂಪ, ಉತ್ತಮ ಕಂಠ ಹಾಗೂ ಕುಣಿತ ಅವರನ್ನು ಉತ್ತುಂಗಕ್ಕೇರಿಸಿದ ಅಂಶಗಳು. ಯಕ್ಷಗಾನ ಕಲೆ ಕುಣಿತ ಪ್ರಧಾನವಾದುದು ಎಂದರೆ ತಪ್ಪಾಗಲಾರದು. ಕುಷ್ಟ ಗಾಣಿಗರ ಕುಣಿತದಲ್ಲಿ ತಾಳ ಪ್ರಧಾನವಾದ ಲಯ ವಿನ್ಯಾಸದ ಹೆಜ್ಜೆಗಳಲ್ಲದೇ ನಡೆ ಮತ್ತು ಗತಿಭೇದಗಳು ಸ್ಪಷ್ಟವಾಗಿ ಗೋಚರಿಸುತ್ತದೆ. ತನ್ಮೂಲಕ ಅವರ ಕುಣಿತ ಮನಮೋಹಕವಾಗಿತ್ತು. ಜೊತೆಯಲ್ಲಿ ಸಾಕಷ್ಟು ಲಾಲಿತ್ಯವೂ ಇತ್ತು. ವೃಷಸೇನನಿಗೆ ತಿಳುವಳಿಕೆ ನೀಡುವ ಸಂದರ್ಭದ "ಸಾಕು ಸಾಕು ನಿನ್ನ ಸಾಹಸ" ಎಂಬ ಪದಕ್ಕೆ ಅವರ ನೃತ್ಯಾಭಿನಯ ಅಮೋಘ. ಹಾಗೆ ವಿದ್ಯುನ್ಮತಿ ಕಲ್ಯಾಣದ ಜಯಂತ ಅವರಿಗೆ ಅಪಾರ ಕೀರ್ತಿ ತಂದಿತ್ತ ಇನ್ನೊಂದು ವೇಷ. 1963 ಮೇ ತಿಂಗಳ ಕೊನೆಯಲ್ಲಿ ಡೆಲ್ಲಿಯ ಲಲಿತಕಲಾ ಅಕಾಡೆಮಿಯ ಸದಸ್ಯರ ತಂಡದ ಸಮಕ್ಷಮ ಅಮೃತೇಶ್ವರಿ ದೇವಸ್ಥಾನದ ಬಳಿ ಜರಗಿದ " ವಿದ್ಯುನ್ಮತಿ ಕಲ್ಯಾಣ" ಪ್ರಸಂಗದ ಅವರ ಜಯಂತನ ವೇಷವನ್ನು ಕಂಡ ತಂಡದ ಸದಸ್ಯರು ಅಪಾರ ಮೆಚ್ಚುಗೆ ವ್ಯಕ್ತಪಡಿಸಿದ್ದರು. "ಬಿಸಜಗಂಧಿನಿ" ಎಂಬ ಪದ ಎತ್ತುಗಡೆ ಮಾಡಿ ಕುಣಿದು ಅಭಿನಯಿಸಿದ ದೃಶ್ಯವನ್ನು ಕಂಡ ಅಕಾಡೆಮಿ ಸದಸ್ಯರು ನಿಬ್ಬೆರಗಾಗಿ ಮೂಗಿನ ಮೇಲೆ ಬೆರಳಿಟ್ಟು ಸಂತಸ ವ್ಯಕ್ತಪಡಿಸಿದ್ದನ್ನು ಆ ಆಟ ನೋಡಿದ ನನ್ನ ನೆನಪಿನಲ್ಲಿ ಸದಾ ಹಸಿರು. ಆ ಕಾರ್ಯಕ್ರಮವನ್ನು ಡಾ। ಶಿವರಾಮ ಕಾರಂತರು ಆಯೋಜಿಸಿದ್ದರು

ಗಂಭೀರ ಹಾಗೂ ಶೌರ್ಯವನ್ನು ವ್ಯಕ್ತಪಡಿಸುವ ವೇಷಗಳಲ್ಲಿಯು ಅವರ ವಿಶಿಷ್ಟತೆ ಎದ್ದು ಕಾಣುತ್ತದೆ. "ಭರತನ ಮಗ ಪುಷ್ಕಳ" ಎಂದು ಪದ ಎತ್ತುಗಡೆ ಮಾಡಿ ರಣೋಲ್ಲಾಸದ ಹೆಜ್ಜೆಯ ಕುಣಿತದಿಂದ ಇಡಿಯ ರಂಗಸ್ಥಳವೆ ಒಂದು ರಣರಂಗದತೆ

ಭಾಸವಾಗುತ್ತಿತ್ತು. ನಾನು ಎಂದಿಗೂ ಮರೆಯಲಾಗದ ಅವರ ಇನ್ನೊಂದು ವೇಷ-ಇಂದ್ರಕೀಲಕ ಪ್ರಸಂಗದ ಅರ್ಜುನ. ಬಿಲ್ಲನ್ನು ಹೆಗಲ ಮೇಲೆರಿಸಿಕೊಂಡು ಒಂಟಿ ಕಾಲಿನಲ್ಲಿಯೇ ನಿಂತು ತಪಸ್ಸನ್ನಾಚರಿಸುವ ಭಂಗಿ. ಆಗ ಬೇಡ ಬೇಡತಿಯ ರೂಪದಲ್ಲಿ ಪ್ರತ್ಯಕ್ಷರಾದ ಶಿವ ಪಾರ್ವತಿಯರು. ಅರ್ಜುನನ ತಪಸ್ಸನ್ನು ಕೆಡಿಸುವ ಉದ್ದೇಶದಿಂದ ಪಾರ್ವತಿ ಜರೆಯುವ, ನಿಂದಿಸುವ ಹಾಗೂ ದೂಷಿಸುವ ಮಾತುಗಳಿಗೆ, ದೂಷಣೆಯ ಪ್ರತಿ ಸೊಲ್ಲಿಗೂ ಪ್ರತಿಯಾಗಿ ಎದೆಯುಬ್ಬರಿಸಿ ಬುಸು ಗುಟ್ಟುತ್ತಾ ಬುಸುಗುಟ್ಟುತ್ತಾ ಒಮ್ಮೆಲೆ ಉಚ್ಚಕಂಠದಿಂದ ಪದ ಎತ್ತುಗಡೆ ಮಾಡಿ ಗರ್ಜಿಸಿ ವೀರಾವೇಶದ ಆ ಕುಣಿತ ಪ್ರೇಕ್ಷಕರಲ್ಲಿ ನವಿರೇಳಿಸುವಂತದ್ದು. ಒಂದು ಕ್ಷಣ ರಂಗಸ್ಥಳದ ಸುತ್ತು ಪಾರ್ಶ್ವ ಸ್ತಬ್ಧ, ಸ್ತಂಭಿಭೂತವಾದ ಸ್ಥಿತಿ. ಅಲ್ಲಿ ವಾಚಿಕ ಸಂಕ್ಷಿಪ್ತ ಆದರೆ ಬಲು ಗಂಭೀರ. "ನಾನು ನನ್ನಷ್ಟಕ್ಕೆ ಏಕೊ ಧೃಡಭಕ್ತಿಯಿಂದ ಶಿವನನ್ನು ಕುರಿತು ತಪಸ್ಸು ಮಾಡುವಾಗ ನನ್ನಗೊಡವೆ ನಿಮಗ್ಯಾಕೆ".

ಪದದ ಭಾವಕ್ಕೆ ಮೀರುವ ಹಾಗೆ ಮಾತಾಡುವವರಲ್ಲ. ಅಧಿಕ ಭಾಷಾವೈಖರಿಯ ಮಾತೂ ಇಲ್ಲ. ಆದರೆ ಆಡುವ ಮಾತು ಮಧುರವಾಗಿಯೂ ಸಂದರ್ಭಾನುಸಾರ ಗಂಭೀರ ಮತ್ತು ಶ್ರುತಿ ಬದ್ಧವಾಗಿರುತ್ತದೆ. ಪದದಿಂದ ಪದಕ್ಕೆ ಬಲಿಯುವ ವಾಚಿಕದ ಸೇತುವೆ ಅಪೂರ್ವ ಮತ್ತು ಅನನ್ಯ. ಕೆಲವೊಮ್ಮೆ ವಾಡಿಕೆಯಲ್ಲಿರುವ ಸಣ್ಣ ಸಣ್ಣ ಶಬ್ದಗಳನ್ನೇ ಬಳಸಿ ಅತಿಶಯೋಕ್ತಿಯ ವಾಕ್ಯಗಳ ರಚನೆ ಮಾಡುವುದುಂಟು. "ಆಡಿ ಅಡಗುವುದರೊಳಗಾಗಿ ನಿನ್ನನ್ನು ರೂಢಿಯಲ್ಲಿ ಕೆಡಹಾಕುತ್ತೇನೆ." ಗಾಣಿಗರು ವೇಷಕಟ್ಟಿ ಕೊಳ್ಳುವುದರಲ್ಲಿ ಬಹಳ ಚುರುಕು ಎಂಬ ಮಾತು ಆ ಕಾಲದಲ್ಲಿ ಜನ ಜನಿತ. ಅವರ ಕೇದಗೆ ಮುಂದಲೆ ನೋಡಲು ಬಲು ಚಂದ. ಆ ಕೇದಗೆ ಮುಂದಲೆಯೊಂದಿಗೆ ಅವರ ವೇಷ ರಂಗಸ್ಥಳದಲ್ಲಿರುವಷ್ಟು ಕಾಲ ಬಡಗುತಿಟ್ಟು ಮೂರ್ತಿಭವಿಸಿ ಬಂದಂತೆ ಭಾಸ. ಅವರು ಶೂನ್ಯಗೊಳಿಸಿದ ಸ್ಥಾನ ಭರ್ತಿ ಮಾಡುವ ಕಲಾವಿದರು ವರ್ತಮಾನ ಕಾಲದಲ್ಲಿ ಯಾರು ಇಲ್ಲ ಎಂದು ಹೇಳಿದರೆ ಅದು ಕೇವಲ ವೈಯಕ್ತಿಕ ಅಭಿಪ್ರಾಯವೆಂದು ಸುಲಭದಲ್ಲಿ ತಳ್ಳಿಹಾಕಬಹುದಾದರೂ ಇನ್ನೊಬ್ಬ ಇದ್ದಾನೆ ಎಂದು ಶ್ರುತಪಡಿಸುವುದು ಸಾಧ್ಯವಾಗದ ಮಾತು.

**ಬೇಳೂರು ರಾಘವ ಶೆಟ್ಟಿ**
"ಕೃಷ್ಣದೇವ"
ಚಿತ್ರಪಾಡಿ ಅಂಚೆ, ಸಾಲಿಗ್ರಾಮ

# ಅಬಿಜಾತ ಕಲಾವಿದ ಹಾರಾಡಿ ಕುಷ್ಟ ಗಾಣಿಗರು

ಸಮಾಜದ ಜನರಿಗೆ ಮನೋರಂಜನೆ-ಬದುಕಿಗೆ ಶಿಕ್ಷಣ ನೀಡುತ್ತಾ ಬಂದಿರುವ ಕರಾವಳಿ ಮಣ್ಣಿನ ದೀಮಂತ ಕಲೆಯಾದ ಯಕ್ಷಗಾನದ ಉಳಿವಿಗೆ ಹಾಗೂ ಏಳಿಗೆಗೆ ತಮ್ಮಜೀವನವನ್ನೇ ಮುಡಿಪಾಗಿಟ್ಟು ದುಡಿಯುತ್ತಿರುವ ಈ ಕುರಿತು ಹಗಲಿರುಳೂ ಪ್ರಯತ್ನಿಸುತ್ತಿರುವ ಕಲಾವಿದರು, ಕಲಾಭಿಮಾನಿಗಳು ಅದೆಷ್ಟೋ ಮಂದಿ ಸಮಾಜದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದ ಕಾಲದಲ್ಲಿ ಸಂಚಾರಕ್ಕೆ ರಸ್ತೆಗಳ ವಾಹನಗಳ ಸೌಲಭ್ಯ ಇಲ್ಲದ ಕಾಲದಲ್ಲಿ ಯಕ್ಷಗಾನ ಮೇಳಗಳ ಪೆಟ್ಟಿಗೆಗಳನ್ನು ತಲೆಹೊರೆಯಾಗಿ ಹೊತ್ತುಕೊಂಡು ಪ್ರತೀ ದಿನ ಹತ್ತಾರು ಮೈಲು ದೂರ ನೆಡೆದು ಊರೂರು ಸುತ್ತಿ ಆಟಗಳನ್ನು ಆಡಿ ತಮ್ಮ ಜೀವನ ಧನ್ಯತೆಯನ್ನು ಕಂಡ ಮೇರು ಕಲಾವಿದರು ನಮಗೆ ಪ್ರಾತಸ್ಮರಣೀಯರು.

ಉಡುಪಿ ಜಿಲ್ಲೆಯ ಬ್ರಹ್ಮಾವರದ ಮೂಡಣ ದಿಕ್ಕು ಮಟಪಾಡಿ ಪಡುವಣ ದಿಕ್ಕು ಹಾರಾಡಿ ಹಾಗೆ ಬ್ರಹ್ಮಾವರದಿಂದ 3 ಮೈಲು ದೂರದಲ್ಲಿಕುಂಜಾಲು ಈ ಊರುಗಳು ಯಕ್ಷಗಾನದ ತವರೂರು. ಯಕ್ಷಗಾನ ಕ್ಷೇತ್ರಕ್ಕೆ ಅನೇಕ ದಿಗ್ಗಜಗಳನ್ನು ನೀಡಿದ್ದಾರೆ ಪ್ರಸಿದ್ಧ ಬಾಗವತಕುಂಜಾಲು ಶೇಷಗಿರಿಕಿಣಿ, ಜಾನುವಾರುಕಟ್ಟೆ ಬಾಗವತರು, ಹಿರಿಯಡ್ಕ ಗೋಪಾಲ ರಾವ್, ಚಂಡೆಕಿಟ್ಟು, ಹಾರಾಡಿ ರಾಮಗಾಣಿಗ, ನಾರಾಯಣ ಗಾಣಿಗ, ಶಿರಿಯಾರ ಮಂಜು ನಾಯ್ಕ್, ಉಡುಪಿ ಬಸವ, ಹಾಲಾಡಿಕೊರ್ಗು ಮುಂತಾದ ಶ್ರೇಷ್ಠ ಕಲಾವಿದರ ಒಡನಾಡಿಯಾಗಿ ಯಕ್ಷಗಾನ ರಂಗಸ್ಥಳದಲ್ಲಿ ಕುಣಿದು ಕಲಾಭಿಮಾನಿಗಳ ಅಭಿಮಾನಕ್ಕೆ ಪಾತ್ರರಾದವರು ಸವ್ಯಸಾಚಿ ಕುಷ್ಟ ಗಾಣಿಗರು. ದ್ವನಿವರ್ದಕ ಆದುನಿಕ ಬೆಳಕು ಇಲ್ಲದಕಾಲದಲ್ಲಿ ಪೌರಾಣಿಕ ಪ್ರಸಂಗಗಳ ಆಟಗಳನ್ನು ಆಡಿ ಯಕ್ಷಗಾನವನ್ನು ಬೆಳಗಿಸಿದ ಇವರೆಲ್ಲರೂ ಯಕ್ಷಗಾನ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿಕೀರ್ತಿ ಶೇಷರಾಗಿದ್ದಾರೆ.

ಹಾರಾಡಿ ಕುಷ್ಟ ಗಾಣಿಗರು ಯಕ್ಷಗಾನದ ಪುರುಷವೇಷದಾರಿಯಾಗಿ ಮಿಂಚಿದವರು, ಕರ್ಣಾರ್ಜುನದ ಅರ್ಜುನ, ರಾಮಗಾಣಿಗರ ಕರ್ಣ ಬಹಳಷ್ಟು ಹೆಸರು ಮಾಡಿತ್ತು. ಕುಷ್ಟ ಗಾಣಿಗರ ಪ್ರವೇಶ ಕುಣಿತದ ಶೈಲಿ, ಭಾವಾಭಿನಯ ಪದಎತ್ತುಗಡೆ ಮಾತಿನ ಶೈಲಿ, ಪಾತ್ರ ಪೋಷಣೆ ಉತ್ತಮವಾಗಿತ್ತು. ತಾನು ನಿರ್ವಹಿಸುವ ಎಲ್ಲಾ ಪಾತ್ರಗಳಲ್ಲಿ ಪ್ರವೇಶ ಮಾಡಿ ವೇಷದ ಗತ್ತುಗಾಂಬೀರ್ಯ ಎತ್ತರಿಸುತಿದ್ದರು, ಪುಷ್ಕಳ, ಜಯಂತ, ಚಿತ್ರಕೇತು, ಪರಶುರಾಮ, ಮೀನಾಕ್ಷಿ ಕಲ್ಯಾಣದ ನಂದಿ ಎಲ್ಲಾ ಪ್ರಸಂಗಗಳ ಅರ್ಜುನ ಮುಂತಾದವುಗಳು ಅವರಿಗೆ ಕೀರ್ತಿತಂದ ಪಾತ್ರಗಳು.

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ವತಿಯಿಂದ ನಮ್ಮ ಜಿಲ್ಲೆಯ ಹೆಮ್ಮೆಯ ಕಲೆಯಾದ ಯಕ್ಷಗಾನದ ಮೇರುಕಲಾವಿದ ಕುಷ್ಟ ಗಾಣಿಗರ ಜನ್ಮ ಶತಾಬ್ದಿ ನೆಡೆಯುತ್ತಿರುವುದು ಯಕ್ಷಗಾನ ಸೇವೆಮಾಡಿದ ಸರ್ವಕಲಾವಿದರಿಗೆ ಸಂದ ಗೌರವ. ಈ ಕಾರ್ಯಕ್ರಮ ಸರ್ವರ ಮೆಚ್ಚುಗೆಗೆ ಪಾತ್ರವಾಗಿದ್ದು, ಈ ಯೋಚನೆ ಮಾಡಿ ಕಾರ್ಯಗತ ಮಾಡಿದ ಸರ್ವರೂ ಅಭಿನಂದನೀಯರು

ಸರ್ಪು ಸದಾನಂದ ಪಾಟೀಲ್ ನಿವೃತ್ತ ಮುಖ್ಯೋಪಾದ್ಯಾಯರು -ಚೇರ್ಕಾಡಿ

# ನನ್ನ ಗುರುಗಳು–ಹಾರಾಡಿ ಕುಷ್ಟ ಗಾಣಿಗರು



ಬಡಗುತಿಟ್ಟಿನ ಯಕ್ಷಗಾನದಲ್ಲಿ ತಮ್ಮದೇ ಆದ ನೆಡೆಯ ಮೂಲಕ ಕಲಾಭಿಮಾನಿಗಳ ಹೃದಯದಲ್ಲಿ ಇಂದಿಗೂ ನೆಲೆನಿಂತವರೆಂದರೆ ಹಾರಾಡಿಯ ಗಾಣಿಗ ಮನೆತನದವರು, ಅವರಲ್ಲಿ ಒಬ್ಬರು ಕುಷ್ಟ ಗಾಣಿಗರು, ರಾಮಗಾಣಿಗರಿಗಿಂತಲೂ ವಯಸ್ಸಿನಲ್ಲಿ ಹಿರಿಯರು. ಹಾರಾಡಿ ರಾಮಗಾಣಿಗರ ಕರ್ಣನಿಗೆ ಕುಷ್ಟ ಗಾಣಿಗರ ಅರ್ಜುನನ ಪಾತ್ರ ನೋಡುವುದೇ ಕಣ್ಣಿಗೆ ಹಬ್ಬ, ಅವರ ಆಳ್ತನಕ್ಕೆ ಸರಿಯಾಗಿ ಅವರು ಕಟ್ಟುತಿದ್ದ ಕೇದಗೆ ಮುಂದಲೆ ಅದನ್ನು ಸಂದರ್ಭಾನುಸಾರ ಅವರು ತಿರುಗಿಸುವ ರೀತಿ ಕಟ್ಟುವ ಮೀಸೆ, ಬಿಲ್ಲನ್ನು ಹಿಡಿದು ರಂಗದಲ್ಲಿ ನಿಲ್ಲುವ ಭಂಗಿ ಬಹಳ ಸೊಗಸಾದದ್ದು. ಇಂತಹ ಮೇರುಕಲಾವಿದರ ಶಿಷ್ಯನೆಂದು ಹೇಳಿ ಕೊಳ್ಳುವುದಕ್ಕೆ ಹೆಮ್ಮೆ ಎನಿಸುತ್ತದೆ. ಎಂಟನೇ ತರಗತಿಗೆ ವಿದ್ಯಾಭ್ಯಾಸ ನಿಲ್ಲಿಸುವ ಅನಿವಾರ್ಯತೆ ಬಂದಾಗ ಮುಂದೇನು ಎಂಬ ಪ್ರಶ್ನೆಗೆ ನನಗೆ ಸಿಕ್ಕಿದ ಉತ್ತರಯಕ್ಷಗಾನ, ಬಾಲ್ಯದಿಂದಲೂ ಯಕ್ಷಗಾನವನ್ನು ನೋಡುತ್ತಾ ಬೆಳೆದ ನನಗೆ ಕಲಿಯಬೇಕೆಂಬ ಆಸೆ ಸಹಜವಾಗಿಯೇ ಮೊಳಕೆಯೊಡೆಯಿತು. ಪ್ರಥಮವಾಗಿ ದಿ. ಗೋರ್ಪಾಡಿ ವಿಠಲ ಪಾಟೀಲರಿಂದ ತಾಳಾಭ್ಯಾಸ ಮಾಡಿ ನ್ರತ್ಯವನ್ನೂ ಮದ್ದಳೆ ಚಂಡೆ ವಾದನವನ್ನೂ ಕಲಿಯುವ ಆಸೆಯಿಂದಡಾ/ಕಾರಂತರ ಯಕ್ಷಗಾನ ಕೇಂದ್ರ ಬ್ರಹ್ಮಾವರದ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ನಡೆಯುವಲ್ಲಿಗೆ ಹೋದೆ. ನೀಲಾವರ ರಾಮಕೃಷ್ಣಯ್ಯನವರು ಬಾಗವತರಾಗಿ, ಹಿರಿಯಡ್ಕ ಗೋಪಾಲರಾಯರು ಮದ್ದಳೆ ಕುಷ್ಟ ಗಾಣಿಗರು ನ್ರತ್ಯ ಗುರುಗಳಾಗಿ ನೇಮಕಗೊಂಡಿದ್ದರು. ಅದುವರೆಗೆ ರಂಗಸ್ಥಳ ರಾಜನಂತೆ ಕಂಡ ಅವರನ್ನು ಸನಿಹದಲ್ಲೇ ಕಾಣುವಂತಾಯಿತು. ಒಂದು ವರ್ಷ ನ್ರತ್ಯಅಭಿನಯ ಬಣ್ಣಗಾರಿಕೆ ಮದ್ದಳೆ ಚಂಡೆ ಸಬಾಲಕ್ಷಣ ಹೀಗೆ ಎಲ್ಲವನ್ನೂ ಕಲಿಯಲು ಸಾಧ್ಯವಾಯ್ತು.

ಒಂದು ವರ್ಷ ಕಳೆಯುತ್ತಿದ್ದಂತೆ ಅನಿವಾರ್ಯ ಕಾರಣಗಳಿಂದ ಕೇಂದ್ರವು ನಿಲ್ಲಲ್ಪಟ್ಟಿತು. ಗೋರ್ಪಾಡಿಯವರೊಂದಿಗೆ ಮಂದರ್ತಿ ಮೇಳಕ್ಕೆ ಸೇರಿಕೊಂಡೆ. ಕುಷ್ಟಗಾಣಿಗರು ಅದೇ ಮೇಳದಲ್ಲಿದ್ದರು. ಅವರೊಂದಿಗಿನ ಆ ತಿರುಗಾಟ ಮಕ್ಕಳಾದ ನಮ್ಮಲ್ಲಿ ಯಾವುದೇ ಸಂದರ್ಭದಲ್ಲಿ ಕೋಪಗೊಳ್ಳದೇ ನಮ್ಮನ್ನು ಹುರಿದುಂಬಿಸಿ ಸಮರ್ಥಕಲಾವಿದರಾಗಿ ರೂಪುಗೊಳ್ಳುವರೇ ಅವರ ಕೊಡುಗೆ ಅಪಾರ. ಒಮ್ಮೆಯಂತೂ ಅಡುಗೆ ಭಟ್ಟರು ಬಿಡಾರದಲ್ಲಿ ಮಾಡಿದ ಅಡುಗೆಗೆ ಯಾರಿಗೂ ತಿಳಿಯದಂತೆ ಸಾಂಬಾರು ಪಾತ್ರೆಗೆ ಒಂದಷ್ಟು ಉಪ್ಪನ್ನು ಸುರಿದು ಬಳಿಕ ಅಡುಗೆ ಭಟ್ಟರು ಎಲ್ಲರಿಂದಲೂ ಬೈಸಿಕೊಳ್ಳುವಂತೆ ಆಗಿತ್ತು.

ಹಾರಾಡಿ ಕುಷ್ಟ ಗಾಣಿಗರು ಮೇಳದಿಂದ ನಿವ್ರತ್ತಿಯಾದ ಬಳಿಕ ಸಾಲಿಗ್ರಾಮದ ಅವರ ಅಭಿಮಾನಿಗಳು ಅವರ ಅರ್ಜುನನ ಪಾತ್ರದೊಂದಿಗೆ ಪ್ರಮೀಳಾರ್ಜುನ ಪ್ರಸಂಗವನ್ನು

ಇರಿಸಿದ್ದರು. ಆಗ ಅವರಿಗೆ 70ರ ಆಸುಪಾಸು ಗೋರ್ಪಾಡಿಯವರು ಬಾಗವತರು ನನ್ನದೇ ಮದ್ದಳೆ ಪ್ರಮೀಳೆಯಾಗಿ ಯುವ ಸ್ತ್ರೀವೇಷದಾರಿಗಳೊಬ್ಬರು ಇದ್ದರು. ಮಹಾಬಲ ಗಾಣಿಗರು ವೇಷ ಮಾಡಿಸಿ ಬಿಟ್ಟಿದ್ದರು. ಅವರು ಇಬ್ಬರು ಸಹಾಯಕರೊಂದಿಗೆ ಬಾಗವತರ ಬಳಿ ಬಂದರು ಬಳಿಕ "ಕಂಡರ್ಜುನಂತನ್ನ ಸೇನೆ,,," ಎಂಬ ಪದ್ಯಕ್ಕೆ ಒಮ್ಮೆಲೆ ಸಿಡಿಲೆರಗಿದಂತೆ ಅವರ ಪ್ರವೇಶದ ಪರಿ ನಿಬ್ಬೆರಗಾಗುವಂತಿತ್ತು ಪ್ರಮೀಳೆ ಪಾತ್ರದಾರಿ ಬಿಲ್ಲು ಬಾಣವಿಲ್ಲದೇ ಬರಿಗೈಯ್ಯಲ್ಲಿ ಬಂದಿದ್ದರು, ಅಲ್ಲಿಗೆ "ಅರಸಿ ನೀನೀ ರಾಜ್ಯಕೆ" ಒಬ್ಬಳು ಅರಸಿಯಾದವಳು ಅದರಲ್ಲೂ ರಣರಂಗಕ್ಕೆ ಬರುವಾಗ ಹೇಗಿರಬೇಕು ಎಂಬ ಪರಿಜ್ಞಾನ ಬೇಡವೇ ಎಂದಾಗ ಪ್ರಮೀಳೆ ಪಾತ್ರದಾರಿತಲೆ ತಗ್ಗಿಸಿ ಕೂಡಲೇ ಬಿಲ್ಲು ಬಾಣ ತರಿಸಿಕೊಂಡರು. ಅದೇ ಅವರ ಕಲಾಜೀವನದ ಕೊನೆಯ ವೇಷ.

ಒಂದು ಕಾಲದಲ್ಲಿ ಯಕ್ಷಗಾನ ಕ್ಷೇತ್ರಕ್ಕೆ ಅತಿರಥ ಮಹಾರಥ ಕಲಾವಿದರನ್ನು ನೀಡಿದ ಊರು ಹಾರಾಡಿ ಎಂಬ ಹೆಸರು ಮಾತ್ರವೇ ಉಳಿದು ಕೊಂಡಿದೆ. ಬಡಗುತಿಟ್ಟಿನಲ್ಲಿ ಅಭಿನಯಕೊರತೆ ಇದೆ ಎಂದು ಹೇಳುವ ಇಂದಿನ ಕೆಲವು ಕಲಾವಿದರು ಪದ್ಯದ ಸಾಹಿತ್ಯಕ್ಕೆ ಸರಿಯಾಗಿಅಭಿನಯವು ನೈಜವಾಗಿರಬೇಕೆಂಬುದನ್ನು ಮರೆತು ಕೃತಕವಾಗಿ ಕಾಣುವಷ್ಟು ಹಿಗ್ಗಿಸುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ, ಗುರುಗಳು ಹೇಳಿಕೊಟ್ಟ ನ್ರತ್ಯ ಅವರ ಮಾರ್ಗದರ್ಶನದಲ್ಲಿ ಪೂರ್ತಿಯಲ್ಲದಿದ್ದರೂ ಸ್ವಲ್ಪವನ್ನಾದರೂ ಉಳಿಸಬೇಕೆಂಬ ಉದ್ದೇಶದಿಂದ ನನ್ನದಾದ ಸಂಸ್ಥೆಯೊಂದನ್ನು ಕಟ್ಟಿಕೊಂಡು ಉಳಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇನೆ. ಕಲಾಮಾತೆಯ ಅನುಗ್ರಹದಿಂದ ಮುಂದೆಯೂ ಇಂತಹ ಕಲಾರತ್ನಗಳು ಹುಟ್ಟಿಬರಲಿ. ಇನ್ನೊಮ್ಮೆ ಹಾರಾಡಿ ಶೈಲಿಯನ್ನು ನೋಡುವ ಬಾಗ್ಯ ಸಿಗಲಿ ಎಂದು ಆಶಿಸುತ್ತೇನೆ


**ಮಂಜುನಾಥ ಪ್ರಭು ಚೇರ್ಕಾಡಿ**
ಯಕ್ಷಗಾನ ಗುರುಗಳು
ನಿರ್ದೇಶಕರು, ಮದ್ದಳೆ ವಾದಕರು

## ಕುಷ್ಟ ಗಾಣಿಗರನ್ನು ಕುಣಿಸಿದ ಹೆಮ್ಮೆ ಇದೆ.

ಮಂದಾರ್ತಿ ಮೇಳದಲ್ಲಿ ಕುಷ್ಟ ಗಾಣಿಗರ ಅನೇಕ ವೇಷಗಳಿಗೆ ಬಾಗವತಿಕೆ ಮಾಡಿದ ಹೆಮ್ಮೆ ಇದೆ. ಯಕ್ಷಗಾನದ ಅರ್ಜುನ ಅಂತಲೇ ಪ್ರಸಿದ್ದರಾದ ಅವರ ಕರ್ಣಾರ್ಜುನ. ಇಂದ್ರಕೀಲಕ, ಪ್ರಮೀಳಾರ್ಜುನ ಪ್ರಸಂಗಗಳಿಗೆ ಪದ್ಯ ಹೇಳಿದ್ದರೂ ನೆನಪಿನಲ್ಲಿ ಉಳಿದಿರುವುದು ಸೈಂದವ ವದೆಯ ಅರ್ಜುನನ ವೇಷ. ಮಂಗಳಾರತಿಯನ್ನು ಎತ್ತಿ ಬಿಸಾಡಿದಾಗ ಅದು ನನ್ನ ತಲೆಯ ಮೇಲೆ ಬಿದ್ದಘಟನೆ ಮಾಸಲಾರದ್ದು. ಜೋಡಾಟದಲ್ಲಿ ಅವರ ಅನೇಕ ವೇಷಗಳಿಗೆ ಪದ ಹೇಳಿ ಸೈ ಎಣಿಸಿಕೊಂಡಿದ್ದೇನೆ, ಅಮ್ರತೇಶ್ವರಿ ಮೇಳದಲ್ಲೂ ಒಟ್ಟಿಗೆ ತಿರುಗಾಟ ಮಾಡಿದ್ದೇವೆ, ಅವರ ತಮ್ಮ ನಾರಾಯಣ ಗಾಣಿಗರೊಂದಿಗೆ ಜೋಡಿಕುಣಿತ  ಸೈಂದವ ವದೆಯ ಅವರ ಸೌಭದ್ರೆ ನೆನಪುಳಿ ಯುವಂತಹದ್ದು. 10 ಮೈಲು ದೂರ ಹಗಲಿಗೆ ಮೂವರು ಒಟ್ಟಿಗೆ ನಡೆದುಕೊಂಡು ಹೋಗುವಾಗ ಆ ಹಿರಿಯರು ಕಿರಿಯನಾದ ನನಗೆ ಬಾಗವತನ ನೆಲೆಯಲ್ಲಿ ಕೊಡುವ ಗೌರವ ಪ್ರೀತಿಗೆ ನಾನು ಋಣಿಯಾಗಿದ್ದೇನೆ. ನಾರಾಯಣಗಾಣಿಗರ ಸೈರೇಂದ್ರಿ ಕುಷ್ಟ ಗಾಣಿಗರ ವಲಲ. ಸೈರೇಂದ್ರಿ ವಲಲನಲ್ಲಿ ದೂರು ಕೊಡುವಾಗ ಬಾವುಕನಾಗಿ ಅತ್ತಿದ್ದೇನೆ, ಇಡೀ ಸಭೆಯೇ ಕಣ್ಣೀರು ಹಾಕಿತ್ತು, ಅಂತಹ ಅಪೂರ್ವ ಜೋಡಿ ಅದು.

**ಮತ್ಯಾಡಿ ನರಸಿಂಹ ಶೆಟ್ಟಿ**, ಹಿರಿಯ ಭಾಗವತರು

## ಹಾರಾಡಿ ಕುಟುಂಬದೊಂದಿಗೆ ಅನ್ಯೋನ್ಯತೆ ಇದೆ

ನಾನು ಹಾರಾಡಿ ಕುಟುಂಬಕ್ಕೆ ಮದುವೆಯಾಗಿ ಹೋಗಿ ಅಳಿಯನ ಸಂಬಂದ ಹೊಂದಿದ್ದೇನೆ. ಹಾರಾಡಿ ರಾಮಗಾಣಿಗರ ಮೊಮ್ಮಗಳನ್ನು ಮದುವೆಯಾಗಿ ಆ ಕುಟುಂಬದ ಮೂರನೇ ಪೀಳಿಗೆಯವನಾಗಿದ್ದೇನೆ, ಕುಷ್ಟ ಗಾಣಿಗರ ವೇಷವನ್ನು ನೋಡಿದ ನೆನಪು ಮಾಸಿದರೂ ಕೊನೆಯ ಕಾಲದಲ್ಲಿ ಅವರನ್ನು ನಾನು ಉಡುಪಿ ಯಕ್ಷಗಾನ ಕೇಂದ್ರದಲ್ಲಿ ವಿದ್ಯಾರ್ಥಿಯಾಗಿದ್ದಾಗ ನೋಡಿದ್ದೇನೆ, ಕುಳ್ಳಗಿನ ದಪ್ಪ ಮೀಸೆಯ ವ್ಯಕ್ತಿತ್ವ ಅವರದ್ದು. ಅವರು ಕೃಷ್ಣನ ವೇಷಕ್ಕೂ ಮೀಸೆ ಕಟ್ಟಿಯೇ ಮಾಡುತ್ತಿದ್ದರು ಅಂತ ಕೇಳಿದ್ದೇನೆ. ಜೀವನದ ದೀರ್ಘಕಾಲ ಹಾರಾಡಿಯವರು ಸೇವೆ ಸಲ್ಲಿಸುತ್ತಿದ್ದ ಮಂದಾರ್ತಿ ಮೇಳವೊಂದರಲ್ಲೇ 35ಕ್ಕೂ ಅದಿಕ ವರ್ಷಗಳ ಕಾಲ ಸೇವೆ ಸಲ್ಲಿಸುತಿದ್ದೇನೆ, ಪುರುಷವೇಷಗಳಲ್ಲಿ ಅರ್ಜುನನ ವೇಷ ಕುಷ್ಟ ಗಾಣಿಗರನ್ನು ಹೋಲುತ್ತದೆ ಎಂದು ವಿಮರ್ಶಕರು ಹೇಳುವಾಗ ಸಂತೋಷವಾಗುತ್ತದೆ.

**ಆಜ್ರಿ ಗೋಪಾಲ ಗಾಣಿಗ**-ಮಂದಾರ್ತಿ ಮೇಳದ ಕಲಾವಿದ

## ಹಾರಾಡಿ ಕುಟುಂಬದಲ್ಲಿ ಜನಿಸಿದ ಬಗ್ಗೆ ಹೆಮ್ಮೆ ಇದೆ

ಹಾರಾಡಿ ಕುಟುಂಬದ ಮೂರನೇ ತಲೆಮಾರಿನವನಾದ ನಾನು ಹಾರಾಡಿ ಎನ್ನುವಲ್ಲಿ ಹೆಮ್ಮೆ ಪಡುತ್ತೇನೆ, ನಮ್ಮ ಪೂರ್ವಜರು ಗಾಣಿಗ ಜನಾಂಗಕ್ಕೆ ಕೀರ್ತಿಯನ್ನು ತಂದವರು. ಅವರ ಮೊಮ್ಮಗನಾದ ನಾನು ಅವರು ಸಾಗಿಬಂದ ದಾರಿಯಲ್ಲೇ ಸಾಗಿ ಬಂದಿದ್ದೇನೆ ಎಂಬ ಹೆಮ್ಮೆ ಇದೆ. ನಮ್ಮ ಕುಟುಂಬದಲ್ಲಿ ಇಂದು ಕಲಾವಿದರಾಗಿ ದುಡಿಯುತ್ತಿರುವವರಲ್ಲಿ ನಾನೂ ಒಬ್ಬ, ಬಹುಶ ನಮ್ಮ ತಲೆಮಾರೇ ಕೊನೆಯದೂ ಇರಬಹುದು. ಕುಷ್ಟಗಾಣಿಗರ ಒಡನಾಡಿಯಾಗಿ ಅನೇಕ ಆಟಗಳಲ್ಲಿ ವೇಷಮಾಡಿದ್ದೇನೆ. ಸಾದ್ಯವಾದ ಮಟ್ಟಿಗೆ ಅದೇ ದಾರಿಯಲ್ಲಿ ಸಾಗಿದ್ದೇನೆ'

**ಹಾರಾಡಿ ಸರ್ವೋತ್ತಮ ಗಾಣಿಗ**

ಹಾರಾಡಿ ಪರಂಪರೆಯ ಹಿರಿಯ ಕಲಾವಿದ

# ನಾನು ಕಂಡಂತೆ ನನ್ನ ಅಜ್ಜ



ಹಾರಾಡಿ ಕುಷ್ಟ ಗಾಣಿಗರು ನನ್ನ ಅಜ್ಜಿಯ ತಮ್ಮ. ಅದರೆ ನಾವು ಕೋಡಿಯಲ್ಲಿ ಇದ್ದೆವು. ನನ್ನ ತಂದೆ ಮನೆ ತ್ರಾಸಿ. ಅಲ್ಲಿ ಇರುವುದಕ್ಕೆ ಸರಿಯಾದ ಮನೆ ವ್ಯವಸ್ಥೆ ಇಲ್ಲದ ಕಾರಣ ನನ್ನ ತಾಯಿ ಕೋಡಿಯ ತವರಿನಲ್ಲಿ ಉಳಿದರು. ಹಾಗಾಗಿ ನಾನು ಕೋಡಿಯಾದೆ. ನಾನು 5 ವರ್ಷದ ಬಾಲಕ. ಆವಾಗ ನಮ್ಮ ಕುಟುಂಬ ಹಾರಾಡಿ ಕೋಡಿಯಲ್ಲಿ ಇರುವ ಗಾಣಿಗ ಕಲಾವಿದರು ಒಂದು ಮೇಳಕ್ಕೆ ಆಗುವಷ್ಟು ಇದ್ದರು.. ನಮ್ಮ ಕೋಡಿ ಮನೆಯಲ್ಲಿ ಯಾವಾಗಲೂ ಕಲಾವಿದರು ಬಂದು ಹೋಗುತ್ತಿದ್ದರು. ನನಗೆ ಪೂರ್ಣಕಲಾವಿದರನ್ನು ತಿಳಿದುಕೊಳ್ಳುವ ಬುದ್ದಿಶಕ್ತಿ ಇರಲಿಲ್ಲ. ನನ್ನ ಅಜ್ಜ ನಮ್ಮ ಕೋಡಿಗೆ ಆಗಾಗ ಬರುತ್ತಿದ್ದರು.. ಆಗ ಅಕ್ಕನನ್ನು ನೋಡುವುದಕ್ಕೆ ಶುಭ್ರವಸ್ತ್ರ, ಕಚ್ಚೆ ಹಾಕುತಿದ್ದರು. ಬಿಳಿ ಅಂಗಿ ಕಪ್ಪುಕೋಟು ತಲೆಗೆ ಟೋಪಿ ಇಡುತ್ತಿದ್ದರು. ಬಿಳಿ ತಿರುಗಿದ ಮೀಸೆ ಅವರು ಕ್ರಷ್ಣನ ಪಾತ್ರ ಮಾಡುವಾಗಲೂ ಇರುತ್ತಿತ್ತಂತೆ. ಆಗಿನ ಜನ ಕುಷ್ಟ ಗಾಣಿಗರ ಮೇಲಿನ ಅಭಿಮಾನದಿಂದ ಅದನ್ನು ಒಪ್ಪುತ್ತಿದ್ದರು. ಒಮ್ಮೆ ಆಗ ನನಗೆ 10 ವರ್ಷಅವರ ಮನೆಗೆ ಹೋಗಿದ್ದೆ. ಮಕ್ಕಳಾಟಿಕೆ ಮಾಡಿ ಹಠ ಮಾಡಿದಾಗ ನನ್ನ ತೊಡೆ ಹಿಡಿದು ತಿಪ್ಪಿದ್ದರು. ಆಗ ನಾನು ಮೂತ್ರ ಮಾಡಿಕೊಂಡಿದ್ದು ನೆನಪಿದೆ ಅವರು ಶಿಸ್ತಿನ ಸಿಪಾಯಿಯಾಗಿದ್ದರು. ಅವರ ಮುಂದೆ ಮಾತಾಡುವುದಿರಲಿ ಅವರು ಕೂಡ ಅಷ್ಟೇ ಗಂಭೀರವಾಗಿರುತ್ತಿದ್ದರು ಅವರ ವೇಷ ನೋಡಿದ್ದು ಒಂದು ಮಾತ್ರ ಅದು ರತಿ ಕಲ್ಯಾಣದ ಕೌಂಡ್ಲೀಕ. ಕುಂದಾಪುರ ರಂಗನಹಿತ್ಲು ದೇವಸ್ಥಾನದ ಆಟಕ್ಕೆ ಕರೆಸಿದ್ದರು. ಅಜ್ಜನ ವೇಷ ನೋಡುವುದಕ್ಕಾಗಿ ಹೋಗಿದ್ದೆ, ವೇಷ ಮಾಡಿ ಮುಂಡಾಸು ಕಟ್ಟಿಸಿ ಕೈಹಿಡಿದು ರಂಗಸ್ಥಳಕ್ಕೆ ಬಿಟ್ಟರು, ರಂಗ ಪ್ರವೇಶ ಮಾಡಿದ ಗಾಣಿಗರು 20ರ ಯುವಕನಂತೆ ದೂತ ಬಂದು ಹೇಳಿದಾಗ "ಏನು ಭ್ರಮೆಯೋ ಮಾವನವರಿಗೆ" ಪದ್ಯ ಎತ್ತಿ ಕುಣಿದು ಪಾತ್ರ ಮುಗಿಯುವ ತನಕ ಶ್ರುತಿಬದ್ಧ ಸ್ವರದಿಂದ ಸಾವಿರಾರು ಜನರನ್ನು ರಂಜಿಸಿದರು. ಅವರ ಅರ್ಜುನ ಕೌಂಡ್ಲೀಕ ಪುಷ್ಕಳ ಪಾತ್ರಗಳಿಗೆ ಅವರ ಕಿರುಹೆಜ್ಜೆ ವರ್ಣಿಸಲಸದಳ. ಸೈಂದವ ವದೆಯ ಅರ್ಜುನ ಮಂಗಳಾರತಿಯ ತಟ್ಟೆಎತ್ತಿ ಹಾರಿಸುವಾಗ ದೀಪ ಆರದೆ ಭಾಗವತರ ಮುಂದೆ ಹಾರಿಸುವ ದ್ರಶ್ಯ ಇನ್ನೊಬ್ಬ ಕಲಾವಿದರಿಗೆ ಅಸಾಧ್ಯವಾದದ್ದು. ಅವರ ಕೇದಗೆ ಮುಂದಲೆ ಅಶ್ವತ್ಥ ಎಲೆ ಆಕಾರದ್ದು ಅದನ್ನು ತಿರುಗಿಸುವ ರೀತಿ ಅನ್ಯತ್ರ ಕಾಣಸಿಗದು. ಅದು ಸ್ವಲ್ಪ ಮಟ್ಟಿಗೆ ಮೊಳಹಳ್ಳಿ ಹೆರಿಯ ನಾಯ್ಕರಲ್ಲಿ ಕಾಣಬಹುದು.

ಮೊಳಹಳ್ಳಿ ಹುಬ್ಬಿನ ಶೀನಪ್ಪ ಶೆಟ್ಟಿಎನ್ನುವಅವರಕಟ್ಟಾಅಭಿಮಾನಿಯೋರ್ವರು ಸುದನ್ವ ಕಾಳಗ ಪ್ರಸಂಗದಲ್ಲಿಅವರಿಗೆ ಸ್ವಲ್ಪ ಮದ್ಯಪಾನ ಮಾಡಲು ಪ್ರಚೋದನೆ ಮಾಡಿದರಂತೆ ಬೇಡಾಅಂದರೂ ಕೇಳದೆ ಒತ್ತಾಯಮಾಡಿ ಸ್ವಲ್ಪ ಸರಾಯಿ ಕುಡಿಸಿದರಂತೆ ಇವರು ಕಲಿಸುತ್ತೇನೆ ಇವರೇ ಒತ್ತಾಯ ಮಾಡಿ ಕುಡಿಸಿದ್ದು ಅಂತ ಸುಗರ್ಭೆಯಲ್ಲಿ ಹೇಳಿ ಬಳಿಕ ಪ್ರಭಾವತಿಯಲ್ಲೂ ಹೇಳಿದರಂತೆ. ರಂಗಸ್ಥಳದ ಎದುರು ಹುಲ್ಲಿನ ಮೇಲೆ ಕುಳಿತವರು ನಮ್ಮ ಆಟ ತೆಗೆದ ಕುಷ್ಟ ಅಂತ ಗಲಾಟೆ ಮಾಡಿದರಂತೆ. ಒತ್ತಾಯ ಮಾಡಿ ಕಲಾವಿದರಿಗೆ ಕುಡಿಸಬಾರದು ಎಂದು ತೋರಿಸಿಕೊಟ್ಟರು. ಅದೇ ಶೀನಪ್ಪ ಶೆಟ್ಟರು ಮೇಳಮುಗಿದು ಒಂದು ಗಾಡಿಯಲ್ಲಿ ಕುಷ್ಟ ಗಾಣಿಗರ ಮನೆಗೆ ಅಕ್ಕಿ ಬೆಲ್ಲದ ಡಬ್ಬಿ ಮಳಿಗಾಲಕ್ಕಾಗುವಷ್ಟು ಹಣವನ್ನು ಗಾಣಿಗರು ಇರುವ ತನಕ ಕಳುಹಿಸುತ್ತಿದ್ದರಂತೆ. ಅಂತಹ ಅಭಿಮಾನಿಗಳು ನೂರಾರು ಜನರಿದ್ದರು. ಇಂದಿನ ಆಧುನಿಕ ಕಾಲದ ಬದಲಾವಣೆಯಲ್ಲಿ ಹಾರಾಡಿರಾಮ, ಕುಷ್ಟರಂತ ಅನೇಕ ಕಲಾವಿದರು ಅಳಿದರೂ ಅವರನ್ನು ನೆನಪಿಸುವ ಜನ ಇದ್ದಾರೆ ಅಂದರೆ ಅವರ ಆದರ್ಶದಿಂದ ಹಾರಾಡಿತಿಟ್ಟು ಇನ್ನೂ ಉಳಿದಿದೆ

**ಕೋಡಿ ವಿಶ್ವನಾಥಗಾಣಿಗ**
ಯಕ್ಷಗಾನ ಕಲಾವಿದ

## 2011ರಲ್ಲಿ ಹಂದಾಡಿ ದಿ| ಸುಬ್ಬಣ್ಣ ಭಟ್ಟರು ಬರೆದ ಲೇಖನ

### ಮಹಾನ್ ಕಲಾವಿದ ದಿ| ಹಾರಾಡಿ ಕುಷ್ಟ ಗಾಣಿಗ



ಮಟಪಾಡಿ ದಿ| ಬಚ್ಚ ಗಾಣಿಗರ ಮಕ್ಕಳು ಅವರೊಳಗೆ ಒಂದು ಟ್ರಸ್ಟ್ ರಚಿಸಿಕೊಂಡು, ಅದರ ಉಳಿತಾಯದಿಂದ ಒಬ್ಬ ಯಕ್ಷಗಾನ ಕಲಾವಿದನನ್ನು ಸ್ಮರಿಸುವುದೆಂದು ತೀರ್ಮಾನಿಸಿದ್ದರಂತೆ. ಅವರ ಈ ಆಯ್ಕೆ ಒಂದು ರೀತಿಯಲ್ಲಿ ವಿಚಿತ್ರವಾದೀತು. ಆದರೆ ಸ್ಪಷ್ಟವಾಗಿದೆ. ಅವರು ರಚಿಸಿದ ಟ್ರಸ್ಟ್ ಅವರ ತಂದೆಯ ಹೆಸರಿನದ್ದು, ಕೊಡುವುದು ದಿ| ಹಾರಾಡಿ ಕುಷ್ಟ ಗಾಣಿಗರಿಗೆ. ಕುಷ್ಟ ಗಾಣಿಗರು ಈಗಿಲ್ಲವಾದ್ದರಿಂದ ಅದನ್ನು ಅವರ ಸೋದರಳಿಯ ಯಕ್ಷಗಾನ ದಲ್ಲಿಯೂ ಪ್ರಸಿದ್ಧ ಎರಡನೇ ವೇಷಧಾರಿ ಕೋಡಿ ಶಂಕರ ಗಾಣಗರಿಗೆ. ಶಂಕರ ಗಾಣಿಗರು ಮೇಳಗಳಲ್ಲಿ ಎರಡನೇ ವೇಷ ಮಾಡಿ ಕೊಂಡಿದ್ದವರು. ಈಗ ಅಂಗಡಿ ನಡೆಸುತ್ತಿದ್ದಾರೆ. ಅವರು ಎರಡನೇ ವೇಷಧಾರಿಯಾಗಿ ರೂಪುಗೊಂಡದ್ದು, ಕುಷ್ಟ ಗಾಣಿಗರು ಅವರ ಜೊತೆ ವೇಷ ಮಾಡಿಕೊಂಡು ತರಬೇತಿಕೊಟ್ಟಿದ್ದರಿಂದ. ಕುಷ್ಟ ಗಾಣಿಗರು ಅಷ್ಟು ಅನುಭವಿ ಪುರುಷ ವೇಷಧಾರಿ! ಅವರು ನಿಜವಾಗಿ ಕೃಷ್ಣ ಎಂದು ಕರೆಯಲ್ಪಡಬೇಕಿತ್ತು. ಆದರೆ ಅಂದಿನ ಕಾಲ ಸ್ಥಿತಿಯಿಂದ ಕುಷ್ಟ ಗಾಣಿಗರೆಂದೇ ಕರೆಯಲ್ಪಟ್ಟರು.

ವೇಷಧಾರಿಗಳಾಗಿ ಒಂದನೇ ರಾಮ ಗಾಣಿಗರು, ಎರಡನೇ ಕುಷ್ಟ ಗಾಣಿಗರು, ನಂತರ ನಾರಾಯಣ ಗಾಣಿಗರು ಸ್ತ್ರೀ ವೇಷಧಾರಿಯಾಗಿ ಸ್ಥಾನ ಪಡೆಯುತ್ತಾರೆ. ರಾಮ ಗಾಣಿಗರು ದೊಡ್ಡ ಆಲದ ಮರದ ಹಾಗೆ. ಅದರ ನೆರಳಲ್ಲಿ ಸಣ್ಣ ಗಿಡಗಳು ಬೆಳೆಯುವುದಿಲ್ಲ. ಒಂದು ಕಾಲದಲ್ಲಿ ಹಾರಾಡಿಯಲ್ಲಿ ಹಾಗಾಗಿತ್ತು. ಆದರೂ ಹಾರಾಡಿಯಲ್ಲಿ ಒಂದು ಯಕ್ಷಗಾನ ತಂಡ ಉತ್ತಮವಾಗಿತ್ತು. ಅದರಲ್ಲಿ ಕುಷ್ಟ ಗಾಣಿಗರು ಒಬ್ಬರು. ಒಳ್ಳೆಯ ವೇಷಧಾರಿಯಾಗಿ ಮಿಂಚಿನಂತೆ ರಂಗಸ್ಥಳ ಪ್ರವೇಶ ಇತ್ಯಾದಿಗಳಿಂದ ಮೆರೆದರು. ಅವರು ಪುರುಷಕ್ಕಿಂತ ಮೊದಲು ಅಭಿಮನ್ಯು ಮುಂತಾದ ವೇಷಗಳನ್ನು ಹೇಗೆ ಮಾಡುತ್ತಿದ್ದರೆಂದು ಊಹಿಸುವುದೇ ಕಷ್ಟ. ಅವರನ್ನೇ ಕೇಳಿದಾಗ ಅವರು ಹೇಳುತ್ತಿರಲಿಲ್ಲ. ಅವರ ಉತ್ತರ ಪದ್ಯರೂಪದಲ್ಲೇ ಹೀಗಿತ್ತು. "ಏನ ಹೇಳಿದರೇನು ಭಾಗವತ ಕಿಣಿಯರಿಗೆ ಸಮನಾದ ಭಾಗವತ ಇನ್ನೊಬ್ಬನಿಲ್ಲ" ಎಂದು ಹೇಳುತ್ತಿದ್ದರು. ಇರಲಿ ಅಂತೂ ಒಬ್ಬ ಒಳ್ಳೆಯ ಪುರುಷ ವೇಷಧಾರಿಯಾಗಿ ಪ್ರಶಸ್ತಿಗಳನ್ನು ಪಡೆದು ಮೆರೆದರು. ಅವರ ಬಂಧುವಾದ ಕೋಡಿ ಶಂಕರ ಗಾಣಿಗರು ಕೂಡ ಉತ್ತಮ ಕಲಾವಿದರೇ. ಆದ್ದರಿಂದ ಮಟಪಾಡಿ ಬಚ್ಚ ಗಾಣಿಗರ ಮಕ್ಕಳು ಮಾಡಿದ ಈ ಕೆಲಸ ಉತ್ತಮವೇ ಆಗಿದೆ.

## "ರಾಮನ ಕರ್ಣ ಕುಷ್ಠನ ಅರ್ಜುನ"



ನಮ್ಮ ಎಂಟನೇಯ ತರಗತಿಯ ಕನ್ನಡ ಪಾಠ ಒಂದರಲ್ಲಿ ಪಾತಾಳಿ ಪರಮಯ್ಯ ಹೇಳುವ ಮಾತಿವು. ಡಾ। ಶಿವರಾಮ ಕಾರಂತರು ತಮ್ಮ ಯಕ್ಷ ಶಿಕ್ಷಣ ಅಭಿಯಾನದಲ್ಲಿ ಹೆಜ್ಜೆ ಕಲಿಸಲು ಮಾಡಿಕೊಂಡ ಆಯ್ಕೆ ಹಾರಾಡಿ ಕುಷ್ಠ ಗಾಣಿಗರು. ಕಲಾವಿದ ತನ್ನ ಕಿರುಬೆರಳನ್ನು ಮಡಚದೇ ಕುಣಿದಲ್ಲಿ ಆತ ಕುಷ್ಠ ಗಾಣಿಗರ ಶಿಷ್ಯನೋ, ಶಿಷ್ಯನ ಶಿಷ್ಯ ಎಂದು ಧಾರಾಳವಾಗಿ ತಿಳಿದುಕೊಳ್ಳಬಹುದು. ಬ್ರಹ್ಮಾವರ ಮಹಾಲಿಂಗೇಶ್ವರ ದೇವಸ್ಥಾನದ ಎಡಸುತ್ತಿನ ಎಡಕ್ಕಿದ್ದ ಖಾಸಗಿ ಕಟ್ಟಡದ ಮಾಳಿಗೆಯಲ್ಲಿ ಅವರು ನಡೆಸುತ್ತಿದ್ದ ತರಬೇತಿಯನ್ನು ನೋಡಿ ಮನೆಗೆ ಹೋಗಿ ಶಾಲೆಯಿಂದ ಬರಲು ತಡ ಯಾಕೆ ಎಂದು ಬೈಸಿಕೊಳ್ಳುವುದು ರೂಢಿಯಾಗಿತ್ತು. ಮಂದರ್ತಿ ಮೇಳದ ಚಿತ್ರಸೇನ ಕಾಳಗ ನಾನು ಕಂಡ ಮೊದಲ ಯಕ್ಷಗಾನ ಅಥವಾ ಆಟ. ದಿ। ರಾಮ ಗಾಣಿಗರ ಚಿತ್ರಸೇನ, ದೊಡ್ಡ ಮುಂಡಾಸುಗಳು, ತಟ್ಟಿ ಬಳಿ ಬಿಟ್ಟರೆ ಬೇರೆ ಏನೂ ನೆನಪಿನಲ್ಲಿಲ್ಲ. ಬ್ರಹ್ಮಾವರದಲ್ಲೊಂದು ಪ್ರಚಂಡ ಸ್ಪರ್ಧೆಯ ಟಿಕೆಟ್ ಜೋಡಾಟ. ಅಲ್ಲಿ ಒಂದು ಭಾರೀ ಪರಿವರ್ತನೆ. "ಕುಷ್ಠನ ಕರ್ಣ ವೀರಭದ್ರನ ಅರ್ಜುನ".

ಬುದ್ಧಿ ಬಲಿಯುವಾಗ ಕುಷ್ಠ ಗಾಣಿಗರು ನಿವೃತ್ತರಾಗಿದ್ದರೆನ್ನಬಹುದು. "ಆದ್ಯಂಪುರಾಣ ಪುರುಷಂ ನವಯವ್ವನಂ ಚ" ಭಾವಚಿತ್ರವಿರಲಿ, ಅರ್ಚ ವಿಗ್ರಹವಿರಲಿ ಕೃಷ್ಣ ಸದಾ ನವ ಯುವಕ. ಮದ್ರಾಸಿನ ಪಾರ್ಥ ಸಾರಥಿ ದೇವಸ್ಥಾನದಲ್ಲಿ ಮಾತ್ರ ಅವನಿಗುಂಟು ಮೀಸೆ. ಯಕ್ಷಗಾನದ ಯಾವುದೇ ತಿಟ್ಟಿನಲ್ಲಿ ಕೃಷ್ಣನಿಗೆ ಮೀಸೆ ಇಲ್ಲ. ಆದರೆ ಕುಷ್ಠ ಗಾಣಿಗರ ಕೃಷ್ಣನಿಗೆ ಕಟ್ಟು ಮೀಸೆ. ಅಂದು ಯಕ್ಷಗಾನ ಕಲಾವಿದ ಮೀಸೆ ಇಟ್ಟು ವೃತ್ತಿ ನಿರಂತರನಾಗಿರುವುದು ಅಸಂಬವವೆನ್ನಬಹುದು. ಆದರೆ ಕುಷ್ಠ ಗಾಣಿಗರಿಗಿತ್ತು ಮೀಸೆ. ಅಂತಿಂತ ಮೀಸೆ ಅಲ್ಲ. ತೋನ್ಸೆ ಜನಾರ್ಧನ ಅನಂತ ಗಾಣಿಗರ ಮೀಸೆ ಕುಷ್ಠ ಗಾಣಿಗರ ಮೀಸೆಯ ಮುಂದೆ ಏನೇನೂ ಅಲ್ಲ. ಅದನ್ನು ಮುಚ್ಚಬೇಕಾದರೆ ಹಾರಾಡಿಯವರ ಕಟ್ಟು ಮೀಸೆ ಒಂದೇ ದಾರಿ. "ರಾಮನ ಕರ್ಣ ಕುಷ್ಠನ ಅರ್ಜುನ" ಇದುವರೆಗೆ ಬೇರೆ ಯಾರಿಗೂ ದಕ್ಕಿದ್ದಿಲ್ಲ.

ಅವರು ಯಾವುದೇ ಪಾತ್ರ ಮಾಡಿದರೂ ಉಳಿದವರು ಯಾರೇ ಆದರೂ ಕಳೆಗುಂದುತ್ತಿದ್ದದ್ದು ವಾಸ್ತವ. ಹಾರಾಡಿ ರಾಮ ಗಾಣಿಗರು ಮಾತ್ರ ಅದಕ್ಕೆ ಅಪವಾದವೆಂದು ಬಲ್ಲವರು ಅನ್ನುತ್ತಿದ್ದರು. ರಾಮ ಗಾಣಿಗರ ಬಗ್ಗೆ ಕುಷ್ಠ ಗಾಣಿಗರಿಗಿದ್ದ ಅಪಾರ ಗೌರವವು ಅದಕ್ಕೆ ಒಂದು ಕಾರಣವಿದ್ದಿತ್ತು. 60 ಮೀರಿದ ಕಲಾಭಿಮಾನಿಗಳಲ್ಲಿ – ಕುಷ್ಠ ಗಾಣಿಗರ ಭರತ ಹೇಗೆ? ಲಕ್ಷ್ಮಣ ಹೇಗೆ? ಪುಷ್ಕಳ ಹೇಗೆ? ನಂದಿ ಹೇಗೆ? ದಕ್ಷ ಹೇಗಿರುತ್ತಿತ್ತು? ಬೇರೆ ಬೇರೆ ಪ್ರಸಂಗಗಳಲ್ಲಿ ಅವರ ಅರ್ಜುನ ಅದೆಷ್ಟು ವಿಭಿನ್ನವಾಗಿರುತ್ತಿತ್ತೆಂದು ಕೇಳುತ್ತ ದಾಖಲೆಗಳನ್ನು ಬರೆದಿಟ್ಟು ಚರ್ಚಿಸಿದರೆ ಅದೊಂದು

ಗ್ರಂಥವಾಗಿ ಸಾಕ್ಷ ಚಿತ್ರವಾಗಿ ಮೂಡಿ ಬಂದೀತು.ಅವರು ರಂಗಸ್ಥಳದಲ್ಲಿದ್ದರೆ ಕಾರ್ಮೋಡಗಳ ಮಧ್ಯೆ ಕೋಲ್ಮಿಂಚು ಸೆಳೆದ ಅನುಭವ.

ಆಗಾಗ ಅತಿಥಿ ಕಲಾವಿದರಾಗಿ ಕಾಣಿಸಿಕೊಳ್ಳುತ್ತಿದ್ದ ಅವರನ್ನು ರಂಗಸ್ಥಳದವರೆಗೆ ಕೈಹಿಡಿದು ತರುತ್ತಿದ್ದರೂ ರಂಗಸ್ಥಳದಲ್ಲವರು ಯುವಕರಾಗಿರುತ್ತಿದ್ದರು. ಅವರೊಬ್ಬ ಅದ್ವಿತೀಯ ಕಲಾವಿದ ಅವರು ಯಾರನ್ನೂ ಅನುಕರಿಸಿದ್ದಿಲ್ಲ. ಅವರಿಡುತ್ತಿದ್ದ ಹೆಜ್ಜೆ, ಅವರು ಬರೆಯುತ್ತಿದ್ದ ಮುಖ, ಕಟ್ಟುತ್ತಿದ್ದ ಕೇದಗೆ ಮುಂದಲೆ, ಹೊಡೆಯುತ್ತಿದ್ದ ಶರ, ಒರೆಯಿಂದೆಳೆಯುವ ಖಡ್ಗ, ಎತ್ತರದ ಸ್ವರ ಏನಿದ್ದರೂ ಅದು ಹಾರಾಡಿ ಕುಷ್ಠ ಗಾಣಿಗರದ್ದೇ. ಕಾಲಿಗೆ ಗೆಜ್ಜೆ ಕಟ್ಟಿದ ಕಲಾವಿದನಿಗೆ ಎರಡನೇ ವೇಷಧಾರಿ ಆಗುವ ಹಂಬಲ ಇದ್ದೇ ಇರುತ್ತದೆ. ಅಂತ ಹಂಬಲವನ್ನು ಬದಿಗಿಟ್ಟು ಪುರುಷವೇಷದ ಸ್ಥಾನಮಾನವನ್ನು ಅತೀ ಉನ್ನತ ಮಟ್ಟಕ್ಕೆತ್ತಿದವರು ಹಾರಾಡಿ ಕುಷ್ಠ ಗಾಣಿಗರು. ಎತ್ತರದಲ್ಲಿ ಸರಾಸರಿಗಿಂತ ಕಡಿಮೆ ಅನ್ನಬಹುದಾದ ದೇಹದಿಂದ ಅವರು ಆ ಪಾತ್ರಗಳನ್ನು ಬೆಳೆಸುತ್ತಿದ್ದ ರೀತಿ ಬರಿಸುತ್ತಿದ್ದ ಎತ್ತರ ಅದ್ವಿತೀಯ.

ಸಮಾಜ ಬಾಂಧವರಿಗಾಗಲೀ ಕಲಾಭಿಮಾನಿಗಳಾಗಲೀ ಕುಷ್ಠ ಗಾಣಿಗರು ಸಂಕಟದಲ್ಲಿದ್ದಾಗ ಸಹಾಯ ಹಸ್ತದ ನಿರೀಕ್ಷೆಯಲ್ಲಿದ್ದಾಗ......................

ಢೇರೆ ಮೇಳದ ರಂಗಸ್ಥಳವನ್ನು ಏರಲಾಗದ ಕುಷ್ಠ ಗಾಣಿಗರನ್ನು ಕೈಕೊಟ್ಟು ಮೇಲೆಳೆದು ಕುಣಿಸಿದ್ದೇವೆ. ಬಹು ನಿರೀಕ್ಷೆಯ ಅವರ ಸಹಾಯಾರ್ಥ ಆಟದಲ್ಲಿ ಧಾರಾಳವಾಗಿ ಕೈಕೊಟ್ಟಿದ್ದೇವೆ. ಅವರ ಸವಿನೆನಪಾದರೂ ಉಳಿಯುವಂತಾಗಲಿ.

## ಅದ್ವಿತೀಯ ಕಲಾವಿದ ದಿ| ಹಾರಾಡಿ ಕುಷ್ಠ ಗಾಣಿಗರ ಅದ್ವಿತೀಯ ಪಾತ್ರಗಳು

'ರಾಮನ ಕರ್ಣ ಕುಷ್ಠನ ಅರ್ಜುನ' ಬಿಟ್ಟು ಅವರು ಬೇರೆ ಪಾತ್ರಗಳಲ್ಲಿ ಮಿಂಚಿರಲಿಲ್ಲವೆಂದಲ್ಲ. ರಾಮ ಗಾಣಿಗರ ಹಿರಣ್ಯ ಕಷಿಪು, ಕೆರೆಮನೆ ಶಿವರಾಮ ಹೆಗ್ಡೆಯವರ ಕೌರವ, ಉಡುಪಿ ಬಸವ ನ್ಯಾಯಕರ ವಿಭೀಷಣ, ಮಟಪಾಡಿ ವೀರಭದ್ರ ನಾಯಕರ ಅತಿಕಾಯ, ಕೆರೆಮನೆ ಮಹಾಬಲ ಹೆಗ್ಡೆಯವರ ಕೀಚಕ, ಶಂಭು ಹೆಗ್ಡೆಯವರ ಶ್ರೀ ರಾಮ, ಶ್ರೀ ಚಿಟ್ಟಾಣಿ ರಾಮಚಂದ್ರ ಹೆಗ್ಡೆಯವರ ಭಸ್ಮಾಸುರ, ಶ್ರೀ ಜಲವಳ್ಳಿ ವೆಂಕಟೇಶರವರ ಶನಿ, ಇವೆಲ್ಲ ಅವರವರದ್ದೇ ಪಾತ್ರಗಳು.

ಶ್ರೀಮತಿ ಮಾರ್ತಾ ಆಸ್ಟನ್ ಅವರಲ್ಲಿ ತನ್ನನ್ನು ಅರ್ಜುನನೆಂದೇ ದಿ| ಹಾರಾಡಿ ಕುಷ್ಠ ಗಾಣಿಗರು ಹೇಳಿಕೊಂಡಿದ್ದರು. ಆದರೂ ಅವರು ನಿರ್ವಹಿಸಿದ ಎಲ್ಲ ಪಾತ್ರಗಳೂ ಅದ್ವಿತೀಯವಾಗಿದ್ದವು. ಅದನ್ನು ಕಂಡು ಆನಂದಿಸಿದವರು ಇಂದು 60ರ ಗಡಿ ದಾಟಿದವರು ಯಾ 60ರ ಅಂಚಿನಲ್ಲಿರುವರು.

## ದಿ| ಹಾರಾಡಿ ಕುಷ್ಠ ಗಾಣಿಗರ ಪುಷ್ಕಳ

ರಾಮಾಶ್ವಮೇಧದ ವೀರಮಣಿ ಕಾಳಗ ಜೋಡಾಟ ಕೂಡಾಟಗಳಲ್ಲಿ ಒಂದು ಅನಿವಾರ್ಯ ಪ್ರಸಂಗ. ವೀರಮಣಿ ಪಾತ್ರವನ್ನು ಶ್ರೀ ಕೋಡಿ ಶಂಕರ ಗಾಣಿಗರಿಗೆ ಬಿಟ್ಟುಕೊಟ್ಟು ತಾನು ಹನುಮಂತನ ಪಾತ್ರ ಮಾಡಿದ್ದರು ದಿ| ಉಡುಪಿ ಬಸವ ನಾಯಕರು.

ಇಂದಿನ ಎರಡನೇ ವೇಷಧಾರಿಗಳಿರಲಿ, ಪುರುಷ ವೇಷಧಾರಿಗಳೂ ಒಲ್ಲೆನೆಂದು ಪುಂಡು ವೇಶಧಾರಿಗಳಿಗೆ ಧಾರಾಳವಾಗಿ ಬಿಟ್ಟು ಕೊಡುತ್ತಿರುವ ವೇಷ ಈ ಪ್ರಸಂಗದ ಪುಷ್ಕಳ.



1985 ಆಸುಪಾಸಿನಲ್ಲಿ ಬಯಲಾಟ ಒಂದನ್ನು ನೋಡುತ್ತಿದ್ದೆ. ಬಣ್ಣ ಬಣ್ಣದ ಖಾಲಿ ಕುರ್ಚಿಗಳು ಕಲಾವಿದರನ್ನು ಪ್ರೋತ್ಸಾಹಿಸುವುದಕ್ಕೆ ಮುಂಚಿನ ದಿನಗಳು. ರಂಗಸ್ಥಳದಿಂದ ಗ್ಯಾಸ್‌ಲೈಟ್ ಮಾಯವಾಗಿ ವಿದ್ಯುತ್ ದೀಪ, ಮೈಕ್ ಬಂದಾಗಿತ್ತು. ಬ್ರಹ್ಮಚಪ್ಪರ ಮಾಯವಾಗಿದ್ದರೂ ರಂಗಸ್ಥಳದ ಮೂರು ಬದಿಯಲ್ಲಿ ಹೆಂಗಸರು, ಮಕ್ಕಳು ಮತ್ತು ಹಿರಿಯ ಪುರುಷರು ಮಡಲು, ತುಳು ಹುಲ್ಲಿನ ಮೇಲೆ ಸಾಧ್ಯವಾದಲ್ಲಿ ತಾವೇ ತಂದ ಚಾಪೆ ಹಾಸಿ ಆಟ ನೋಡುತ್ತಿದ್ದ ಕಾಲ. ಈ ಸಭೆಗೆ ಶಾಲೆಯ ಬೆಂಚಿನ ಒಂದು ರಕ್ಷಣೆ. ಅದರ ಹಿಂದೆ ನಿಂತು ಆಟ ನೋಡುತ್ತ, ಬೀಡಿ ಸೇದುತ್ತಾ, ವೀಳ್ಯ ಮೆಲ್ಲುತ್ತ ಹರಟೆ ನಿರತ ಪುರುಷ ಪ್ರೇಕ್ಷಕರು. ರಕ್ಷಣಾ ವ್ಯವಸ್ಥೆಯ ಶಾಲೆ ಬೆಂಚಿನಲ್ಲಿ ನನಗೂ ಒಂದು ಅವಕಾಶ ಸಿಕ್ಕಿತ್ತು. ಪ್ರಸಂಗ: ವೀರಮಣಿ ಕಾಳಗ, ಕಶೆವೇಷದ ನಾರಿಯೊಂದಿಗೆ ಯುದ್ಧ ಮಾಡುತ್ತಿದ್ದ ಪುಷ್ಕಳನ ವರೆಯಿಂದ ಖಡ್ಗ ಹೊರಬರದಂತೆ ಆಕೆ ಮಾಟಗಾತಿಯಂತೆ ಕೈಯಾಡಿಸುತ್ತಿದ್ದಳು. ಪುಷ್ಕಳ ಒಂದೇ ಸುಮ್ಮನೇ ಖಡ್ಗವನ್ನು ಒರೆಯಿಂದ  ಹೊರಗೆಳೆಯುತ್ತಿದ್ದ. ಖಡ್ಗವನ್ನು ಒರೆಗೆ ಬೆಸುಗೆ ಹಾಕಿದ್ದರೂ ಮುರಿದ ಒರೆಬೇಕಿತ್ತು. ಹಾಗಿತ್ತವನ ಪ್ರಯತ್ನ, ಸಾಲದೆಂಬಂತೆ ಎರಡೂ ಕಾಲಿನ ಮಧ್ಯೆ ಒರೆಯನ್ನಿಟ್ಟು ಎಳೆಯುತ್ತ ವಿಲವಲನೆ ಒದ್ದಾಡುತ್ತಿದ್ದ ದೃಶ್ಯವನ್ನು ನೋಡುತ್ತಿದ್ದಾಗ ಸಣ್ಣವನಾಗಿದ್ದಾಗ ನಾನು ಕಂಡ ಆಟದ ನೆನಪಾಯಿತು.

ತಂದೆಯವರದ್ದೇನಿದ್ದರೂ ಬೆಳಗಿನ ಜಾವದ ಆಟಕ್ಕೆ ಪ್ರಾಶಸ್ತ್ಯ. ಚಿಕ್ಕ ತಂದೆಯವರು ಭಜನಾ ಪ್ರಿಯರು, ದೃಷ್ಟಿಯ ಕೊರತೆ ಇದ್ದ ಅಜ್ಜಿ, ಸದಾ ದುಡಿದು ದಣಿದಿರುತ್ತಿದ್ದ ಅಮ್ಮ, ಚಿಕ್ಕಮ್ಮ ಆಟದಿಂದ ದೂರ. ಸಣ್ಣ ಸೋದರತ್ತೆ (ಸಣ್ಣ ಮಾಯಿ)ಗೆ ಹಬ್ಬ, ಆಟಗಳೆಂದರೆ ಪಂಚಪ್ರಾಣ. ನಮ್ಮನ್ನು ಜತೆಗೆ ಒಯ್ದು ಹತ್ತಿರದಲ್ಲೇ ಕುಳ್ಳಿರಿಸಿ ನೆಲಗಡಲೆ, ಚಕ್ಕುಲಿ, ಮಂಡಕ್ಕಿಯಂತಹ ತಿಂಡಿ ಕೊಡಿಸಿ ನಿದ್ದೆಬಂದಲ್ಲಿ ಮಲಗಿಸಿಕೊಂಡು, ಚಳಿ ಆದಲ್ಲಿ ಒಲ್ಲಿ ಹೊದಿಸಿ, ಬೆಳಗಾದಾಗ ಮಲಗಿದ್ದರೆ ಎಬ್ಬಿಸಿ ಮನೆಗೆ ಕರೆತರುತ್ತಿದ್ದುದಲ್ಲದೆ ಆಟ ನೋಡಿದ ಅಪರಾಧಕ್ಕೆ ಮನೆಯಲ್ಲಿ, ಶಾಲೆಯಲ್ಲಿ ಶಿಕ್ಷೆಯಾಗದಂತೆ ರಕ್ಷಣೆಯನ್ನು ಒದಗಿಸುತ್ತಿದ್ದರು.

ಪ್ರಸಂಗ ವೀರಮಣಿ ಕಾಳಗ, ಯಾರ್ಯಾರದ್ದು ಯಾವ ಯಾವ ವೇಷ ಎಂದು ತಿಳಿಯುವ ಬುದ್ಧಿಮಟ್ಟವಿರಲಿಲ್ಲ. ಕುದುರೆ ನೀರಿಗಿಳಿದು ಮಾಯವಾಗಿ ಕಶೆವೇಷದ ಹೆಂಗಸರು ಯುದ್ಧಕ್ಕೆ ಸನ್ನದ್ದರಾದಾಗ ನಾರಿಯರೊಂದಿಗೆ ಸಮರದ ಅನಿವಾರ್ಯತೆಯಿಂದ ಶತ್ರುಘ್ನ ಚಿಂತಿತನಾಗಿದ್ದ.

ಒಮ್ಮೆಗೆ ಚಂಡೆಯ ಶಬ್ದ ಭಾಗವತರ ಎತ್ತರದ ಸ್ವರದ ಹಾಡಿನೊಂದಿಗೆ ಪುಷ್ಕಳನ ಪ್ರವೇಶವಾಯಿತು. ಹಾರಾಡಿ ಕಟ್ಟು ಮೀಸೆಯ ಕುಷ್ಟಗಾಣಿಗರ ಪುಷ್ಕಳನ ಮಿಂಚಿನ

ಪ್ರವೇಶ, ರಂಗಸ್ಥಳದಲ್ಲೇ ಅಲ್ಲ ಇಡೀ ಸಭೆಯಲ್ಲಿ ಮಿಂಚಿನ ಅನುಭವ ಅದನ್ನೇ ಕಾಯುತ್ತ ನಿಂತಿದ್ದ ಅಭಿಮಾನಿಗಳು. ಕಟ್ಟುಮೀಸೆಯ ಕುಷ್ಠ ಗಾಣಿಗರ ಪುಷ್ಕಳ ಬಂದಾಗ ರಂಗಸ್ಥಳಕ್ಕೆ ಮೀಸೆ ಬಂತೋ ಎಂಬ ಅನುಭವ. ಅವರ ಕಿರುಹೆಜ್ಜೆಯ ಕುಣಿತ ಬಹಳ ಹೆಸರುವಾಸಿ. ಮೈಕಿಲ್ಲದಿದ್ದರೂ ಮೈಲುಗಟ್ಟಲೆ ದೂರಕ್ಕೆ ಕೇಳಿಸುತ್ತಿತ್ತು ಅವರ ಎತ್ತರದ ಪ್ರಾಸಬದ್ಧ ಧ್ವನಿ. ಪ್ರವೇಶ, ಮುಕ್ತಾಯ, ಚಿಕ್ಕಪ್ಪನಿಗೆ ವಂದಿಸಿದ ಬಗೆ, ಒಲ್ಲೆನೆಂದರೂ ಒತ್ತಾಯಿಸುತ್ತಾ ರಣವೀಳ್ಯವನ್ನು ಪಡೆದ ಅವರ ಮುಖದಲ್ಲಿದ್ದ ಸಂತಸ. ಬಯಲು ಗದ್ದೆಯಲ್ಲಿ ಆಟ ನೋಡುತ್ತಿಲ್ಲ, ನಿಜವಾಗಿ ಅಂದು ನಡೆಯುತ್ತಿದ್ದ ಘಟನೆಯನ್ನೇ ನೋಡುತ್ತಿದ್ದೇವೆಂಬಂತೆ ನಾವು ನಮ್ಮನ್ನೇ ಮರೆಯುತ್ತಿದ್ದೆವು.

ಯುದ್ಧಕ್ಕೆ ಮುಂಚಿತವಾಗಿ ಮಹಿಳೆಯರಿಗೆ ಈ ಕೆಲಸ ಬೇಡವೆಂದು ಅವರು ಆಡಿದ ಹಿತನುಡಿ. ಅದು ವಿಫಲವಾದಾಗ ಅನಿವಾರ್ಯತೆಯಿಂದ ಧನುಶರವನ್ನು ಕೈಗೆತ್ತಿಕೊಂಡು ಯುದ್ಧನಿರತನಾದ ಪುಷ್ಕಳ. ಭರ್ಜರಿ ಯುದ್ಧದ ಕುಣಿತವಿರುತ್ತಿದ್ದ ದಿನಗಳವು. ಅದರಲ್ಲೂ ಕುಷ್ಠ ಗಾಣಿಗರು ಕುಣಿಯುವ ಸೊಬಗೇ ಬೇರೆ. ಬಿಲ್ಲಿಗೆ ಬಾಣ ಹೂಡಿ ಹೊಡೆಯುವುದಕ್ಕೆ ಉದ್ಯುಕ್ತರಾದಾಗ ಬಾಣ ಹೊಡೆಯುವುದರಲ್ಲಿ ಪುಷ್ಕಳ ವಿಫಲನಾದ ದೃಶ್ಯ ವಿವರಿಸುವ ಸಾಮರ್ಥ್ಯ ನನಗಿಲ್ಲ.

1970ರ ದಶಕದಲ್ಲಿ ಮಂದರ್ತಿಯ ತಂತ್ರಾಡಿಯಲ್ಲಿ ನಮ್ಮ ದೊಡ್ಡಮ್ಮ ಮಂದರ್ತಿ ಮೇಳದ ಆಟ ಆಡಿಸಿದ್ದರು. ಅವರ ಮಗ ನಮ್ಮಣ್ಣ ಮಟಪಾಡಿ ಸಂಜೀವ ಗಾಣಿಗರು ಕುಷ್ಠ ಗಾಣಿಗರನ್ನು ಅತಿಕಲಾವಿದರನ್ನಾಗಿ ಕರೆಸಿ ಅವರಿಂದ ಪುಷ್ಕಳ ಮಾಡಿಸಿದ್ದರಂತೆ. ನಾನು ಕಂಡ ಮತ್ತು ಅವರು ವರ್ಣಿಸುವ ಪುಷ್ಕಳರಿಗೆ ಕಡಿಮೆ ಅಂದರೆ 15 ವರ್ಷಗಳ ಅಂತರವಿತ್ತು. ಆದರೆ ಆ ಇಳಿ ವಯಸ್ಸಿನಲ್ಲಿ ಕೂಡ ಪಾತ್ರದಲ್ಲಿ ಅದೇ ಮಿಂಚನ್ನು ಕಾಯ್ದು ಕೊಂಡಿದ್ದರು ಕುಷ್ಠ ಗಾಣಿಗರು.

ಧನು ಶರಗಳು ಕೈಗೊಟ್ಟಾಗ ರಥದ ಮೇಲಿದ್ದ ಒರೆಯೊಂದಿಗಿದ್ದ ಖಡ್ಗವನ್ನು ಕೈಗೆತ್ತಿಕೊಂಡ ಅದರ ಜಾಪೇ ಬೇರೆ. ಎಡಗೈಯಲ್ಲಿ ಒರೆಯನ್ನು ಕಿರು ಹೊಟ್ಟೆಗೆ ತಾಗಿಸಿಕೊಂಡು ಯುದ್ಧ ನಿರತನಾದ ಪುಷ್ಕಳ ಬಲಗೈಯಿಂದ ಕತ್ತಿಯನ್ನೆಳೆಯುವಾಗ ಕಂಡುಬಂದ ಸಹಜತೆ, ಕತ್ತಿ ಬಾರದಾಗ ಆಶ್ಚರ್ಯ ಮತ್ತು ಮಾಡಿದ ಪ್ರಯತ್ನ, ಅಲ್ಲೂ ವಿಫಲನಾದಾಗ ಜಿಗುಪ್ಸೆಯಿಂದ ಅದನ್ನು ಬದಿಗಿಟ್ಟ ಪರಿ, ಅದೆಲ್ಲ ಕೇವಲ ನೆನಪಾಗಿಯೇ ಉಳಿದವು. ಆ ಸೋಲಿನಿಂದ ಮನನೊಂದ ಪುಷ್ಕಳ ಅನಿವಾರ್ಯವಾಗಿ ಹೆಣ್ಣೊಬ್ಬಳೊಂದಿಗೆ ಮಲ್ಲ ಯುದ್ಧಕ್ಕೆ ಅಣಿವಾಗುವಾಗ, ಯುದ್ಧ ನಿರತನಾಗಿದ್ದಾಗ ಮಧ್ಯೆ ಯುದ್ಧ ನಿಲ್ಲಿಸಲು ಚಿಕ್ಕಪ್ಪ ಸೂಚಿಸಿದಾಗ ಒಲ್ಲದ ಮನಸ್ಸಿನಿಂದ ಯುದ್ಧ ನಿಲ್ಲಿಸುವಾಗ ಅವರು ಮಾಡಿದ ಪಾತ್ರನಿರ್ವಹಣೆ. ಎಲ್ಲವೂ ಅದ್ವಿತೀಯ. ಪ್ರಸಂಗದಲ್ಲಿ ಪುಷ್ಕಳ ಸೋತಂತೆ ಅನಿಸಲೇ ಇಲ್ಲ. ಸೋತೂ ನಮ್ಮೆಲ್ಲರ ಮನಗೆದ್ದಿದ್ದ ಆ ಪುಷ್ಕಳ.

ಸಂಚಾರಿ ಯಕ್ಷಗಾನ ಭಂಡಾರ ಬಿರುದಾಂಕಿತ ದಿ| ಕಾಂತಪ್ಪ ಮಾಸ್ಟರ್ ತನ್ನ ದ್ವಿತೀಯ ಪುತ್ರನಿಗೆ ಪುಷ್ಕಳ ಎಂದು ಹೆಸರಿಡಲು ಕಾರಣ ದಿ| ಕುಷ್ಠ ಗಾಣಿಗರ ಪುಷ್ಕಳನೇ ಇದ್ದಿರಬಹುದು.

ಪಾಂಡವಾಶ್ವಮೇಧದಲ್ಲಿ ಸುಧನ್ವ, ಬಬ್ರುವಾಹನ, ತಾಮ್ರಧ್ವಜ ಪ್ರಮುಖ ಪ್ರಸಂಗಗಳು. ರಾಮಾಶ್ವಮೇಧವೆಂದರೆ ವೀರಮಣಿ ಮಾತ್ರ ಎಂಬ ಭಾವನೆಯುಂಟು. ಹಾರಾಡಿ ರಾಮ ಗಾಣಿಗರ ಕಾಲದಲ್ಲಿ ರಾಮಾಶ್ವಮೇಧದ ಸುಭಾಹು ಕಾಳಗದಲ್ಲಿ ರಾಮ ಗಾಣಿಗರು ಸುಭಾಹುವಿನ ಮಗ ದಮನ ಎಂಬ ಮಂಡಾಸಿನ ವೇಷವನ್ನು ಚೆನ್ನಾಗಿ ಮಾಡುತ್ತಿದ್ದರಂತೆ ಆ ದಮನನ ಎದುರಿಗೆ ಕುಷ್ಠ ಗಾಣಿಗರು ಪುಷ್ಕಳನ ಪಾತ್ರ ನಿರ್ವಹಿಸುತ್ತಿದ್ದುದರಿಂದಲೇ ಆ ಪ್ರಸಂಗಕ್ಕೆ ಅಷ್ಟೊಂದು ಬೇಡಿಕೆ. ದಿ| ಹಾರಾಡಿ ಕುಷ್ಠ ಗಾಣಿಗರು ವಿದ್ಯುನ್ಮತಿ ಕಲ್ಯಾಣದ ಜಯಂತನಾಗಿ ಅದ್ವಿತೀಯ ಪಾತ್ರಗಳನ್ನು ನಿರ್ವಹಿಸುತ್ತಿದ್ದದನ್ನು ಬಾಲಣ್ಣ ಸೊಗಸಾಗಿ ವರ್ಣಿಸಿದ್ದರು.

## ಯಕ್ಷ ಗುರುವಾಗಿ ದಿ| ಹಾರಾಡಿ ಕುಷ್ಠ ಗಾಣಿಗರು

ದಿ| ಮಟಪಾಡಿ ವೀರಭದ್ರ ನಾಯಕರನ್ನು ಇಂದಿಗೂ ಗುರುವೀರಭದ್ರ ನಾಯಕರೆಂದು ಕರೆಯುತ್ತೇವೆ. ದಿ| ಹಾರಾಡಿ ಕುಷ್ಠ ಗಾಣಿಗರು ಕೂಡ ಒಬ್ಬ ಗುರುವಾಗಿದ್ದರು. ಅವರು ಹೆಜ್ಜೆ ಕಲಿಸುತ್ತಿದ್ದ ಕಟ್ಟಡ ಈಗಲೂ ಇದೆ. ಡಾ| ಶಿವರಾಮ ಕಾರಂತರು ಗೆಜ್ಜೆ ಕಟ್ಟಿ ಅಲ್ಲಿ ಕುಣಿಯುತ್ತಿದ್ದುದುಂಟು. ನಂತರ ಅದು ಉಡುಪಿಯಲ್ಲಿ ಯಕ್ಷಗಾನ ಕೇಂದ್ರವಾಗಿ ಮಾರ್ಪಟ್ಟು ನೂರಾರು ಕಲಾವಿದರನ್ನು ನೀಡುತ್ತ ಬಂದಿರುತ್ತದೆ. ಅದೇ ಸಮಯದಲ್ಲಿ ಅಮೇರಿಕಾದಿಂದ ಮಾರ್ತಾ ಆಸ್ಟನ್ ಎಂಬುವರು ದಿ| ಕುಷ್ಠ ಗಾಣಿಗರಿಂದ ಯಕ್ಷಗಾನ ಕಲಿತು ಕೃಷ್ಣಾರ್ಜುನದಲ್ಲಿ ಕೃಷ್ಣನ ಪಾತ್ರ ಮಾಡಿದ್ದರು. ಕುಷ್ಠ ಗಾಣಿಗರು ಎಲ್ಲೇ ಪಾತ್ರ ಮಾಡಲಿ ಅಲ್ಲಿಗೆ ತಪ್ಪದೇ ಹೋಗುತ್ತಿದ್ದರು, ಫೋಟೋ ತೆಗೆಯುತ್ತಿದ್ದರು.

ಕುಷ್ಠ ಗಾಣಿಗರನ್ನು ನೀವು ಕಂಡಿದ್ದಲ್ಲಿ ನಿಮ್ಮ ಅವರ ಒಡನಾಟ ಹೇಗಿತ್ತೆಂದು ಬಾಲಣ್ಣನವರನ್ನು ಕೇಳಿದೆ. ಉತ್ತರ ಕನ್ನಡದ ಎಂ.ಎಂ. ನಾಯ್ಕ ಮತ್ತು ಕರ್ಕಿ ನಾರಾಯಣ ಹಾಸ್ಯಗಾರ ಎಂಬುವವರಿಗೆ ಯಕ್ಷಗಾನ ತರಬೇತಿಗಾಗಿ ಕೇಂದ್ರ ಸರಕಾರದ ವಿದ್ಯಾರ್ಥಿ ವೇತನ ಬಂದಿತ್ತು. ಅದಕ್ಕಾಗಿ 6 ತಿಂಗಳು ಕ್ಲಾಸು, 6ತಿಂಗಳು ಮೇಳದಲ್ಲಿ ಪ್ರಾಕ್ಟಿಕಲ್ ನಡೆಯುತ್ತಿತ್ತು. ಆಗ ಎಸ್.ಎಮ್.ಎಸ್. ಹೈಸ್ಕೂಲಿಗೆ ಅಧ್ಯಾಪಕರಾಗಿ ಸೇರಿದ್ದ ಹಂದಾಡಿ ಸುಬ್ಬಣ್ಣ ಭಟ್ಟರು ಆ ಕ್ಲಾಸನ್ನು ಹಾರಾಡಿ ಕುಷ್ಠ ಗಾಣಿಗರನ್ನು ಗುರುವಾಗಿರಿಸಿ ಅದೇ ಶಾಲೆಯಲ್ಲಿ ಪ್ರಾರಂಭಿಸಿದಾಗ ತಾನು, ಸುಬ್ಬಣ್ಣ ಭಟ್ಟರು ಹಾಗೂ ಇತರರು ಸೇರಿ ತರಬೇತಿ ಪಡೆದಿದ್ದೆವು. ಹಾರಾಡಿ ರಾಮ ಗಾಣಿಗರಿಗೆ ದಿ| ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿ ರಾಜ್ಯಪ್ರಶಸ್ತಿಯನ್ನು ಬೆಂಗಳೂರಿನ ಪುರಭವನದಲ್ಲಿ ಪ್ರಧಾನ ಮಾಡಿದ ನಂತರ ಕರ್ಣಾರ್ಜುನ ಯಕ್ಷಗಾನ ಪ್ರದರ್ಶನ ಮತ್ತು ಅದರಲ್ಲಿ "ರಾಮನ ಕರ್ಣ ಕುಷ್ಠನ ಅರ್ಜುನ" ದಿ| ಹಾರಾಡಿ ಸಂಜೀವ ಗಾಣಿಗರ ಶಲ್ಯ, ತನ್ನದು ಕೃಷ್ಣ, ಹಾರಾಡಿ ರಾಮ ಗಾಣಿಗ ಮತ್ತು ಕುಷ್ಠ ಗಾಣಿಗರ ಕರ್ಣ ಅರ್ಜುನರಿಗೆ ಕೃಷ್ಣನಾಗುವಂತೆ ನನ್ನನ್ನು ಕುಷ್ಠ ಗಾಣಿಗರು ಬೆಳೆಸಿದ್ದರೆನ್ನುತ್ತಾರೆ ಬಾಲಣ್ಣ.

## ಕುಷ್ಠ ಗಾಣಿಗರ ಲಕ್ಷ್ಮಣ

ಶ್ರೀಮತಿ ಮಾರ್ತಾ ಅಶ್ಟನ್ ಎಂಬ ಅಮೇರಿಕದ ಮಹಿಳೆ ದಿ| ಬಿ.ವಿ. ಆಚಾರ್ಯರ ಸಹಯೋಗದಲ್ಲಿ ಯಕ್ಷಗಾನದ ಬಗ್ಗೆ ಅಧ್ಯಯನ ನಡೆಸುತ್ತಿದ್ದ ಕಾಲಘಟ್ಟವದು.

ಸಾಲಿಗ್ರಾಮ ಮೇಳದಿಂದ ಭೀಷ್ಮ ಆಗಿ ಒಂದು ವರ್ಷ ಕಳೆದ ಮೇಲೆ ಬ್ರಹ್ಮಾವರ ಪೇಟೆಯ ಗೋಡೆಗಳಲ್ಲಿ ಮತ್ತೆ ಬಿತ್ತಿ ಪತ್ರಗಳು ಅಂಟಿಸಲ್ಪಟ್ಟವು. ಸಾಲಿಗ್ರಾಮ ಮೇಳದವರಿಂದ ಅತಿಕಾಯ ಕಾಳಗ ಚಂದ್ರಾವಳಿ ವಿಲಾಸ. ನಮಗದು ಅತ್ತಿಕಾಯಿ ಕಾಳಗ. ವೀರಭದ್ರ ನ್ಯಾಕರ ತಾಮ್ರತ್ವಜನಷ್ಟೆ ಅತಿಕಾಯ ಪ್ರಖ್ಯಾತ. ವಾರಕ್ಕೆ ಮುಂಚಿತ ಬಾಯಿಂದ ಬಾಯಿಗೆ ಪ್ರಚಾರವಾಗಿ ಆಟದ ದಿನ ಮೈಕಿನ ಮುಖೇನ ಅಂದು ಹಾರಾಡಿ ಕುಷ್ಠ ಗಾಣಿಗರ ವೇಷ ಉಂಟೆಂದು ತಿಳಿಯಿತು.

ಅಂದು ಕಂಡ ಅತಿಕಾಯ ಕಾಳಗ ಒಂದು ಅನುಸ್ಮರಣೀಯ ಅನುಭವ . ಯಾವಾಗಲೂ ಕೇದಗೆ ಮುಂದಲೆಯಲ್ಲಿ ಕಂಡಿದ್ದ ಶಿರಿಯಾರ ಮಂಜು ನ್ಯಾಕರು ಅಂದು ಶ್ರೀರಾಮನ ಪಾತ್ರಕ್ಕೆ ಕಿರೀಟ ಕಟ್ಟಿದ್ದರು. ಇನ್ನಿಲ್ಲವೆಂಬಂತೆ ಶ್ರೀರಾಮನ ಪಾತ್ರ ನಿರ್ವಹಿಸಿದ್ದರು ಮಂಜು ನ್ಯಾಕರು.

ವೀರಭದ್ರ ನ್ಯಾಕರನ್ನೇ ಕೇಂದ್ರವಾಗಿರಿಸಿಕೊಂಡು ಕೊಟ್ಟ ಪ್ರಸಂಗ. ಅವರದ್ದೂ ಕಿರೀಟದ ವೇಷ.

ಉತ್ತರ ಕನ್ನಡದವರ ಮುಂದೆ ಹಾರಾಡಿ, ಮಟಪಾಡಿ ರೈಸುವುದಿಲ್ಲವೆಂಬ ಪ್ರೇಕ್ಷಕರ ಭಾವನೆಗಳು ಅಂಕುರವಾಗುತ್ತಿದ್ದ ಕಾಲ.

ವೀರಭದ್ರ ನಾಯಕರ ಅತಿಕಾಯ ತಂದೆ ಇಂದ ಅಪ್ಪಣೆ ಪಡೆದು ಭವಸಾಗರವನ್ನು ದಾಟ ಬೇಕೆಂಬವರಿಗೆ ಜತೆ ಬನ್ನಿರೆಂದು ಕರೆದು ನಿರ್ಗಮಿಸಿದಾಗ ಪ್ರಸಂಗ ಸ್ವಲ್ಪ ನಿಧಾನವೆಂಬಂತೆ ಮುಂದುವರಿಯುತ್ತಿತ್ತು.

ತನ್ನ ಭಕ್ತನಾದ ಅತಿಕಾಯನನ್ನು ಕೊಲ್ಲಬೇಕೆಂಬ ಚಿಂತೆ, ಅದರಲ್ಲೂ ಕೊಲ್ಲ ಬಲ್ಲವರ್‍ಯಾರೆಂಬ ದುಗುಡದಲ್ಲಿ ಶ್ರೀರಾಮನಾಗಿ ಮಂಜು ನ್ಯಾಕರಾಡಿದ ಮಾತುಗಳು ಮಂಜು ನಾಯ್ಕರ ಮಾತುಗಳು ಅದಕ್ಕೆ ಹೋಲಿಕೆ ಇಲ್ಲ.

ಮಧ್ಯ ರಾತ್ರಿಯ ಕಾಲ ಅನೇಕ ಪ್ರೇಕ್ಷಕರು ತೂಕಾಡಿಸುತ್ತಿರುವಾಗ ಬಿತ್ತು ಎತ್ತರದ ಚಂಡೆಯ ಪೆಟ್ಟು. ಯಾರೋ ಕುಷ್ಠ ಗಾಣಿಗರ ಲಕ್ಷ್ಮಣನನ್ನು ಕೈಹಿಡಿದು ರಂಗಸ್ಥಳದ ಮೆಟ್ಟಲು ಹತ್ತಿಸಿಬಿಟ್ಟಿದ್ದರು. ಎಡಗೈಯಲ್ಲಿ ಅವರದ್ದೇ ಜಾಪಿನಲ್ಲಿ ಬಿಲ್ಲುಬಾಣ ಹಿಡಿದಿದ್ದ ಲಕ್ಷ್ಮಣ ಬಲಗೈಯಿಂದ ಪದರೆ ಸರಿಸುತ್ತಾ ರಂಗ ಪ್ರವೇಶ ಮಾಡಿದ್ದು, ಅಣ್ಣನಿಗೆ ವಂದಿಸಿದ್ದು, ದುಗುಡವೇನೆಂದು ಕೇಳಿದ್ದೆಲ್ಲ ವರ್ಣನೆಗೆ ಅತೀತವಾದದ್ದು. ರಣವೀಳ್ಯವನ್ನಿತ್ತು ಮಂಜು ನ್ಯಾಕರ ಶ್ರೀರಾಮ ಅಚ್ಚಳಿಯದ ನೆನಪುಗಳನ್ನು ಮನದಾಳದಲ್ಲಿ ಮೂಡಿಸಿ ನಿರ್ಗಮಿಸಿದಾಗ ಲಕ್ಷ್ಮಣ ಮತ್ತೆ ಏರಿ ಇಳಿಯುವ ಪ್ರಯಾಸಕ್ಕೆ ಹೋಗದೇ ಯುದ್ಧ ರಂಗವನ್ನು ತಲುಪಲು ಉಪಯೋಗಿಸಿದ್ದು ತೈದ ತೈದ ತೈದ ಗಳನ್ನು ಮಾತ್ರ.

ಅತಿಕಾಯನೇ ರಂಗಸ್ಥಳಕ್ಕೆ ಬಂದು ಲಕ್ಷ್ಮಣ ನನ್ನೆದುರಿಸಿದ ಕುಷ್ಠ ಗಾಣಿಗರ ದೇಹಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡೇ ವೀರಭದ್ರ ನಾಯಕರು ಬಹಳ ಸೂಕ್ಷ್ಮವಾಗಿ ಪಾತ್ರ ನಿರ್ವಹಿಸುತ್ತಿದ್ದರು. ಸಂಬಾಷಣೆ ಕೂಡ ಅರ್ಧದಷ್ಟು ಕಡಿಮೆ ಮಾಡಿದ್ದರು. ಲಕ್ಷ್ಮಣನನ್ನು ದೇವರೆಂದು ಭಕ್ತಿಯಿಂದಲೂ ವೈರಿಯ ಸ್ಥಾನದಲ್ಲಿರುವುದರಿಂದ ಅರಿ

ಎಂದೂ ಏಕಕಾಲದಲ್ಲಿ ಪಾತ್ರ ನಿರ್ವಹಿಸುವಾಗ ವೀರಭದ್ರ ನ್ಯಾಕರ ಅತಿಕಾಯ ಅಂದರೇನೆಂದು ಅರಿವಾಯ್ತು.

ಶಿಷ್ಟಾಚಾರದಂತೆ ಅದರಲ್ಲೂ ಭಕ್ತನಾದ್ದರಿಂದ ಕಳಕಳಿಯಿಂದ ಮರಳುವಂತೆ ಲಕ್ಷ್ಮಣ ಒತ್ತಾಯಿಸದರೂ ಒಲ್ಲೆಯೆಂದ ಅತಿಕಾಯ ಇಂದಿನ ಯುದ್ಧದಲ್ಲಿ ದೇವರಂತೂ ಸೋಲುವುದಿಲ್ಲ ನಾನು ಬದುಕಿ ಉಳಿಯುವುದೂ ಇಲ್ಲ, ತಂದೆಗೆ ತಕ್ಕ ಮಗನಾಗಿ ಭವರ ಕೊಡುವುದು ಖಂಡಿತ ಆದರೂ ಒಂದಾಸೆಯುಂಟು ಎಂದು ತನ್ನ ಮಾತನ್ನು ಪ್ರಾರಂಭಿಸಿ ದೇವರೇ ಪ್ರತ್ಯಕ್ಷವಾಗಿ ಬಂದಿರುವಾಗ ಭಕ್ತನಾದ ತಾನು ದೇವರನ್ನು ಪೂಜಿಸದಿದ್ದರೆ ಆದೀತೇ ?. ಬತ್ತಳಿಕೆಯಲ್ಲಿ ಬಾಣ ತುಂಬಿಸಿ ಕೈಯಲ್ಲಿ ಬಿಲ್ಲು ಕಿಡಿದು ಭವರಕ್ಕೆ ಬಂದಿರುವ ನಾನೆಂತು ನಿನ್ನನ್ನು ಪೂಜಿಸಲಿ ಎಂದು ಲಕ್ಷ್ಮಣನನ್ನು ಕೆಣಕಿದಾಗ ಕಾಲ, ದೇಶ, ಪರಿಸ್ಥಿತಿಗೆ ಅನುಗುಣವಾಗಿ ಭಕ್ತ ಯಾವ ಪರಿಸ್ಥಿತಿಯಲ್ಲೂ ದೇವರನ್ನು ಪೂಜಿಸಬಹುದೆಂಬ ಉತ್ತರ ಲಕ್ಷ್ಮಣನಿಂದ.

ಕೈಯಲ್ಲಿದ್ದ ಧನುಶಗಳನ್ನು ನೋಡುತ್ತಾ ಲಕ್ಷ್ಮಣ ದೇವರಿಗೆ ಪೂಜೆ ಮಾಡುವರೇ 16 ಗರಗಳನ್ನು ಪ್ರಯೋಗಿಸುವ ಇಂಗಿತವನ್ನು ಅತಿಕಾಯ ವ್ಯಕ್ತ ಪಡಿಸಿದಾಗ ಲಕ್ಷ್ಮಣ ಅದಕ್ಕೊಪ್ಪಿದ.

ಇದೋ ನನ್ನ ಪೂಜೆಯ ಪ್ರಾರಂಭಿಸುವರೇ ಇದು ಪಾದ್ಯ ಎಂದೊಂದು ಶರಹೊಡೆದ ಅತಿಕಾಯ. ಎರಡೂ ಕೈಗಳಲ್ಲಿ ಬಿಲ್ಲುಬಾಣ ಹಿಡಿದು ಬಿಲ್ಲನ್ನು ನೆಲಕ್ಕೆ ಊರಿಕೊಂಡೇ ಅದ್ಭುತವಾದ ಭಂಗಿಯಲ್ಲಿ ಲಕ್ಷ್ಮಣ "ಅತಿಕಾಯ ಭಕ್ತನಾದ ನೀನು ಹೊಡೆದಿರುವ ಮತ್ತು ಹೊಡೆಯಲಿರುವ ಒಟ್ಟು 16 ಶರಗಳನ್ನು ಖಂಡಿಸದೆ ಮೈಯಲ್ಲಿ ದರಿಸುತ್ತಿದ್ದೇನೆ. ಪೂಜೆಯನ್ನು ಮುಂದುವರಿಸು "ಯಂದಾಗ ಇದು ಅರ್ಗ್ಯ, ಇದು ದೀಪ, ಇದು ನೈವೇದ್ಯ ಎಂದು 16 ಉಪಚಾರಗಳನ್ನು ಹೆಸರಿಸುತ್ತ ಒಂದೊಂದಾಗಿ ಹೊಡೆಯಲ್ಪಟ್ಟ ಅತಿಕಾಯನ ಶರಗಳನ್ನು ಬೇರೆ ಬೇರೆ ಅಂಗಗಳನ್ನು ವಡ್ಡುತ್ತಾ ಸ್ವೀಕರಿಸಿದಾಗ ಅತಿಕಾಯ ಮತ್ತೆ ವಂದಿಸಿದ.

ಭಕ್ತನಿಂದ ಪೂಜೆಯನಂತರ ಪ್ರಸಾದವಾಗಿ ಇದೋ ಎರಡು ಶರ ಪಡೆದುಕೊ ಎಂದೆನ್ನುತ್ತ ಲಕ್ಷ್ಮಣ ಶರ ಪ್ರಯೋಗಿಸಿದ ಪ್ರಸಾದವನ್ನು ಗೌರವಿಸುತ್ತಾ ಅತಿಕಾಯ ಆ ಬಾಣಗಳಿಗೆ ಶಿರವಡ್ಡಿದ, ಘಾಸಿಯಾಗಿ ಬಿದ್ದು ಚೇತರಿಸಿಕೊಂಡು ಲಕ್ಷ್ಮಣನೊಂದಿಗೆ ಯುದ್ಧಮಾಡಿ ವೀರಗತಿಗೆ ಪ್ರಾಪ್ತನಾದ. ಯಾರೋ ಬಂದು ಕುಷ್ಠ ಗಾಣಿಗರ ಕೈಹಿಡಿದು ರಂಗಸ್ಥಳದಿಂದ ಕೆಳಗಿಳಿಸಿದರು . ನನ್ನ ತಲೆಯೊಳಗಿದ್ದ ಮುಂದಾಸಾನ ಗರಿಮೆಯನ್ನು ತಲೆಕೆಳಗೆ ಮಾಡಿದ್ದವು ಕಿರೀಟಗಳು.

ಹಿರಿಯರಾದ ಮಾರ್ಗೋಳಿ, ವಂಡ್ಸೆ, ನೀಲಾವರ ಬಸವಶೆಟ್ಟಿಯವರ ಜತೆ ಸಂಬಾಷಣೆ ನಡೆಸಿದಾಗ ತಿಳಿದ ವಿಷಯ ಕುಷ್ಠ ಗಾಣಿಗರ ಲಕ್ಷಣ ಅಂದರೆ ಲಕ್ಷ್ಮಣ. ಸೀತಾ ಪಾರಮ್ಯದಲ್ಲಿ ಅಣ್ಣನಾಜ್ಞೆಯಂತೆ ಅತ್ತಿಗೆಯನ್ನು ಕಾಡಿಗೊಯ್ದು ಶಿರ ಕಡಿಯಲು ಅಲಗನ್ನೆತ್ತಿದಾಗ ಅದರಲ್ಲಿ ಪಿಂಡವನ್ನು ಕಂಡು ಸ್ತ್ರೀ ಹತ್ಯೆ ಶಿಶು ಹತ್ಯೆ ಯ ಮುಂದಿರುವ ಅಣ್ಣನ ಆಣತಿಯ ಅವಜ್ಞೆಗಳನ್ನು ಅತಿ ಸೂಕ್ಷ್ಮವಾಗಿ ಪರಿಶೀಲಿಸುತ್ತ ಕತ್ತಿಯನ್ನು ಕೆಳಗಿಳಿಸುವ ಪರಿ, ಎಲ್ಲವೂ ಅದ್ವಿತೀಯ.

## ಕುಷ್ಠ ಗಾಣಿಗರ ದಕ್ಷ

ಹದಿಹರೆಯದಲ್ಲಿ ಯೋಧನಾಗಿ ತಿರುಗಾಟ ಪ್ರಾರಂಭಿಸಿದ್ದೆ. ನಮ್ಮ ಪೀಳಿಗೆಯ ಹಿರಿಯರಾದ ಅಣ್ಣಯ್ಯ ಮಟಪಾಡಿ ಗೋಪಾಲ ಗಾಣಿಗರು ಪದವಿ ಮುಗಿಸಿ ಕೆನರಾ ಬ್ಯಾಂಕ್ ಸೇರುವುದಕ್ಕೆ ಮುಂಚೆ ಹಿರಿಯರು ಮಂದರ್ತಿ ಮೇಳದ ಆಟದ ಹರಿಕೆ ಹೊತ್ತಿದ್ದರು. ನಾನು ವಾಯುಸೇನೆಯ ತರಬೇತಿ ಮುಗಿಸಿ ಅಲಹಾಬಾದಿನಲ್ಲಿ ಕರ್ತವ್ಯ ನಿರ್ವಹಿಸುತ್ತ ರಜೆಗೆ ಬಂದಿದ್ದೆ. ಬೋಜ ಹೆಗ್ಡೆಯವರ ಆಗಮನದ ನಂತರ ಆಟದ ದಿನ ನಿಶ್ಚಯವಾಗಿ ವೀಳ್ಯ ಕೊಟ್ಟಮೇಲೆ ಸಂಜೀವಣ್ಣ ಕುಷ್ಠ ಗಾಣಿಗರಿಂದ ಪುಷ್ಕಳ ಮೂಡಿಸಿದಂತೆ ನಾವು ಅವರನ್ನು ಕರೆಸಬೇಕೆಂದು ಪ್ರಯತ್ನಿಸಿದೆ, ಅವರು ಬಂದದು ಅರ್ಜುನನಾದದ್ದೆಲ್ಲ ಮುಗಿದು ಮುಂದೆ ಮತ್ತೆ ಊರಿಗೆ ಬಂದಾಗ ಬಡಗು ತಿಟ್ಟಿನಲ್ಲಿ ಎರಡು ಡೇರೆ ಮೇಳಗಳಾಗಿ ಒಂದರಲ್ಲಿ ಕೆರೆಮನೆ ಕಲಾವಿದರು ಮತ್ತೊಂದರಲ್ಲಿ ಇತರ ಉತ್ತರ ಕನ್ನಡ ಕಲಾವಿದರನ್ನೊಳಗೊಂಡ ಸಾಲಿಗ್ರಾಮ, ಅಮೃತೇಶ್ವರಿ ಮೇಳಗಳವು. ಚಿಟ್ಟಾಣಿಯವರನ್ನು ದಕ್ಷಿಣ ಕನ್ನಡಕ್ಕೆ ತಂದದ್ದು ಅಮೃತೇಶ್ವರಿ ಮೇಳ, ಗೋಡೆ ನಾರಾಯಣ ಹೆಗ್ಡೆಯವರು ಅವರ ಸ್ಥಾನವನ್ನಲಂಕರಿಸಿದ್ದರು. ಕಾಳಿಂಗ ನಾವಡರು ಸಾಲಿಗ್ರಾಮದಲ್ಲಿ ಅವರ ಗುರು ನಾರಣಪ್ಪ ಉಪ್ಪೂರರ ಅಮೃತೇಶ್ವರಿಯಲ್ಲಿ ಅರಾಟೆ ಮಂಜು ಸಾಲಿಗ್ರಾಮಕ್ಕೆ, ಕೋಟ ವೈಕುಂಟ ಅಮೃತೇಶ್ವರಿಯಲ್ಲಿ. ಅದೇ ಸಮಯದಲ್ಲಿ ಪ್ರಸಿದ್ಧಿಗೆ ಬಂದಿದ್ದರು. ನಗರಜಗನ್ನಾಥ ಶೆಟ್ಟಿಯವರು ಕುಂದಾಪುರ ಮತ್ತು ಬ್ರಹ್ಮಾವರ ಗಾಂಧಿ ಮೈದಾನಗಳು ಡೇರೆ ಮೇಳಗಳಿಗೆ ತುಂಬ ಕಲೆಕ್ಷನ್ ತರುವ ಸ್ಥಳಗಳು. ಎಲ್ಲ ಡೇರೆ ಮೇಳಗಳು ಡಿಸೆಂಬರ್ ಜನವರಿಯಲ್ಲಿ ಒಂದು ಪ್ರದರ್ಶನ ಕೊಟ್ಟು ಎರಡನೆಯದನ್ನು ಸಹಾಯಧನ ಆಟವಾಗಿ ಆಯೋಜಿಸುತ್ತಿದ್ದರು. ಇಪ್ಪತ್ತರ ಹರೆಯದ ನಾನು ಹತ್ತಿರದಲ್ಲಿ ಆಟವಿದ್ದರೆ ಬಿಡುತ್ತಿರಲಿಲ್ಲ. ಕುಷ್ಠ ಗಾಣಿಗರು ಅತಿಥಿ ಕಲಾವಿದರಾಗಿ ಬರುವರೆಂಬ ಪ್ರಚಾರದೊಂದಿಗೆ ಅಮೃತೇಶ್ವರಿ ಮೇಳದ ಎರಡನೇಯ ಆಟ ಆಯೋಜಿಸಲ್ಪಟ್ಟಿತ್ತು.

ಪ್ರಸಂಗ ನಿರ್ಣಯ ಆಟದ ಯಶಸ್ಸಿನಲ್ಲಿ ಬಹು ಮುಖ್ಯ ಪಾತ್ರ ವಹಿಸುವುದು ಇಂದಿಗೂ ಪ್ರಸ್ತುತ. ಬ್ರಹ್ಮಾವರದ ಆಸುಪಾಸಿನಲ್ಲಿ ಆಟವಾಗ ಬೇಕಾದರೆ ಪ್ರಸಂಗ ನಿರ್ಣಯದಲ್ಲಿ ನಮ್ಮ ಗುರುಗಳಾದ ಹಂದಾಡಿ ಸುಬ್ಬಣ್ಣ ಭಟ್ಟರಲ್ಲಿ ಕೇಳುವುದು ಅಂದಿನ ವಾಡಿಕೆ. ಅವರಿಗೆ ಕಲಾವಿದರ ಬಗ್ಗೆ ಮತ್ತು ಪ್ರಸಂಗಗಳ ಬಗ್ಗೆ ಇದ್ದ ಮಾಹಿತಿಯೇ ಅಂತಹದ್ದು.

ಆತ್ಮೀಯರೊಬ್ಬರೊಂದಿಗೆ ಆಟಕ್ಕೆ ಹೋದೆ. ಬಿ. ವಿ. ಆಚಾರ್ಯರು ಬಿ.ಬಿ. ಶೆಟ್ಟರಂತಹ ಗಣ್ಯರು ಮುಂದಿನ ಸಾಲಿನಲ್ಲಿ ಕುಳಿತಿದ್ದರು. ಪ್ರಸಂಗ ದಕ್ಷಯಜ್ಞ, ಗುರುದಕ್ಷಿಣೆ. ಗೋಡೆ ನಾರಾಯಣ ಹೆಗ್ಡೆಯವರ ಈಶ್ವರ ತ್ರಿವೇಣಿ ಸಂಗಮದಲ್ಲಿ ಸಭೆ ಮುಂದುವರಿಯಲಿ ಎಂದು ನಿರ್ಗಮಿಸಿದ.

ಅಂದು ಹಾರಾಡಿಯಲ್ಲಿ ಗಾಣಿಗ ತ್ರಯರಾದ ಹಾರಾಡಿ ರಾಮ ಗಾಣಿಗ, ಹಾರಾಡಿ ಕುಷ್ಠ ಗಾಣಿಗ, ಹಾರಾಡಿ ನಾರಾಯಣ ಗಾಣಿಗರಲ್ಲಿ ರಾಮ ಗಾಣಿಗರು ಇಹಯಾತ್ರೆ ಮುಗಿಸಿದ್ದರು. ಹಾರಾಡಿಯ ಎರಡನೆ ವೇಷ ಅಲಭ್ಯವಾಗಿತ್ತು. ಆಗ ಮಟಪಾಡಿ

ಭದ್ರವಾಗಿ ನೆಲೆ ಯೂರುವಂತಾಯ್ತು. ಹಾರಾಡಿಯ ಗಾಣಿಗ ತ್ರಯರಂತೆ ಚಪಟೆಗಾರ ಸಮಾಜದಿಂದ ನಾಯಕ ತ್ರಯರು ಎರಡನೇ ವೇಶದಾರಿಗಳಾಗಿ ಪ್ರಸಿದ್ಧರಾಗಿದ್ದರು. ಮಂದರ್ತಿಯಲ್ಲಿ ಮಟಪಾಡಿಯಲ್ಲಿ ಹುಟ್ಟಿ ಬೆಳೆದ ಉಡುಪಿ ಬಸವ ನ್ಯಾಕರು, ಪೆರ್ಡೂರು ಮೇಳಕ್ಕೆ ಮಟಪಾಡಿಯ ನೆರೆಯ ಗ್ರಾಮ ಚಾಂತಾರಲ್ಲಿ ವಾಸವಿದ್ದ ಬ್ರಹ್ಮಾವರ ಶೀನ ನ್ಯಾಕರು, ಕಾದಿ ಬಟ್ಟೆ ಅರ್ಧ ಕೋಟು ಗಾಂದಿ ಟೊಪ್ಪಿಗೆಯ ಮಟಪಾಡಿ ವೀರಭದ್ರ ನಾಯಕರು ಮಾರ್ಣಕಟ್ಟೆಯಲ್ಲಿ ಎರಡನೆ ವೇಶಧಾರಿಗಳು. ದಕ್ಷ ಯಜ್ಞದಲ್ಲಿ ಕುಷ್ಠ ಗಾಣಿಗರ ಪಾತ್ರವನ್ನು ಊಹಿಸುತ್ತಿರುವಾಗ ಮುಂಡಾಸಿನ ಸಾಮಾನ್ಯ ಎತ್ತರದ ವೇಷ ಒಂದನ್ನು ರಟ್ಟೆ ಹಿಡಿದು ಇಬ್ಬರು ರಂಗಸ್ಥಳದ ಮೆಲೇರಿಸುತ್ತಿದ್ದರು.

ಉಪ್ಪೂರರು ತೈ ತೈ ತದ್ದಿನದ್ದೇಂ ಎನ್ನುತ್ತ ತೈತೈಯನ್ನು ಚುರುಕಗೊಳಿಸುತ್ತಿರುವಾಗ ಪರದೆಯನ್ನು ಸರಿಯುತ್ತಾ ನವಯುವಕನಾಗಿ ಕುಷ್ಠ ಗಾಣಿಗರ ದಕ್ಷ ಮಿಂಚಿನ ಪ್ರವೇಶ ಮಾಡಿದ. ಅದೊಂದು ಅದ್ಬುತ ಮುಂಡಾಸು. ಅದಕ್ಕೆ ಒಪ್ಪುವ ಕಟ್ಟುಮೀಸೆ. ತನ್ನ ಪ್ರೀತಿಯ ಬಿಲ್ಲು ಬಾಣ ಬಿಟ್ಟು ಬಂದಿರಲಿಲ್ಲ ಕುಷ್ಠ ಗಾಣಿಗರು "ದಂತಪಕ್ತಿ ಆಗಲೇ ಸಡಿಲಗೊಂಡಿತ್ತು. ಸ್ವರಭಾರದಲ್ಲಿ ಯಾವ ದೋಷವಿಲ್ಲದ ದಕ್ಷ ಸಂಕ್ಷಿಪ್ತವಾಗಿ ತನ್ನ ಮತ್ತು ತನ್ನ ಮಕ್ಕಳ ಬಗ್ಗೆ ಮಾತಾಡಿ ತ್ರಿವೇಣಿ ಸಂಗಮಕ್ಕೆ ಹೊರಟಾಗ ಅಂದು ಬಹಳ ಚಾಲ್ತಿಯಲ್ಲಿದ್ದ ಸುತ್ತು ಬಳಿಯ ಕೆಲವು ಹೆಜ್ಜೆ ಹಾಕಿ ಬಿಲ್ಲನ್ನು ಬದಿಗಿಟ್ಟು ತತ್ತೋಂತದಿಕುತಕ ಎಂಬ ಹೆಜ್ಜೆ ಇಡುವಾಗ ಅವರಿತ್ತ ಪ್ರದರ್ಶನ ವರ್ಣಣಾತೀತ. ರಟ್ಟೆಹಿಡಿದ ಕಳಗಿಳಿಸಿ ಮತ್ತೆ ಈಶ್ವರನ ಸಭೆಗೆ ಬರಲಿಕ್ಕೆ ಮೇಲೆರಿಸಿದರು

ದಕ್ಷನನ್ನು ಕಂಡ ದೇವತೆಗಳು ಎದ್ದುನಿಂತು ಸ್ವಾಗತಿಸಿದರೂ ಈಶ್ವರ ಕದಲದೆ ಕುಂತದ್ದನ್ನು ಕಂಡ ದಕ್ಷ ಕಿಡಿ ಕಿಡಿಯಾದದ್ದು ನೆನಪಿಸಿಕೊಂಡಾಗ ರೋಮಾಂಚನವಾಗುತ್ತದೆ. ಒಂದೊಂದೇ ಪದ್ಯದಲ್ಲಿ ತನ್ನ ದೀರ್ಘ ಆಲಾಪವನ್ನು ಬದಲಿಸಿ ಉಪ್ಪೂರರು ಚುಟುಕಾಗಿ ಹೇಳಿ ಮುಗಿಸುತ್ತಿದ್ದರೂ ಪ್ರತಿ ಪದ್ಯಕ್ಕೆ ವಿಭಿನ್ನವಾಗಿ ಕುಣಿದು ಶ್ರುತಿ ಹಿಡಿದೇ ಎತ್ತರದ ಧ್ವನಿಯಲ್ಲಿ ಮಾತನ್ನಾಡುತ್ತಿದ್ದ ಕುಷ್ಠ ಗಾಣಿಗರು ಸ್ನಾನವನ್ನೇ ಮಾಡದೇ ಬೂದಿಯನ್ನು ಬಳಿದುಕೊಳ್ಳುವ ಬೂದಿಬಡಕ ಇವನ್ಯಾರು ನನ್ನ ಮಗಳ ಗಂಡ ಎಂದಾಗ ಅಧ್ಯಕ್ಷ ಸ್ಥಾನದಲ್ಲಿದ್ದ ಗೋಡೆಯವರ ಈಶ್ವರ ಕಳೆಗುಂದಿತು ಗಾಣಿಗರ ದಕ್ಷನ ಪದಗಳು ಮುಗಿದನಂತರ ಪದ್ಯಕ್ಕೆ ಕುಳಿತೇ ಗೋಡೆಯವರು ವಿವರವಾದ ಉತ್ತರವಿತ್ತು ದಕ್ಷನನ್ನು ದೂಷಿಸಿ ಇವನಿಗಿರುವ ಪದವಿ ಏನು ಎಂಬಲ್ಲಿಯವರೆಗೆ ಸುಮ್ಮನೆ ನಿಂತಿದ್ದ ಕುಷ್ಠ ಗಾಣಿಗರು ಆ ಪ್ರಶ್ನೆಗೆ ಪ್ರತಿಕ್ರಿಯೆ ಇತ್ತದ್ದು ಅಷ್ಟೆ ಮನೋಜ್ಞವಾಗಿತ್ತು. ಒಮ್ಮೆಗೆ ಸಿಟ್ಟು, ಅವಮಾನಗಳಿಂದ ನೊಂದು ಬೆಂದು ಬ್ರಹ್ಮನಲ್ಲಿಗೆ ಬಂದು ಬ್ರಹ್ಮನಲ್ಲಿ ತನ್ನ ಅಳಲನ್ನು ತೋರಿಕೊಳ್ಳುತ್ತ ಸ್ಥಾನ ಕೊಡಲಾರದ ನೀನೇಕೆ ನನ್ನನ್ನು ಹುಟ್ಟಿಸಿದೆ ಎಂದು ಬ್ರಹ್ಮಾನನ್ನು ಕೇಳುವಾಗ ಅದು ಸಿಟ್ಟೂ ಅಲ್ಲ, ಜಿಗುಪ್ಸೆಯೂ ಅಲ್ಲ, ನವರಸಗಳಿಗೆ ಮೀರಿದ ಹತ್ತನೆಯ ರಸವಂದಾಗಿದ್ದಿರಬಹುದೋ ಏನೋ. ಬ್ರಹ್ಮನಿಂದ ಪ್ರಜಾಪತಿಯ ಪಟ್ಟ ಪಡೆದ ದಕ್ಷ ಹರ್ಷಾತಿರೇಕವನ್ನು ವ್ಯಕ್ತ ಪಡಿಸಿ ಎಂದೂ ಕಾಣದ ಯಾರೂ ಕಾಣದ ದಕ್ಷ ಯಜ್ಞನಡೆಯಲಿ ಎನ್ನುತ್ತ ನಿರ್ಗಮಿಸಿದರು.

ಕುಷ್ಠ ಗಾಣಿಗರು ತದನಂತರ ಎಷ್ಟು ವೇಷ ಮಾಡಿದ್ದರೋ ತಿಳಿಯದು.

ಬ್ರಹ್ಮಾವರದಲ್ಲಿ ಭೀಷ್ಮ ನೆದುರು ಪರಶುರಾಮನ ಪಾತ್ರ ವಹಿಸಿದ ನಂತರ ಬಿ.ವಿ. ಆಚಾರ್ಯರ ಆಶಯದಂತೆ ಮತ್ತವರು ವೇಷ ಮಾಡಲಿಲ್ಲ.

ಹಿರಿಯರಾದ ನೀಲಾವರ ಬಸವ ಶೆಟ್ಟಿಯವರಲ್ಲಿ ಬಿರ್ತಿ ಬಾಲಣ್ಣನವರಲ್ಲು ಕುಷ್ಠ ಗಾಣಿಗರ ದಕ್ಷನ ಬಗ್ಗೆ ಕೇಳಿದಾಗ ತಿಳಿದ ವಿಷಯ ಕುಷ್ಠ ಗಾಣಿಗರ ದಕ್ಷ ಅದ್ವಿತೀಯ. ಅಂದು ಕಂಡ ಅತೀ ಅಪರೂಪದ ಮುಂಡಾಸಿನ ದಕ್ಷ ನಾನು ಕಂಡ ದಿ| ಹಾರಾಡಿ ಕುಷ್ಠ ಗಾಣಿಗರ ಕೊನೆಯ ವೇಷ.

## ದಿ| ಹಾರಾಡಿ ಕುಷ್ಠ ಗಾಣಿಗರ ಭಂಡಿ ಭೀಮ

ನೀಲಾವರ ಮೇಳ ಪ್ರಾರಂಭವಾದಾಗ ಮಳೆಯೂ ಬಂದಿತ್ತಂತೆ. ಅಂದು ಲೋಕಸಭಾ ಸದಸ್ಯನಾಗಿ ಕಾರ್ಯಕ್ರಮಕ್ಕೆ ಬಂದಿದ್ದ ಶ್ರೀ ಸದಾನಂದ ಗೌಡರು ಮಾನ್ಯ ಮುಖ್ಯ ಮಂತ್ರಿಗಳಾಗಿ ತಾನು ಹೋದಲೆಲ್ಲ ಮಳೆ ಬರುತ್ತದೆ ಎಂದು ಬಹಿರಂಗವಾಗಿ ಹೇಳುವಷ್ಟು ಶ್ರೀ ದೇವಿಯ ಕೃಪೆ ಅವರಿಗಾಗಿತ್ತು. ಮಟಪಾಡಿ ಗ್ರಾಮಸ್ಥರು ಶೀಘ್ರದಲ್ಲೇ ಒಂದು ಆಟ ಆಡಿಸಿದಾಗಲೂ ಮಳೆ. ಜನವರಿ ಒಂದರಂದು ಅಣ್ಣಯ್ಯನವರ ಮಂದರ್ತಿ ಮೇಳದ ಹರಕೆ ಆಟಕ್ಕೆ ನೀಲಾವರ ಮೇಳವನ್ನು ಕೂಡಿಸಿ ಅದ್ದೂರಿಯ ಕೂಡಾಟ ಆದನಂತರ ಊರಿಗೆ ಬಂದಿದ್ದೆ. ಅಲ್ಲಲ್ಲಿ ನೀಲಾವರ ಮೇಳದ ಅಬ್ಬರದ ಪ್ರಚಾರದೊಂದಿಗೆ ಕ್ಷೇತ್ರ ಮಹಾತ್ಮೆ ಪ್ರದರ್ಶನ ನಡೆಯುತ್ತಿದ್ದಂತೆ ಆದಿನಾಥ ಹೇಗೂ ಮೇಳದವರ ಜತೆ ಬೆರೆತು ಮಟಪಾಡಿಯ ಕೂಡಾಟದಲ್ಲಿ ನೀಲಾವರ ಮೇಳದಲ್ಲಿ ವೇಷ ಮಾಡುವ ಬಗ್ಗೆ ನನ್ನಲ್ಲಿ ಕೇಳುವ ಮಟ್ಟಕ್ಕೆ ಬಂದಿದ್ದ.

ದಿ. ಹಾರಾಡಿ ಕುಷ್ಠ ಗಾಣಿಗ ಪ್ರಶಸ್ತಿಯನ್ನು ಪ್ರಾರಸಂಭಿಸಬೇಕೆಂಬ ಪ್ರಯತ್ನಗಳು ಸಾಕಷ್ಟು ಹಿನ್ನಡೆ ಸಾಧಿಸಿ ಅಸಾಧ್ಯ ಎಂಬ ಮಟ್ಟಕ್ಕೆ ತಲುಪುತ್ತಿದ್ದಾಗ ಅನ್ಯ ಉದ್ದೇಶದಿಂದ ಪ್ರಾರಂಭಿಸಬೇಕೆಂದುಕೊಂಡಿದ್ದ ತಂದೆಯವರ ಹೆಸರಿನ ಪ್ರತಿಷ್ಠಾನವನ್ನು ತಕ್ಷಣ ಪ್ರಾರಂಭಿಸಿ ಅದರ ವತಿಯಿಂದ ದಿ. ಹಾರಾಡಿ ಕುಷ್ಠ ಗಾಣಿಗ ಪ್ರಶಸ್ಥಿ ಪ್ರಾರಂಭಿಸಲು ನಿರ್ದರಿಸಿದ ನಂತರವೂ ಮುಂದೇನೆಂಬ ಪ್ರಶ್ನೆ ಉಳಿದಿತ್ತು. ಜಾರ್ಜಡ್ಡಿನಲ್ಲಿ ಹುತ್ತದ ಸಮೀಪ ಭಾವಿ ತೆಗೆದಾಗ ಪಕ್ಕದಲ್ಲೊಂದು ಹೂಟೆ ಕೊಲಿನ ಗಾತ್ರದ ನೆಲ್ಲಿಗಿಡವಿತ್ತು. ಅಮಲಿಕಾ ಏಕಾದಶಿಯ ಕಾರ್ಯಕ್ರಮಕ್ಕಾಗಿ ಅದಕ್ಕೆ ಕಚ್ಚೆ ಕಟ್ಟುವಾಗ ಶ್ರೀ ಕೃಷ್ಣ ಸಂಕೀರ್ತನಾಲಯದ ಗೋಡೆಗೆ ಗಾರೆ ನಡೆಯುತ್ತಿತ್ತು. ಅಮಲಿಕಾ ಏಕಾದಶಿಯ ಕಾರ್ಯಕ್ರಮದ ಒಂದು ತಿಂಗಳ ಒಳಗೆ ಅರ್ಧಂಬರ್ಧ ಕೆಲಸವಾಗಿದ್ದ ಮನೆಯಲ್ಲೇ ಗೃಹಪ್ರವೇಶವೂ ನಡೆದಿತ್ತು. 16–3–2011 ರಂದು ಅಮಲಕೀ ಎಕಾದಶಿ ಕಾರ್ಯಕ್ರಮದಂದೇ ಪ್ರತಿಷ್ಠಾನದ ಮತ್ತು ಪ್ರಶಸ್ತಿಯ ಉದ್ಘಾಟನೆಗೆ ಪರಮ ಪೂಜ್ಯ ಶ್ರೀ ಶ್ರೀ ಶ್ರೀ ನರಸಿಂಹಾಶ್ರಮ ಸ್ವಾಮೀಜಿ, ಶ್ರೀಮಠ ಬಾಳ್ಕುದ್ರು ಅವರನ್ನು ಕರೆಸುವುದು ಇತ್ಯಾದಿ ನಿರ್ಣಯವಾಗಿ ನೀಲಾವರ ಮೇಳದ ಆಟಕ್ಕೆ ವ್ಯವಸ್ಥೆ ಮಾಡಿದ್ದಾಯ್ತು 15 ರಂದು ನೀಲಾವರ ಪಂಚಮಿ ಕಾನಿನಲ್ಲಿ ಭಾರೀ ನಾಗಮಂಡಲೋತ್ಸವ ಇದ್ದುದರಿಂದ ಅಂದು ಪ್ರೇಕ್ಷಕರ ಸಂಖ್ಯೆ ಕಡಿಮೆ ಅದೀತೆಂಬ ಎಚ್ಚರಿಕೆ ಹಿತೈಷಿಗಳು ಕೊಟ್ಟಿದ್ದರು. ಸ್ಥಳಿಯರಲ್ಲಿ ಮರಾಠಿ ಜನರೇ ಅಧಿಕರಿದ್ದು ಅವರು ಅಗಲೇ ಹೋಳಿ ಹಬ್ಬ ಆಚರಣೆಯಲ್ಲಿ ತೊಡಗಿದ್ದರು. ಏಕಾದಶಿಯಾದ್ದರಿಂದ ಉಟವಿಲ್ಲದ ಆಟ. ಅನೇಕ

ಸವಾಲುಗಳ ಮಧ್ಯೆ ಏಕಾದಶಿ ತಯಾರಿಯಲ್ಲಿ ಸಂಜೆಯಾಗುತ್ತ ಬಂತು. ಪ್ರಥಮ ಪ್ರಶಸ್ತಿಯನ್ನು ಕುಷ್ಠ ಗಾಣಿಗರ ಅಳಿಯ ಶ್ರೀ ಕೋಡಿಶಂಕರ ಗಾಣಿಗರಿಗಿತ್ತು ಸನ್ಮಾನ ಮಾಡುವ ನಿರ್ಧಾರಕ್ಕೆ ಬಂದು, ಅವರ ಅಳಿಯ ಕೋಡಿ ವಿಶ್ವನಾಥ ಗಾಣಿಗರ ಮುಖಾಂತರ ವಿಷಯ ತಿಳಿಸಿ ಅವರು ಮೀನಾಕ್ಷಿ ಕಲ್ಯಾಣದಲ್ಲಿ ಈಶ್ವರನ ಪಾತ್ರ ಮಾಡಬೇಕೆಂದು ವಿನಂತಿಸಿದ್ದೆವು. ನರಕಾಸುರನ ಪಾತ್ರ ನಿರ್ವಹಿಸಲು ವಿಶ್ವನಾಥ ಗಾಣಿಗರು ಅನಿವಾರ್ಯ ಕಾರಣದಿಂದ ಒಪ್ಪಲಿಲ್ಲ. ಬಾರತೀಯ ವಾಯುಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯ ಬಳಿಕ ಭಾಗವತರಾಗಿ ಖ್ಯಾತರಾಗಿದ್ದ ಶ್ರೀ ರಾಮಚಂದ್ರ ಮಂಜ ಅಂದು ಬರಲಿಲ್ಲ. ಕೆಲವು ದಿನಗಳ ನಂತರ ಎಂದೂ ಬರಲಾರದ ಪ್ರಯಣ ಕೈಗೊಂಡರು.

ಸಂಜೆಯ ತಯಾರಿಯ ಮಧ್ಯೆ ಒಬ್ಬೊಬ್ಬರೇ ಆಗಮಿಸುತ್ತಿರುವಾಗ ಕಾರೊಂದು ಮನೆಯ ಮುಂದೆ ನಿಂತಿತು. ಅದರಿಂದ ಅಜಪುರ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಲಕ್ಷ್ಮಣ ಗಾಣಿಗರು, ಉಡುಪಿ ಜಿಲ್ಲಾ ಪರಿಷತ್ತಿನ ಸದಸ್ಯ ಹಾರಾಡಿ ಕೇಶವ ಕುಮಾರರು, ಇಬ್ಬರು ಹೆಂಗಸರು ಇಳಿದ ನಂತರ ಶ್ರೀ ಕೋಡಿ ಶಂಕರ ಗಾಣಿಗರು ಕೆಳಗಿಳಿದರು. ಅವರ ದೈಹಿಕ ಸ್ಥಿತಿಯನ್ನು ಕಂಡಾಗ ನನ್ನ ತಪ್ಪಿನ ಅರಿವಾಯ್ತು. ಇವರಿಂದ ಅದೆಂತು ವೇಷ ಮಾಡಿಸಲಿ ಎಂಬ ಆತಂಕವಿತ್ತು. ಅತಿಥಿಗಳೆಲ್ಲ ಬಂದು ಕಾರ್ಯಕ್ರಮ ನಡೆದು ನರಕಾಸುರ ವಧೆಯಲ್ಲಿ ನಾರದನ ಪಾತ್ರ ನಿರ್ವಹಿಸಿ ಮುಖದ ಬಣ್ಣ ಅಳಿಸಿ, ಮುಂದೇನು ಮಾಡಲಿ ಎಂಬ ಚಿಂತೆಯೊಂದಿಗೆ ಶಂಕರಗಾಣಿಗರನ್ನು ಹುಡುಕಿಕೊಂಡು ಬಂದಾಗ ಹಾಸಿಗೆಯಲ್ಲಿ ಮಲಗಿದ್ದರು. ಮೊಮ್ಮಗಳನ್ನು ಮಲಗಿಸುತ್ತ ಅವರ ಮಡದಿ ಶ್ರೀಮತಿ ಕನಕಾಂಗಿ ಮತ್ತು ಮಗಳು ಕುಳಿತಿದ್ದರು. ವೇಷ ಮಾಡುವುದು ಬೇಡವೆಂದು ಹೇಳುವ ಉದ್ದೇಶದಿಂದ ಹೋದವನಿಗೆ ಹಾಗನ್ನಲು ಆಗಲಿಲ್ಲ.

ಮಾತು ಪ್ರಾರಂಭಿಸಿದ ನಂತರ ಅವರು ತನ್ನ ಮಾವನ ಬಗ್ಗೆ ಸ್ವಲ್ಪ ಮಾತನಾಡಿದರು. ಮಾವಳ್ಳಿ ಟಿಫನ್ ರೊಂ ನವರಿಗೂ ಕುಷ್ಠ ಗಾಣಿಗರಿಗೂ ಇದ್ದ ಸ್ನೇಹದ ಬಗ್ಗೆ, ಅಂದು ಅವರು ಸುಡುತ್ತಿದ್ದ ಹುಲ್ಲಿನ ಬಗ್ಗೆ ಹೇಳಿ ಸುಮ್ಮನಾದರು.

ನಮ್ಮಮ್ಮ ನಮ್ಮನ್ನಗಲಿ ಕೆಲವು ವರ್ಷವಾಯ್ತು, ಚಿಕ್ಕಮ್ಮನ ವಯಸ್ಸಿನ ಶ್ರೀಮತಿ ಕನಕಾಂಗಿಯವರು "ಮಗನೇ ನನ್ನಪ್ಪನನ್ನು ಜನ ಮರೆತೇ ಬಿಟ್ಟರು ಅಂದುಕೊಂಡಿದ್ದೆ" ಅನ್ನುತ್ತ ಅನಂದ ಬಾಷ್ಪ ಹರಿಸಿದಾಗ ನನಗೂ ಏನೆನ್ನಬೇಕೆಂದೇ ತಿಳಿಯಲಿಲ್ಲ. ಕಾರ್ಯಕ್ರಮಕ್ಕೆ ಬರುವಾಗ ತಮ್ಮ ಚೀಲದಲ್ಲಿ ತಂದೆಯವರ ಪಾತ್ರದ ಕೇದಗೆ ಮುಂದಲೆಯ ಬಣ್ಣದ ಭಾವಚಿತ್ರವನ್ನವರು ತಂದಿದ್ದರು. ಅದನ್ನೆತ್ತಿ ತೋರಿಸುತ್ತ ತಂದೆಯವರ ಬಗ್ಗೆ ಕೆಲವಾರು ವಿಷಯ. ಅವರ ಅಂತಿಮ ಕ್ಷಣಗಳು, ಅಣ್ಣ ದಿ. ಮಾಣಿ ಕಲಾವಿದನಾಗಿ ಬೆಳೆಯಲೇ ಇಲ್ಲವೆಂಬ ಕೊರಗು. ಮುಂತಾದ ಹಲವು ವಿಷಯ ಮಾತಾಡಿದರು.

ಮೀನಾಕ್ಷಿ ಕಲ್ಯಾಣದಲ್ಲಿ ಕುಷ್ಠ ಗಾಣಿಗರು ನಂದಿ ಮಾಡುತ್ತಿದ್ದರೂ ಶೂರಸೇನನ ಪಾತ್ರವನ್ನು ಮಾಡುತ್ತಿದ್ದರಂತೆ. ಅಪರೂಪಕ್ಕೆ ಎರಡನೇ ವೇಷ ಗೈರು ಹಾಜರಾದಾಗ ಈಶ್ವರ ಕೂಡಮಾಡಿದ್ದುಂಟೆಂದರು.

ಮಾತಿನ ಮಧ್ಯೆ ಹುಟ್ಟೂರಲ್ಲಿ ಕುಷ್ಟಗಾಣಿಗ ಬಕಾಸುರ ವದೆಯಲ್ಲಿ ಬಂಡೀಭೀಮನ ಪಾತ್ರದ ಬಗ್ಗೆ ಸಂಕ್ಷೇಪ್ತವಾಗಿ ಹೇಳಿದ್ದರು.

ಬಕಾಸುರ ಯಾರದ್ದೆಂದು ಅವರು ಹೇಳಲೂ ಇಲ್ಲ. ಪ್ರಸ್ತುತವೂ ಅಲ್ಲ. ಅಂದಿನ ದಿನಗಳಲ್ಲಿ ಆಟದ ಸಭೆಗೆ ಆಟದಗಾರ ಎಂದೆನ್ನುತ್ತಿದ್ದೆವು.

ನಾಲ್ಕು ಬಿದಿರಿನ ಕಂಬಗಳಿಗೆ ಮಾವಿನೆಲೆ ಕಟ್ಟಿ ಕೆಲವು ಗ್ಯಾಸ್ ಲೈಟ್ ಹಾಕಿದ್ರೆ ರಂಗಸ್ಥಳ ತಯಾರ್. ಒಂದು ಹಡಿಮಂಚ ಅದರಲ್ಲಿ ಭಾಗವತರು ಮದ್ದಳೆಗಾರರು ಶ್ರುತಿ ಒತ್ತುವವರು. ಹಿಂಬದಿಯ ಪರದೆ ಇರುತ್ತಿರಲಿಲ್ಲ. ಕೆಲವು ಪ್ರೇಕ್ಷಕರು ಬಾಗವತರ ಹತ್ತಿರ ನಿಂತೇ ಆಟ ನೋಡುವುದಿತ್ತು.

ಮಂದರ್ತಿ, ಮಾರಣಕಟ್ಟೆ ಮೇಳದಲ್ಲಾದರೆ ಒಂದು ರಥ ಉಳಿದ ಮೇಳಗಳಲ್ಲಿ ಸ್ಥಳೀಯವಾಗಿ ಲಭ್ಯವಿರುತ್ತಿದ್ದ ಕುರ್ಚಿಯೆ ರಥ. ನೆಲದ ಮೇಲೆ ಕುಳಿತು ಆಟ ನೋಡುತ್ತಿರುವ ಪ್ರೇಕ್ಷಕರು. ರಂಗ ಸ್ಥಳದ ಮುಂದೆ ಸಣ್ಣದೊಂದು ಚಪ್ಪರ ಅದಕ್ಕೆ ಬ್ರಹ್ಮ ಚಪ್ಪರವೆಂಬ ಹೆಸರು. ಅದರಲ್ಲಿ ಬ್ರಾಹ್ಮಣರೂ ಕೊಂಕಣಸ್ಥರೂ ಕುಳಿತಿರುವ ವಾಡಿಕೆ.

ಹರೆಯದ ಗಂಡಸರು ನಿಂತೇ ಆಟ ನೋಡುವುದು. ಆಟದ ಗಾರದ ಸುತ್ತ ಸಂಚಾರಿ ಅಂಗಡಿಗಳು. ಮುಂಡಕ್ಕಿ, ಕರ್ಜೂರ, ಚಕ್ಕುಲಿ, ನೆಲಗಡಲೆ, ಹುರಿಗಡಲೆ, ಎಲೆ ಅಡಿಕೆ, ಇತ್ಯಾದಿಗಳಲ್ಲದೆ ಮಿಠಾಯಿ ಸಹ ಇರುತ್ತಿತ್ತು.

ದಿ. ಕುಷ್ಟ ಗಾಣಿಗರು ಭೀಮನಾಗಿ ಭಂಡಿ ಹೊಡೆಯುತ್ತ ಭಕಾಸುರನಲ್ಲಿಗೆ ಹೋಗುವ ದೃಶ್ಯ, ಹೊಟ್ಟೆಯ ಸುತ್ತ ಸಂದು ಸಂದಿಗೆಲ್ಲ ಮುಂಡಕ್ಕಿ, ಚಕ್ಕುಲಿ ಇತ್ಯಾದಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕಟ್ಟಿಕೊಂಡು ರಂಗಸ್ಥಳಕ್ಕೆ ಬಂದು ಅದನ್ನೆಲ್ಲ ತಿಂದು ಮುಗಿಸುವ ಪ್ರಯತ್ನದಲ್ಲಿದ್ದು ಅದನ್ನು ಕೊಡುತ್ತೇನೆಂಬಂತೆ ಪ್ರೇಕ್ಷಕರತ್ತ ತೋರಿಸುತ್ತಿದ್ದರಂತೆ.

ಹೆಚ್ಚಿನ ಪ್ರೇಕ್ಷಕರು ಅನಕ್ಷರಸ್ಥರು, ಮುಗ್ಧ ಮಹಿಳೆಯರು ಅವರಿಗೆಲ್ಲ ತಮ್ಮೂರವರೇ ಆದ ಕುಷ್ಟಣ್ಣನ ಪಾತ್ರವೆಂಬ ಅಭಿಮಾನಬೇರೆ. ಬಂಡೀಭೀಮ ತನ್ನ ಕೈಯಲ್ಲಿದ್ದ ತಿಂಡಿಯನ್ನು ಆ ರೀತಿ ತೊರಿಸುವಾಗ ಅದನ್ನು ಪಡೆಯುವ ತವಕದಲ್ಲಿ ಮುಗ್ಧ ಮಹಿಳೆಯೊಬ್ಬಳು ತನ್ನ ಸೆರಗೊಡ್ಡಿದ್ದರು. ಭೀಮ ಕೈ ಹಿಂದೆಳೆದು ತಿಂಡಿಯನ್ನು ಸ್ವಾಹಾ ಮಾಡಿದಾಗ ಆಕೆ ನಾಚಿ ನೀರಾದರು. ಹತ್ತಿರದ ಹೆಂಗಸರೆಲ್ಲ ಗೊಳ್ಳನೆ ನಕ್ಕರು.

ಹುಸಿ ಮುನಿಸಿನಿಂದ ಕೆಲಸಕ್ಕೆ ಹೋದಾಕೆ ಕುಷ್ಟಣ್ಣ ಹೀಗೆ ಮಾಡಿದನೆಂದು ಪಟೇಲರಲ್ಲಿ ದೂರಿ ಕೂಂಡರು. ದಾರಿಯಲ್ಲಿ ಹೋಗುತ್ತಿದ್ದವರನ್ನು ತಡೆದು "ಹೀಗೇಕೆ ಮಾಡಿದೆ ಕುಷ್ಟಣ್ಣ?" ಎಂದು ಕೇಳಿದ್ದರು.

ಅದನ್ನೇ ವಿವರವಾಗಿ ಕೇಳುವ ತವಕದಲ್ಲಿದ್ದಾಗ ಕೋಡಿ ಶಂಕರ ಗಾಣಿಗರು ತಟ್ಟನೆ ಎದ್ದು ಕುಳಿತರು. ಮಾತು ನಿಲ್ಲಿಸಿ ಏನು ಬೇಕೆಂದು ಕೇಳಿದರೆ ತಲೆ ಅಲ್ಲಾಡಿಸಿ ತಟ್ಟನೆ ಹೊರನೆಡೆದರು. ಶ್ರೀಮತಿ ಕನಕಾಂಗಿಯವರು, ನಾನು ಅವರನ್ನು ಹಿಂಬಾಲಿಸಿದೆವು. ಬೆರೆಳೆಣಿಕೆಯಲ್ಲಿದ್ದ ಪ್ರೇಕ್ಷಕರನ್ನು ಕಂಡು ಬೇಸರ ವ್ಯಕ್ತಪಡಿಸುತ್ತ ನೇರವಾಗಿ ವೇಷ ಕಟ್ಟಲು ಕುಳಿತೇ ಬಿಟ್ಟರು. ಬೆರಳಿಲ್ಲದ ಕಾಲಿಗೆ ಗೆಜ್ಜೆಯ ತುದಿಯನ್ನು ಸುತ್ತಿಕೊಂಡು ಗೆಜ್ಜೆ ಕಟ್ಟುತ್ತಿರುವಾಗ ನನ್ನ ಕಣ್ಣು ಮಂಜಾಯ್ತು.

ಈಶ್ವರನ ವೇಷ ಕಟ್ಟಿ ನಿಂತ ಅವರನ್ನು ಹಿಡಿದುಕೊಂಡೇ ರಂಗ ಸ್ಥಳಕ್ಕೆ ತಂದು ಪರದೆಬಿಟ್ಟು ಕುಳ್ಳಿರಿಸಿ ಪರದೆ ಎತ್ತಿಸಿದೆವು ಕುಳಿತೇ ಮಾತಾಡಿದರು. ಮೀನಾಕ್ಷಿ ಬಂದ ಮೇಲೆ ನಿಂತರೂ ಸಿಂಹಗಾನದ ಹಿಡಿಯನ್ನು ಹಿಡಿದೇ ನಿಂತಿದ್ದರು. ಹಾಗಿದ್ದರೂ ಕೂತೂಹಲ ತಾಳಲಾರದೆ ಪ್ರೇಕ್ಷಕರೊಬ್ಬರು ಓಡಿಬಂದು ಯಾರವರು ಎಂದು ಕೇಳಿದರು. ರಂಗಸ್ಥಳದ ಕಂಬಕ್ಕೆ ತಾಗಿ ಹಿಂಬದಿಯಲ್ಲಿ ಉದ್ವಿಗ್ನನಾಗಿ ನಿಂತೇ ಇದ್ದೆ. ಮೀನಾಕ್ಷಿ ಪ್ರೀತಿ ಇಂದ ತಬ್ಬಿಕೊಂಡೇ ಈಶ್ವರನನ್ನು ರಂಗಸ್ಥಳದಿಂದ ಹೊರತಂದು ನನ್ನಕೈಗಿತ್ತರು. ಹತ್ತಿರದಲ್ಲೇ ನಿಂತಿದ್ದ ಅವರ ಧರ್ಮಪತ್ನಿ ಶ್ರೀಮತಿ ಕನಕಾಂಗಿ ಮತ್ತು ನಮ್ಮೆಲ್ಲರ ಮುಖದಲ್ಲಿ ಅಯ್ಯಬ್ಬ ಎಂಬ ಮಂದಹಾಸ ಮೂಡಿತು. ಮಾವನಿಗೆ ತಕ್ಕ ಅಳಿಯ ತಾನೆಂದು ಕೋಡಿ ಶಂಕರ ಗಾಣಿಗರು ಸಾಭೀತು ಪಡಿಸಿದ್ದರು.

ಹಿರಿಯ ಕಲಾವಿದ ಮಜ್ಜಿಗೆ ಬೈಲು ಆನಂದ ಶೆಟ್ಟಿಯವರ ಮಾವ ಮಜ್ಜಿಗೆ ಬೈಲು ಚಂದಯ್ಯ ಶೆಟ್ಟಿಯವರದ್ದು ಭೀಮ ಗಾತ್ರ, ಅವರ ಭಂಡೀಭೀಮ ಬಹಳ ಹೆಸರುವಾಸಿ. ತನ್ನದೇ ನಿರ್ವಹಣೆಯಿಂದ ಕುಷ್ಠಗಾಣಿಗರು ಅದರಲ್ಲೂ ಅದ್ವಿತೀಯರಾಗಿದ್ದರು.

## ದಿ. ನೀಲಾವರ ಸುಬ್ಬಣ್ಣ ಶೆಟ್ಟರ ಮೆಚ್ಚಿನ ಕಲಾವಿದ

ಮಂದರ್ತಿ ಮೇಳದ ಎರಡನೇ ವೇಷ ದಾರಿಗಳಿಗೆ ಗೌರವದೊಂದಿಗೆ ಜವಾಬ್ದಾರಿಯನ್ನು ತರುತ್ತಿದ್ದವು ಒಂದು ಜತೆ ಬೆಳ್ಳಿಯ ಗೆಜ್ಜೆ. ಮೇಳದ ಯಜಮಾನನಾಗಿಯೂ ಮುಖ್ಯ ಸ್ತ್ರೀ ಪಾತ್ರದಾರಿಯೂಗಿಯೂ ತನ್ನ ಐವತ್ತನೇ ವರ್ಷದ ನಂತರ ಮೂಗಿಗೆ ಬುಲಾಕು (ಡಾಬು) ಹಾಕಿಕೊಂಡು ಕೃಷ್ಣನ ಪಾತ್ರ ವಹಿಸುತ್ತ ಯಜಮಾನಿಕೆ ಮಾಡುತ್ತಿದ್ದ ನೀಲಾವರ ಸುಬ್ಬಣ್ಣ ಶೆಟ್ಟಿಯವರು ತನ್ನ ಗೆಜ್ಜೆಯಲ್ಲಿದ್ದ ಗೆಜ್ಜೆಗಳ ಸಂಖ್ಯೆ ಬರೆದು ಅದನ್ನು ಎರಡನೇ ವೇಷದಾರಿ ಮಾತ್ರ ಧರಿಸಬೇಕು, ಒಂದು ಗೆಜ್ಜೆ ಉದುರಿ ಹೋದರೂ ಅದನ್ನು ಮಾಡಿಸಿ ತಿರುಗಾಟದ ಕೊನೆಯಲ್ಲಿ ಹಿಂತಿರುಗಿಸಬೇಕು ಎಂಬಿತ್ಯಾದಿ ನಿಯಮಗಳ ಶರ ಬರೆದು ಮೇಳಕ್ಕೆ ಕೊಟ್ಟಿದ್ದರು. ದಿ. ಹಾರಾಡಿ ರಾಮ ಗಾಣಿಗರು. ದಿ. ಉಡುಪಿ ಬಸವ ನಾಯಕರು, ದಿ. ಪೆರ್ಡೂರು ರಾಮ, ದಿ. ಕೋಡಿ ಶಂಕರ ಗಾಣಿಗ ಮುಂತಾದವರೆಲ್ಲ ಅದನ್ನು ಹೆಮ್ಮೆಯಿಂದ ಕಟ್ಟುತ್ತಿದ್ದರು. ಇಂದು 5 ಮೇಳವಿರುವುದರಿಂದ ಆ ಗೆಜ್ಜೆ ತಿರುಗಾಟ ಮಾಡದೇ ದೇವಸ್ಥಾನದಲ್ಲೇ ಇದೆ. ಸಂಪೂರ್ಣ ನಿವೃತ್ತಿಯ ನಂತರವೂ ಸಂದರ್ಭದಲ್ಲಿ ಮೊಮ್ಮಗನೆನೆಸಿ ಕೊಂಡಿರುವ ನೀಲಾವರ ಬಸವ ಶೆಟ್ಟಿಯವರ ಜತೆ ಆಟಕ್ಕೆ ಹೋಗುತ್ತಾ ನವಕಲಾವಿದರಿಗೆ ಮಾರ್ಗದರ್ಶನ ಕೊಡುತ್ತಿದ್ದರು.

ಕುಷ್ಠ ಗಾಣಿಗರ ನಿವೃತ್ತಿಯ ನಂತರ ಯಕ್ಷಗಾನದಲ್ಲಿ ಪುರುಷವೇಷಗಳ ಕ್ಷಾಮ. ಅಧಿಕೃತವಾಗಿ ವಂಡಾರು ಬಸವ ಒಬ್ಬರನ್ನೇ ಆ ಸಾಲಿನಲ್ಲಿ ಗುರುತಿಸುತ್ತಿದ್ದರು ಪ್ರೇಕ್ಷಕರು. ನಾವುಂದ ಮಹಾಬಲ ಗಾಣಿಗರು, ಮೊಳಹಳ್ಳಿ ಹೆರಿಯ ನ್ಯಾಕರು ನಿಧಾನವಾಗಿ ಅದನ್ನು ತುಂಬುದ್ದುಂಟು.

ಸುಧೀರ್ಘ ಕಾಲ ಮಂದಾರ್ತಿ ಮೇಳದ ಯಜಮಾನರಾಗಿದ್ದ ದಿ. ಬೋಜ ಹೆಗ್ಡೆಯವರು ಎರಡೆರಡು ಎರಡನೇ ವೇಷಗಳ ಪ್ರಯೋಗ ನಡೆಸಿದ್ದರು. ದಿ. ಉಡುಪಿ ಬಸವ ನಾಯಕ್ ಮತ್ತು ದಿ. ಪೆರ್ಡೂರು ರಾಮ ಎಂಬ ಎರಡನೇ ವೇಷ ದಾರಿಗಳ

ಜತೆಯಲ್ಲಿ ತುಂಬುಯವ್ವನದ ಮೊಳಹಳ್ಳಿ ಹೆರಿಯ ನಾಯಕರು, ಅರಾಟೆ ಮಂಜು, ಹಾಸ್ಯಗಾರ ಕೊರಗು ದಾಸರಿಂದ ಮೇಳ ವಿಜೃಂಭಿಸುತಿತ್ತು. ಹಲವು ವರ್ಷಗಳ ನಂತರ ಪೆರ್ಡೂರು ರಾಮ ಮೇಳ ಬಿಟ್ಟ ಮೇಲೆ ದಿ. ಕೋಡಿ ಶಂಕರ ಗಾಣಿಗ ಉಡುಪಿ ಬಸವ ನಾಯಕರು ನಂತರ ದಿ. ಕೋಡಿ ಶಂಕರ ಗಾಣಿಗ ಮತ್ತು ಅಜ್ರಿ ಗೋಪಾಲ ಗಾಣಿಗರಿಬ್ಬರೂ ಮಂದರ್ತಿ ಮೇಳದ ಎರಡನೇ ವೇಷದಾರಿಗಳಾಗಿದ್ದರು.

ಹತ್ತಿರದ ಆಟಕ್ಕೆ ಹೋದ ದಿ. ನೀಲಾವರ ಸುಬ್ಬಣ್ಣ ಶೆಟ್ಟಿಯವರು ಹಿರಿಯ ಕಲಾವಿದರಲ್ಲಿ ಪ್ರಸಂಗ ಏನೆಂದು ಕೆಳಿದರು, "ದ್ರೌಪದಿ ಪ್ರತಾಪ" ಎಂಬ ಉತ್ತರ ಬಂತು. ಉಡುಪಿಯವರು ತನ್ನದು ಭೀಮ ಎಂದಾಗ ಅರ್ಜುನ ತನ್ನದೆಂದರು ಪೆರ್ಡೂರು ರಾಮ. "ರಾಮ ಪ್ರವೇಶ ಕುಷ್ಟನಂತೆ ಇರಲಿ, ನೆಟ್ಟಗೆ ರಂಗಸ್ಥಳ ಪ್ರವೇಶ ಮಾಡಬೇಡ ಕೇದಗೆ ಮಂದಲೆ ತಿರುಗಿಸಿ ಕುಷ್ಟನಂತೆ ಪ್ರವೇಶ ಮಾಡು" ಎಂದರು ಸುಬ್ಬಣ್ಣ ಶೆಟ್ಟರು. ಅಯ್ಯೋ ಯಜಮಾನರೇ ಅದೆಲ್ಲ ಅವರಿಗೇ ಸೈ, "ನಮಗೆಲ್ಲ ಎಲ್ಲಿಂದ ಬರಬೇಕು" ಎಂದು ಹೇಳುತ್ತ ಕೊನೆಗೂ ರಂಗಸ್ಥಳಕ್ಕೆ ನೇರ ಪ್ರವೇಶ ಮಾಡಿದರಂತೆ.

ಪ್ರಸಂಗ ಮುಗಿದು ವೇಷ ಕಳಚಿದ ನಂತರ "ರಾಮ ನಿನಗೇನಾಗಿದೆ ಬಸವನಲ್ಲಿ ಕೇಳಿದ್ದರೆ ನಡೆ ಹೇಳುತ್ತಿರಲಿಲ್ಲವೇ ಅದು ಅರ್ಜುನನ ಪ್ರವೇಶವೇ ಮುಂದೆ ಜಾಗ್ರತೆ ಮಾಡು ಉಳಿದದ್ದೆಲ್ಲ ಅಡ್ಡಿಲ್ಲ" ಎಂದು ಸರ್ಟಿಫಿಕೇಟು ಕೊಟ್ಟಿದ್ದರಂತೆ ಬಾಲಣ್ಣನಲ್ಲಿ ಅದನ್ನೇ ಕೇಳಿದೆ. ಕುಷ್ಟ ಗಾಣಿಗರು ಮಾಡಿದರೆಂದು ಅದನ್ನು ಅನುಕರಿಸಲು ಯಾರೂ ಪ್ರಯತ್ನಿಸುತ್ತಿರಲಿಲ್ಲ. ಸ್ವಲ್ಪ ಮಟ್ಟಿಗೆ ಅದನ್ನು ಮಾಡಿದ್ದಿದ್ದರೆ ಮಾಳಹಳ್ಳಿ ಹೆರಿಯ ಮಾತ್ರ. ದ್ರೌಪತಿ ಪ್ರತಾಪದಲ್ಲಿ ಪ್ರವೇಶ ಮಾತ್ರವಲ್ಲ ಸುಭದ್ರೆಯನ್ನು ದ್ರೌಪತಿಯ ಜತೆ ಯುದ್ಧಕ್ಕೆ ಅಣಿಮಾಡಿಸುವಾಗ ಬಹಳ ಚನ್ನಾಗಿ ಪಾತ್ರ ನಿರ್ವಹಣೆ ಮಾಡುತ್ತಿದ್ದರು ಕುಷ್ಟಗಾಣಿಗರು. ಅವರಿದ್ದರೆಂದರೆ ದ್ರೌಪದಿ ಪ್ರತಾಪ ಆಡಿಸಲ್ಪಡುತ್ತಿತ್ತು ಎಂದರು.

ನಮ್ಮ ಮಲಗದ್ದೆಯಲ್ಲಿ ಆದ ಪ್ರಥಮ ಆಟದಲ್ಲೂ ಬಹಳ ಹೊತ್ತು ಪ್ರಸಂಗ ನಿರ್ಣಯವಾಗದಿದ್ದಾಗ ತಂದೆಯವರು ಹೇಳಿದ್ದೂ, ಅಂದು ಆದದ್ದು ದ್ರೌಪದಿ ಪ್ರತಾಪ. ಉಡುಪಿಯವರ ಭೀಮ, ವಂಡಾರು ಬಸವನವರ ಅರ್ಜುನ, ಅನಾಚೆಯವರ ದ್ರೌಪದಿ.

## ಪರುಶುರಾಮ

ಬಿರ್ತಿ ಬಾಲಣ್ಣ ಹೇಳುತ್ತಲೇ ಹೋದರು ನಾನು ಕೇಳುತ್ತಲೇ ಇದ್ದೆ. ಕೆಲವರಿಗೆ ದೇವರು ಯಕ್ಷಗಾನಕ್ಕೆಂದೇ ದೇಹ ಒಂದನ್ನು ಕೊಡುತ್ತಾರೆ. ಅಂಥವರಲ್ಲಿ ಒಬ್ಬರು ಕುಷ್ಟಗಾಣಿಗರು. ಅವರು ಕಟ್ಟುತ್ತಿದ್ದದ್ದು ಸಾಮನ್ಯ ಅಟ್ಟೆಗಳನ್ನೇ, ಕೇದಿಗೆ ಮುಂದಲೆ ಅಷ್ಟು ಗಾತ್ರದ್ದಲ್ಲ. ಅವರ ಮುಖ, ನೆತ್ತಿ, ದೇಹ ಎಲ್ಲ ಒಂದಕ್ಕೆ ಒಂದು ಪೂರಕ, ಆ ಕೇದಗೆಮುಂದಲೆಯನ್ನು ಅವರು ಸ್ವಲ್ಪವೇ ಅಲ್ಲಾಡಿಸುತ್ತಿದ್ದರೆ ಅದು ಮಿಂಚಿದಂತಾಗುತ್ತಿದ್ದುದನ್ನು ಬಾಲ್ಯದಲ್ಲಿ ನಾವೆಲ್ಲ ಕಂಡವರು. ಅರ್ಜುನ, ಪುಷ್ಕಳ, ಕೃಷ್ಣ, ಸುಧನ್ವ ಹೀಗೆ ಅವರು ಹೆಚ್ಚಾಗಿ ಕೇದಗೆ ಮುಂದಲೆಯಲ್ಲೇ ಕಂಡು ಬರುತ್ತಿದ್ದರು.

ಅವರು ಮಾಡಿದ್ದ ಕೊನೆಯ ವೇಷ ಪರುಶುರಾಮ, ಬ್ರಹ್ಮಾವರ ಗಾಂಧೀ

ಮೈದಾನದಲ್ಲಿ, ವೇಷ ಕಳಚಿದ ನಂತರ ಬಿ. ವಿ. ಆಚಾರ್ಯರ "ಕುಷ್ಠ ಇನ್ನಿದೆಲ್ಲ ಬೇಡ" ಎಂದು ಹೇಳಿದ್ದರಿಂದ ಮತ್ತೆ ಅವರು ವೇಷ ಮಾಡಲಿಲ್ಲ.

ಸಾಲಿಗ್ರಾಮ ಮೇಳದಲ್ಲಿ ಬಹಳಷ್ಟು ಪ್ರದರ್ಶನಕಂಡ ಪ್ರಸಂಗ ಭೀಷ್ಮ, ದಿ. ವೀರ ಭದ್ರ ನಾಯಕರ ಶಂತನು, ಕುಂಜಾಲು ರಾಮಕೃಷ್ಣರ ದಾಸರಾಜ, ಸಿರಿಯಾರ ಮಂಜು ನಾಯಕರ ದೇವವ್ರತ, ದಿ. ಶಂಭು ಹೆಗ್ಡೆಯವರ ಸಾಲ್ವ, ದಿ. ಗಜಾನನ ಹೆಗ್ಡೆಯವರ ಅಂಬೆ, ದೊಡ್ಡ ಸಾಮಗರ ಪರುಶುರಾಮ, ದಿ. ಮಹಾಬಲ ಹೆಗ್ಡೆಯವರ ಭೀಷ್ಮ (ಕಾಯಿ ಗಡ್ಡದ ಭೀಷ್ಮ) ಕೊನೆಗೆ ದಿ. ವೀರಭದ್ರ ನಾಯಕರ ಪರ್ವದ ಭೀಷ್ಮ (ಹಣ್ಣು ಗಡ್ಡದ ಭೀಷ್ಮ)

ಅಂದು ಅಷ್ಟೇನು ಚಾಲ್ತಿಯಲ್ಲಿರದ ಈ ಪ್ರಸಂಗದಲ್ಲಿದ್ದ ಪರಶುರಾಮನ ವೇಷವನ್ನೇಕೆ ದಿ. ಕುಷ್ಠ ಗಾಣಿಗರಿಗಿತ್ತರೆಂದು ಆಗಾಗ ಅನ್ನಿಸುತ್ತಿತ್ತು. ಮಣಿಪಾಲದ ಗೊಲ್ಡನ್ ಜ್ಯೂಬ್ಲಿ ಹಾಲ್‌ನಲ್ಲಿ ವೈದ್ಯ ದಿಗ್ಗಜಗಳು ನೊಡುತ್ತಿದ್ದಂತೆ ಅದೇ ಪರಶುರಾಮನ ವೇಷದಲ್ಲಿದ್ದ ದಿ. ಮಂಜು ನಾಯಕರು ಕೊಡಲಿ ಎತ್ತಿದವರು ಹೃದಯಾಘಾತದಿಂದ ಕುಸಿದು ಬಿದ್ದು ರಂಗಸ್ಥಳದಲ್ಲೇ ದೇಹ ತ್ಯಾಗ ಮಾಡಿದ್ದರು.

ಜನ್ಮ ಶತಾಬ್ಧಿಯ ಪ್ರಯುಕ್ತ ನಾನು ಕಂಡ ಹಿರಿಯರಲ್ಲಿ ಈ ಬಗ್ಗೆ ವಿಚಾರಿಸಿದಾಗ ರಾಮನ ಕರ್ಣ, ಕುಷ್ಠನ ಅರ್ಜುನಂತೆ  ರಾಮನ ಭೀಷ್ಮ, ಕುಷ್ಠನ ಪರಶುರಾಮ ಅಂದು ಪ್ರಸಿದ್ದಿ ಪಡೆದದ್ದು ತಿಳಿಯಿತು. ಬಾಲಣ್ಣ ಹವ್ಯಾಸಿ ಕಲಾವಿದನ ಭೀಷ್ಮನ ಮುಂದೆ ಕುಷ್ಠ ಗಾಣಿಗರಿಂದ ಪರಶುರಾಮ ಮಾಡಿಸಿ, ಬಿ. ವಿ. ಆಚಾರ್‍ಯರ ಕೈಯಲ್ಲಿ ಬೈಸಿಕೊಂಡರು. ಅದರ ಉದ್ದೇಶ ತಿಳಿದು ಬಿ. ವಿ ಆರ್ಚಾಯರು ಸಂತೋಷಗೊಂಡಿದ್ದರಂತೆ.

## ಅಂಗಾರ ವರ್ಮ

ಅಂಗಾರ ವರ್ಮ ಎಂಬುದು ವಿಚಿತ್ರ ಎನ್ನಿಸುವ ಹೆಸರು. ಈ ಪ್ರಸಂಗ ಹಿಡಿಂಬಾ ವದೆಯ ನಂತರದ್ದಂತೆ. ಅಂಗಾರ ವರ್ಮ ಜಲಕ್ರೀಡೆಯಾಡುವ ಗಂದರ್ವನಂತೆ. ಅರ್ಜುನನಿಂದ ಸೋಲಿಸಲ್ಪಡುತ್ತಾನಂತೆ. ನನಗದರ ಹೆಚ್ಚಿನ ಮಾಹಿತಿ ತಿಳಿಯದು. ಅಂತಹ ಪಾತ್ರಕ್ಕೆ ಕುಷ್ಠ ಗಾಣಿಗರು ಸಣ್ಣ ಗಾತ್ರದ ಕೆಂಪು ಮಂದಾಸು ಕಟ್ಟುತ್ತಿದ್ದರಂತೆ. ಕೆಂಪು ಕಣ್ಣಿನ ವೇಷವಂತೆ. ಕೆಲಮಂದಿ ಹಿರಿಯ ಕಲಾವಿದರು ಅದನ್ನು ತೊದಲು ಮಾತಿನಿಂದ ಪ್ರಸಿದ್ಧಗೊಳಿಸಿದ್ದರಂತೆ.

ತನ್ನ ನಿತಂಬಕ್ಕೆ ಅಗ್ನಿ ಅಸ್ತ್ರ ಪ್ರಯೋಗಿಸಲ್ಪಟ್ಟಾಗ ತನ್ನೆರಡೂ ಕೈಗಳಿಂದ ಬೆಂಕಿ ಆಚರಿಸುತ್ತ ಕುಷ್ಠ ಗಾಣೀಗರ ಅಂಗಾರವರ್ಮ ರಂಗಸ್ಥಳದಿಂದ ಹೊರಗೊಡುವ ದೃಶ್ಯವನ್ನು ಹಿರಿಯರು ವರ್ಣಿಸುವುದಿಲ್ಲ, ನಗುತ್ತಲೇ ಇರುತ್ತಾರೆ.

## ಶುಕ್ರಾಚಾರ್ಯ

ಕಚ ದೇವಯಾನಿಯಲ್ಲಿ ದಿ. ಹಾರಾಡಿ ರಾಮಗಾಣಿಗರ ಯಯಾತಿ ದೊಡ್ಡ ಹೆಸರು ಮಾಡಿತ್ತು. ಅದರಲ್ಲಿ ಒಂದು ಖಾದಿ ವಸ್ತ್ರದ ಕಚ್ಚೆ ಖಾದಿ ಅರ್ಧಅಂಗಿ ಒಂದು ಖಾದಿಶಾಲನ್ನು ಸೊಂಟಕ್ಕೆ ಕಟ್ಟಿಕೊಂಡು ಸಣ್ಣ ಗಡ್ಡದೊಂದಿಗೆ ಕುಷ್ಠ ಗಾಣಿಗರ

ಶುಕ್ರಾಚಾರ್ಯ. ಒಂದು ಕಣ್ಣಿನ ಮೇಲೆ ಹತ್ತಿ ಹಚ್ಚಿಕೊಂಡು ಅದಕ್ಕೆ ವಿಚಿತ್ರ ರೀತಿಯಲ್ಲಿ ವಿನ್ಯಾಸಕೊಟ್ಟ ನಿಜವಾದ ಒಕ್ಕಣ್ಣನಂತೆ ರಂಗಸ್ಥಳಕ್ಕೆ ಬರುತ್ತಿದ್ದ ಆ ಶುಕ್ರಾಚಾರ್ಯರ ಬಗ್ಗೆ ಎಲ್ಲರೂ ಹೊಗಳುವವರೇ. ಅದೇ ಕಾವಿ ಅಂಗಿಯೊಂದಿಗೆ ಬಿಡಾರದಲ್ಲು ಅವರಿರುತ್ತಿದ್ದದನ್ನು ಬಾಲಣ್ಣ ನೆನಪಿಸುತ್ತಿರುತ್ತಾರೆ.

## ನಂದಿ

ಮಟಪಾಡಿಗೆ ಗ್ರಾಮ ದೇವತೆ ನಂದಿ. ದಿ. ನಾಗಪ್ಪ ನ್ಯಾರಿಯವರ ಹಿರಿಯ ಮಗ ಶ್ರೀ ನಾರಾಯಣ ನ್ಯಾರಿಯವರು ಅಂಚೆ ಕಚೇರಿಯಲ್ಲಿ ನೌಕರಿ ಮಾಡುತ್ತಿದ್ದರೂ ಖಾಕಿ ಸಮವಸ್ತ್ರದ ಮಧ್ಯೆಯೂ ಸದಾ ಟೊಪ್ಪಿಗೆ ಧರಿಸುತ್ತಿದ್ದರು. ನಂದಿ ಪಾತ್ರಿಯಾದ ಅವರು ತನ್ನ ಜುಟ್ಟನ್ನು ಅಷ್ಟು ಜತನದಿಂದ ಕಾಪಾಡುತ್ತಿದ್ದರು. ಅವರು ನಂದಿಯ ಭಕ್ತ. ಹಿಂದಿನ ತಲೆಮಾರಿನ ಅನೇಕ ಪ್ರಸಿದ್ಧ ಕಲಾವಿದರ ವಿವರ ಅವರಲ್ಲಿದೆ. ಆಗಾಗ ಅವರು ಕುಷ್ಟ ಗಾಣಿಗರ ನಂದಿಯ ಬಗ್ಗೆ ಹೇಳುತ್ತಿದ್ದರು. ಮೀನಾಕ್ಷಿ ಕಲ್ಯಾಣವೆಂದರೆ ಅವರಿಗೆ ಪಂಚಪ್ರಾಣ



ದಿ. ಹಾರಾಡಿ ಕುಷ್ಟ ಗಾಣಿಗ ಪ್ರಶಸ್ಥಿಯ ಉದ್ಘಾಟನಾ ಸಮಾರಂಭದ ಆಮಂತ್ರಣ ದೊಂದಿಗೆ ಅವರನ್ನು ಕಂಡೆ. ನಂದಿಯಾರದ್ದೆಂದು ಕೇಳಿದರು, ಗೊತ್ತಿಲ್ಲ ಅಂದೆ. ಸದ್ಯಕ್ಕೆ ಹವ್ಯಾಸಿ ಕಲಾವಿದ ಮಟಪಾಡಿ ಪ್ರಭಾಕರ ಆಚಾರಿ ತಕ್ಕ ಮಟ್ಟಿಗೆ ಕೋಡು ಕಟ್ಟುತ್ತಾನೆ. ಉಳಿದವರೆಲ್ಲ ದಂಡ ಅಂದರು. ಅಂದಿನ ಕಾರ್ಯಕ್ರಮದಲ್ಲಿ ಕೋಡಿಶಂಕರ ಗಾಣಿಗರು ಈಶ್ವರನಾಗಿ ಅವಿಸ್ಮರಣೀಯ ಪ್ರದರ್ಶನ ವಿತ್ತ ರೂ ನಾರಾಯಣ ನ್ಯಾರಿಯವರ ಮಾತು ನಿಜ ವಾಯ್ತು ಅಂದಿನ ನಂದಿ ಯಿಂದ ಬಹಳ ನಿರಾಸೆಯಾಯ್ತು. ಅಂದು ಆಟಕ್ಕೆ ಬಂದಿದ್ದ ಪ್ರಭಾಕರ ಆಚಾರಿಯವರಿಂದ ನಂದಿ ಮಾಡಿಸದೆ ಇದ್ದುದಕ್ಕೆ ಇಂದೂ ಹಪಿಸುತ್ತಿದ್ದೇನೆ. ಅದೇ ಮಳೆಗಾಲ ದಲ್ಲಿ ಆದಿನಾಥ (ನನ್ನ ಮಗ) ಫೋನು ಮಾಡಿದ. ಜಾರ್ಜದ್ವಿನ ಹತ್ತಿರದಲ್ಲಿದ್ದ ಡಿ. ಪಿ. ಶಾಲೆಯಲ್ಲಿ ದಿ. ಸೀತಾನದಿ ಗಣಪಯ್ಯ ಶೆಟ್ಟಿ ಪ್ರಶಸ್ತಿ ಪ್ರದಾನ ಸಮಾರಂಭ, ಅದಕ್ಕೆ ಆಜ್ರಿ ಗೋಪಾಲಗಾಣಿಗರು, ಕೊಡಿ ವಿಶ್ವನಾಥ ಗಾಣಿಗರು ಮತ್ತು ಮೊಳಹಳ್ಳಿ ಹೆರಿಯ ನ್ಯಾಕರು ಬರುತ್ತಿದ್ದಾರೆಂದು.

ಮೊಳಹಳ್ಳಿಯವರ ನಂದಿಯನ್ನು ಆಧಿನಾಥ ಬಹಳ ಮೆಚ್ಚಿಕೊಂಡಿದ್ದ. ಕುಷ್ಟ ಗಾಣಿಗರ ಅರ್ಜುನನ ನಡೆ, ನಂದಿಯ ನಡೆ, ವೀರಭದ್ರ ನ್ಯಾಕರ ತಾಮ್ರಧ್ವಜನ ನಡೆ, ಅದನ್ನೆಲ್ಲ ಚೆನ್ನಾಗಿ ಬಲ್ಲವರು ಮೊಳಹಳ್ಳಿ. ಕುಷ್ಟ ಗಾಣಿಗರ ನಂದಿ ನಾನು ಕಡದ್ದಿಲ್ಲ.

ಜನ್ಮ ಶತಾಬ್ಧಿಯ ಕುರಿತು ನೀಲಾವರ ಬಸವ ಶೆಟ್ಟಿಯವರನ್ನು ಕುಷ್ಟಗಾಣಿಗರ ನಂದಿಯ ಬಗ್ಗೆ ಕೇಳಿದ ಕೊಕ್ಕರ್ಣೆಯಲ್ಲೊಂದು ಜೋಡಾಟವಂತೆ ಕೊನೆಯ ಪ್ರಸಂಗ

ಮೀನಾಕ್ಷಿ ಕಲ್ಯಾಣ ಮಾರ್ಣಕಟ್ಟೆಯಲ್ಲಿ ಅದು ತನಕ ನಂದಿಯ ಪಾತ್ರಕ್ಕೆ ಪ್ರಸಿದ್ಧರಾಗಿದ್ದ ಶೇಷಯ್ಯ ಸೇರ್ವೆಗಾರ ನಂದಿ ಎದುರಿಗೆ ಕುಷ್ಠ ಗಾಣಿಗರ ನಂದಿ, ಮೀನಾಕ್ಷಿಯಿಂದ ನಾಲಿಗೆ ಕತ್ತರಿಸಲ್ಪಟ್ಟ ಇದಿರಾಳಿ ನಂದಿಯನ್ನು ನೋಡುತ್ತಾ ನಿಂತರಂತೆ ಶೇಷಪ್ಪಯ್ಯ. ಇಂದಿನಿಂದ ನಂದಿ ನಿನಗೆ ಎಂದು ಹರಸಿದ್ದರಂತೆ. ದಿ. ರಾಮ ಗಾಣಿಗರಿಗೆ ದಿ. ಗಣಪತಿ ಪ್ರಭುಗಳು ಕರ್ಣ ನಿನ್ನದೆಂದು ಹರಸಿದಂತೆ ದಿ. ಕುಷ್ಠ ಗಾಣಿಗರ ವಿಷಯದಲ್ಲಿ ಹೀಗಾಗಿತ್ತು.

## ಪ್ರಮೀಳಾರ್ಜುನ

ಕೆಳಮಟಪಾಡಿ, ಮೇಲ್ಮಟಪಾಡಿ, ಬಲ್ಜಿ, ನೆಲ್ಲಿಗದ್ದೆ, ಕಡ್‌ದ್‌ಮುಂಡು, ಬೋಳುಗುಡ್ಡೆ, ದೇವ್ರಾಡಿ ಇಷ್ಟೆಲ್ಲ ಬ್ರಹ್ಮಾವರ ಹೋಬಳಿಯ ಅತಿ ಸಣ್ಣ ಗ್ರಾಮವಾದ ಮಟಪಾಡಿಯ ವಿವಿದ ಪ್ರದೇಶಗಳು. ಗಟ್ಟದ ಬುಡದಿಂದ ಹರಿದು ಬರುವ ಸೀತಾನದಿಯ ಎಡದಂಡೆಗೆ ತಾಗಿಕೊಂಡಿರುವ ಜಾಗವೇ ಕೆಳಮಟಪಾಡಿ. ನಮ್ಮ ಪೂರ್ವಜರು ಅಲ್ಲಿದ್ದು ಸ್ಥಳಾಂತರಗೊಳ್ಳುತ್ತ ಮೇಲ್ಮಟಪಾಡಿಗೆ ಬಂದವರು. ಒಂದೇ ಹೊಳೆ ಎರಡಾಗಿ ಹರಿದು ದ್ವೀಪಒಂದನ್ನು ರಚಿಸಿ ಅದರ ಮಧ್ಯೆ ಬ್ರಹ್ಮಾವರ ಬಾರಕೂರು ರಸ್ತೆ ಹಾದು ಹೋಗುವುದರಿಂದ ಕೆಳಮಟಪಾಡಿ ಮತ್ತೆ ಪಡು ಮಟಪಾಡಿ ಬಡಮಟಪಾಡಿ ಆಯಿತು.

ನಮ್ಮ ಬಾಲ್ಯದಲ್ಲಿ ಅಸ್ಪಶ್ಯತೆಯ ಆಚರಣೆ ಇತ್ತು. ಗದ್ದೆಯ ಅಂಜಿನಲ್ಲಿ ನಡೆದಾಡುವಾಗ ಕೆಲವರು ಗದ್ದೆಯ ಮೂಲಯ ಬೇರೆ ಅಂಚಿನಲ್ಲಿ ನಿಲ್ಲುವುದು ಯಾ ಗದ್ದೆಗಿಳಿಯುವುದು, ದಾರಿ ಬಿಡದಿದ್ದವರ ಬಗ್ಗೆ ಜನ ಅಹಂಕಾರಿಗಳೆಂದು ಜರೆಯುವುದು ನಡೆಯುತ್ತಿದ್ದ ಕಾಲ. ಆ ಕಾಲದಲ್ಲಿ ಕೆಳ ಮಟಪಾಡಿಯ ಅಂತಹ ಹೆಂಗಸೊಬ್ಬಳು ಮಂದರ್ತಿ ಮೇಳದ ಆಟ ಆಡಿಸುವ ಹರಕೆ ಮಾಡಿಕೊಂಡು ಅದರಿಂದ ತನ್ನ ಗಂಡಾಂತರ ನಿವಾರಣೆ ಮಾಡಿಕೊಂಡು ಮುಂದೇನೆಂಬುದು ಚಿಂತಿತರಾಗಿದ್ದರು. ಶ್ರೀ ದೇವಿಯ ಕರುಣೆಯಿಂದ ಆಟದ ವೀಳ್ಯಕ್ಕೆ ಬೇಕಾಗುವಷ್ಟು ಹಣದ ಕ್ರೋಡಿಕರಣವಾಗಿತ್ತು.

ಮುಂದೇನೆಂದು ತಿಳಿಯದೆ ಹಿತೈಷಿಗಳಲ್ಲಿ ಚಿಂತನೆ ನಡೆಸಿದರು. ಕೆಲವರು ಆಕೆಗೆ ಸೊಕ್ಕೆಂದರು. ಕೆಲವರು ಆಕೆಯ ನಿರ್ಧಾರ ಸರಿ ಎಂದರು. ಆಟದ ಮನೆಯಲ್ಲಿ ಊಟ ಇತ್ತೀಚೆಯ ಬೆಳವಣಿಗೆ, ತೆಂಕಣ ತುಳುನಾಡಿನಲ್ಲಿ ಕಟೀಲು ಮೇಳದ ಆಟ ಆದರೆ ಸಂಜೆ ಊಟ ಹಾಕುವ ಕ್ರಮ, ಈಗಲೂ ಅಲ್ಲಿ ಊಟ ರಾತ್ರಿಗೆ.

ಬಡಗುನಾಡಿನ ನಮ್ಮಲ್ಲಿ ಗಣಪತಿ ಪೂಜೆಗೆ ಮುಂಚಿತ ಮನೆಯವರು ಊಟ ಮುಗಿಸಿ ಗೋಮಯ ಹಾಕಿ ಚೌಕಿಯಿಂದ ಬೆಳಕು ತಂದು ರಾತ್ರಿ ಇಡೀ ಮನೆಯೊಡತಿ ಅದನ್ನು ನಿಷ್ಠೆಯಿಂದ ಕಾಯುತ್ತ ಬೆಳಗಿನ ತನಕ ಜಾಗರಣೆ ಮಾಡಬೇಕು. ಆಟದಲ್ಲಿ ಮಳೆ ಬರುವುದು ದಿವಟಿಗೆ ನಂದುವುದೆಲ್ಲ ಅಶುಭ. ಇಂದು ಆಟದ ಪ್ರಯುಕ್ತ ಊಟಕ್ಕೆ ಬಂದು ಆಟಕ್ಕಿಂತ ಊಟಕ್ಕೆ ಜನ ಹೆಚ್ಚು ಸೇರುವುದರಿಂದ ರಾತ್ರಿ ಆಟಕ್ಕೆ ಚಟ್ಟಂಬಡೆ, ಚಾ ಕೊಟ್ಟರೂ ಜನ ನಿಲ್ಲದೆ ಕಲಾವಿದರು ಕಂಗಾಲಾಗಿ ಕಾಲಮಿತಿಯ ಕಾಲ ಬಂದಿದೆ. ಊಟದ ವಿಷಯ ಬದಿಗಿರಲಿ ಮೇಳದವರು ಬೆಳಿಗ್ಗೆ ಎಲ್ಲಿ ತಾಳ ಮದ್ದಳೆ ಹಾಕಬೇಕು ಎಂಬ ಪ್ರಶ್ನೆ ಎದುರಾಗಿತ್ತು. ಅಂತೂ ಮಟಪಾಡಿಯ ಹಿರಿಯರು ತಮ್ಮ ಹಿರಿತನವನ್ನು ಮೆರೆದು, ಬೋಜ ಹೆಗ್ಡೆಯವರ ವಿಶೇಷ ಕಾಳಜಿಯಲ್ಲಿ ಆಟದ ದಿನ ನಿಶ್ಚಯವಾಯ್ತು.

ಆಟಕ್ಕೆ ಹೋಗಬೇಕಾದರೆ ಬೆಳಕಿರುವಾಗಲೇ ದೂರಕ್ಕೆ ಸರಿಯಾಗಿ ಎರಡೋ ಮೂರೋ ಸೂಡಿ ಮಾಡುತ್ತಿದ್ದೇವು. ತೆಂಗಿನ ಗರಿಯ ಸೂಡಿ ಸುಲಭ ಆದರೆ ಪ್ರಯೋಜನ ಕಡಿಮೆ. ಚಾಂಪರಿಕೆಯ ಅಥವಾ ಕಬ್ಬಿನ ಜೋಗಟೆಯ ಸೂಡಿ ಬಹಳ ಉತ್ತಮ. ಗಂಡಸರು ಹೆಂಗಸರು ಮಕ್ಕಳ ದಾರಿ ಸವೆಸುತ್ತಾ ಮಧ್ಯ ರಾತ್ರಿಗೆ ಹಿಂತಿರುಗುವ ನಿರ್ಣಯಕ್ಕೆ ಬಂದಿದ್ದರು.

ಆಟದಗಾರ ತಲುಪಿದಾಗ ಕೋಡಂಗಿ ಹೋಗಿ ಪೀಠಿಕಾ ಸ್ತ್ರೀ ವೇಷ ಕುಣಿಯುತ್ತಿದ್ದವು. ಬಬ್ರುವಾಹನ ಕಾಳಗ ಅಂದಿನ ಒಂದು ಚಾಲ್ತಿ ಪ್ರಸಂಗ ಪಾಂಡವರ ಪಡೆಯಲ್ಲಿ ಅರ್ಜುನ, ಪ್ರದ್ಯುಮ್ನ ವೃಷ ಸೇನರ ಎರಡು ವಿಭಿನ್ನ ಮುಂಡಾಸುಗಳು, ಮುಖ್ಯ ಸ್ತ್ರೀ ಪಾತ್ರದ ಪ್ರಮಿಳೆ. ಗರಗರನೆ ಮುಂಡಿಹಾಕುವ ಬಬ್ರುವಾಹನ. ಅದೆಲ್ಲ ಒಂದೆಡೆಯಾದರೆ ಎಲ್ಲರೂ ಕಾದು ನಿಲ್ಲುತ್ತಿದ್ದ ಕೊರ್ಗು ಹಾಸ್ಯಗಾರರ ಬಬ್ರುವಾಹನ ಮಂತ್ರಿ. ಅಂತಹ ಬಬ್ರುವಾಹನ ಕಾಳಗದ ಅವಿಸ್ಮರಣೀಯ ಭಾಗವೇ ಅಂದಿನ ಪ್ರಮೀಳಾರ್ಜುನ. ಬಡಗುತಿಟ್ಟಿನ ರಂಗಸ್ಥಳದಲ್ಲಿ ಕಸವೇಷದಲ್ಲಿ ಅತ್ಯುನ್ನತ ಪ್ರದರ್ಶನ ವಿತ್ತವರು ಅರಾಟೆ ಮಂಜುನಾಥರು. ಅಂದು ಅವರ ಪ್ರಮೀಳೆ. ಪ್ರಮೀಳೆಯ ಪ್ರವೇಶ, ಅಶ್ವ ಭಂದನ ಇತ್ಯಾದಿಗಳು ಮುಗಿದ ನಂತರ ಪಾರ್ಥನನ್ನು ಬರಿಸುವ ಹಂಬಲದಿಂದ ಆಕೆ ಯುದ್ದರಂಗಕ್ಕೆ ಬಂದಿದ್ದಳು.

ಆಗ ರಂಗಸ್ಥಳದಲ್ಲಿ ಏನೋ ಅದ್ಭುತವಾಗಲಿದೆ ಎಂಬಂತೆ ಜನರೆಲ್ಲ ನಿಶ್ಯಬ್ದರಾಗಿ ನಿಂತಿದ್ದರು. ಕುಷ್ಟ ಗಾಣಿಗರ ಅರ್ಜುನ ಅಂದರೆ ಹುಟ್ಟು ಅರ್ಜುನ ಎಂದನ್ನುವುದು ಅಂದಿನ ವಾಡಿಕೆ. ಎಡಗೈಯಲ್ಲಿ ಬಿಲ್ಲುಬಾಣಹಿಡಿದು ಅರ್ಜುನ ಪ್ರವೇಶಿಸಿದ. ಪ್ರಮೀಳಾರ್ಜುನರು ಅದ್ಬುತ ಪ್ರದರ್ಶನ. ಪ್ರಮೀಳೆ ಸೋತಳು, ತನ್ನನ್ನು ವರಿಸಲು ಬೇಡಿಕೊಂಡಾಗ ಶರದ ಮುಖೇನ ಪ್ರಮೀಳೆಗೆ ಭಾಷೆ ಇತ್ತು ಅರ್ಜುನ ಹೊರಡಲಿ ನಮ್ಮ ಕುದುರೆ ಅನ್ನುತ್ತಿದ್ದಂತೆಯೇ ಜತೆಗೆ ನಮ್ಮನ್ನು ಕರೆತಂದಿದ್ದ ಗಂಡಸರು ಬಲವಂತಾಗಿ ನಮ್ಮನ್ನೆಬ್ಬಿಸಿ ಸೂಡಿ ಹಚ್ಚಿಕೊಂಡು ಮೇಲ್ಮಟಹಾಡಿಯತ್ತ ಹೊರಟರು.

ಅಪ್ಪ ಕುಷ್ಟ ಗಾಣಿಗರು ಮತ್ತು ಮಗ ಮಾಣಿ ಗಾಣಿಗರ ಪ್ರಮಿಳಾರ್ಜುನ ತಾನು ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿ ಕಂಡಿದ್ದೇನೆಂದು ಇಂದಿನ ಪ್ರಸಿದ್ಧ ಎರಡನೇ ವೇಷಧಾರಿ ಆಜ್ರಿ ಗೋಪಾಲ ಗಾಣಿಗರು ಆಗಾಗ ಹೇಳುವುದುಂಟು.

**ಶ್ರೀನಿವಾಸ ಗಾಣಿಗ**
ಶ್ರೀಕೃಷ್ಣಸಂಕೀರ್ತನಾಲಯ
ಜಾರ್‌ಜಡ್ಡು - ಚೇರ್ಕಾಡಿ
ಉಡುಪಿ ತಾಲೂಕು ಮತ್ತು ಜಿಲ್ಲೆ

# ಯಕ್ಷಗಾನದ ಕೋಲ್ಮಿಂಚು ಹಾರಾಡಿ ಕೃಷ್ಣ ಗಾಣಿಗ

ಬಡಗುತಿಟ್ಟಿನ ಯಕ್ಷಗಾನದ ಪರಂಪರೆಯಲ್ಲಿ 'ಹಾರಾಡಿ'ಗೆ ತನ್ನದೇ ಆದ ವಿಶಿಷ್ಟಸ್ಥಾನವಿದೆ. ಈ ಸ್ಥಾನಕ್ಕೆ ಕಾರಣರಾದವರು ಹಾರಾಡಿ ರಾಮಗಾಣಿಗರು, ಹಾರಾಡಿ ನಾರಾಯಣ ಗಾಣಿಗರು ಮತ್ತು ಹಾರಾಡಿ ಕೃಷ್ಣ ಗಾಣಿಗರು (ಹಾರಾಡಿ ಕೃಷ್ಣ ಗಾಣಿಗರು, ಹಾರಾಡಿ ಕುಷ್ಟ ಗಾಣಿಗರೆಂದೇ ಜನಪ್ರಿಯರಾದವರು). ಹಾರಾಡಿ ರಾಮಗಾಣಿಗರು ಎರಡನೇ ವೇಷಧಾರಿಯಾಗಿ ಕೀರ್ತಿವೆತ್ತವರು. ಹಾರಾಡಿ ನಾರಾಯಣ ಗಾಣಿಗರು ಪ್ರಸಿದ್ಧ ಸ್ತ್ರೀವೇಷಧಾರಿಗಳು. ಹಾರಾಡಿ ಕೃಷ್ಣಗಾಣಿಗರು ಪುರುಷ ವೇಷದಲ್ಲಿ ವಿಜೃಂಭಿಸಿದವರು.

ಹಾರಾಡಿ ರಾಮ ಗಾಣಿಗರಂತಹ ಆಳ್ತನವಾಗಲಿ, ಸ್ವರಭಾರವಾಗಲಿ, ಕೃಷ್ಣ ಗಾಣಿಗರಿಗಿರಲಿಲ್ಲ. ಆದರೂ ರಂಗ ಪ್ರವೇಶ ಕೋಲ್ಮಿಂಚಿನಂತೆ ಕಣ್ಸೆಳೆವ ಬಗೆ ಅನನ್ಯವಾದುದು. ಹೀಗಾಗಿ ಕೃಷ್ಣ ಗಾಣಿಗರು ಸುದೀರ್ಘಕಾಲ ರಾಮ ಗಾಣಿಗರ 'ಕರ್ಣ' (ಕರ್ಣಾರ್ಜುನ ಕಾಳಗ)ನ ಪಾತ್ರದ ಮುಂದೆ ಅರ್ಜುನನಾಗಿ ರಾಮಗಾಣಿಗರಿಗೆ ಹೆಗಲೆಣೆಯಾಗಿ ಮಿಂಚಲು ಸಾಧ್ಯವಾಯಿತು. ಹಾರಾಡಿ ರಾಮ ಗಾಣಿಗರ ಕರ್ಣ, ಹಾರಾಡಿ ಕೃಷ್ಣ ಗಾಣಿಗರ ಅರ್ಜುನ ಅಪೂರ್ವ ಜೋಡಿಯಾಗಿ ರಂಗದಲ್ಲಿ ಕಂಗೊಳಿಸಿತು.

ಹಾರಾಡಿ ಗಾಣಿಗರ ವೈಶಿಷ್ಟ್ಯ ಎದ್ದು ಕಾಣುತಿದ್ದುದೇ ಕುಣಿತದಲ್ಲಿ. ಪಾಂಡೇಶ್ವರ ಪುಟ್ಟಯ್ಯನವರ ಶಿಷ್ಯನಾಗಿ, ಅವರ ಶೈಲಿಯನ್ನು ಅನುಸರಿಸಿ ಸೈಯೆನಿಸಿಕೊಂಡವರು ಹಾರಾಡಿ ಕೃಷ್ಣ ಗಾಣಿಗರು. ಇವರ ಕುಣಿತಕ್ಕೆ ಮದ್ದಳೆ ನುಡಿಸುವುದು ಕಷ್ಟಸಾಧ್ಯವೆಂಬ ಖ್ಯಾತಿ ಇವರ ಪಾಲಿಗೆ ಇತ್ತು. ಇದು 'ಸಾಹಿತ್ಯ' ವನ್ನು ಅವಲಂಬಿಸಿದ ಕುಣಿತ.

'ಹಾರಾಡಿ ಮುಂಡಾಸು' ಎಂಬ ಖ್ಯಾತಿಯಿದೆ. ಹಾರಾಡಿಯವರಂತೆ ಮುಂಡಾಸು ಕಟ್ಟುವವರು ಬೇರೆಯಿಲ್ಲ. ಆ ಆಕೃತಿಯ ಸೊಬಗೇ ಬೇರೆ. ಹಾರಾಡಿ ರಾಮ ಗಾಣಿಗರು ಮುಂಡಾಸಿನ ವೇಷದಲ್ಲಿ ಮನೆಮಾತಾದವರು. ಕೃಷ್ಣಗಾಣಿಗರದು ಕೇದಗೆ ಮುಂದಲೆ ವೇಷ. ತನ್ನ ವೇಷಕ್ಕೆ ಬೇಕಾದ ಹುಲ್ಲಿನ ಜಡೆಯನ್ನು ಕೃಷ್ಣಗಾಣಿಗರೇ ಸ್ವತಃ ಕಟ್ಟುತ್ತಿದ್ದರು. ಹೀಗಾಗಿ ಅವರ ಮುಂದಲೆ ವೇಷ ಆಕರ್ಷಕವಾಗಿತ್ತು. ಈ ಕೇದಗೆ ಮುಂದಲೆಯನ್ನು ಕೃಷ್ಣ ಗಾಣಿಗರಂತೆ ತಿರುಗಿಸಬಲ್ಲವರು ಬೇರೊಬ್ಬರಿಲ್ಲವೆಂಬ ಕೀರ್ತಿ ಅವರ ಪಾಲಿಗಿತ್ತು.

ಹಾರಾಡಿ ಕೃಷ್ಣಗಾಣಿಗರು ಸುಧನ್ವ, ಪುಷ್ಕಳ, ನಂದಿ, ಕೌಂಡ್ಲಿಕ ಇತ್ಯಾದಿ ವೇಷ ಮಾಡುತ್ತಿದ್ದರು. 'ಅರ್ಜುನ' ಎಂದರೆ ಕೃಷ್ಣ ಗಾಣಿಗರೆಂದೇ ಜನರಾಡುವ ಮಾತಿತ್ತು. ಹಾರಾಡಿ ಕೃಷ್ಣ ಗಾಣಿಗರು ಏನು, ಎಷ್ಟು ಎಂಬುದು. ಅರಿವಿಗೆ ಬರುತ್ತಿದ್ದುದೇ ಜೋಡಾಟಗಳಲ್ಲಿ. ಪಾತ್ರವನ್ನು ಆವಾಹಿಸಿಕೊಂಡು ತನ್ಮಯರಾಗುವ, ಆ ಮೂಲಕ ಅಲೌಕಿಕ ಭವ್ಯ ವಾತಾವರಣವನ್ನು ಸೃಷ್ಟಿ ಮಾಡುವ ಗುಣವಿಶೇಷ, ಸಾಮರ್ಥ್ಯ ಕೃಷ್ಣ ಗಾಣಿಗರದ್ದು. ರಾತ್ರಿ ಬೆಳಗಾಗ ಬೇಕಾದರೆ ಮೂರು ವೇಷಗಳನ್ನು ಮಾಡಬಲ್ಲ, ಮಾಡಿಯೂ ತನ್ನತನವನ್ನು ತೋರುವ ಶಕ್ತಿ ಶ್ರೀಯುತರಲ್ಲಿತ್ತು.

ಹಿಂದಿನ ತಲೆಮಾರಿನ ಎಲ್ಲ ಕಲಾವಿದರಲ್ಲೂ ಮುಖ್ಯವಾದ ಗುಣವೇ ಪಾತ್ರ ತಾದಾತ್ಮ್ಯ. ಪಾತ್ರಗಳ ಶೀಲ ಸ್ವಭಾವವನ್ನು ಬಿಂಬಿಸುವ ನೃತ್ಯ ವೈಭವದ ಪ್ರಾಕಟ್ಯ.

ಬಡಗುತಿಟ್ಟಿನ ಯಕ್ಷಗಾನ ರಂಗಭೂಮಿ ಎಂದೆಂದು ಮರೆಯಬಾರದ, ಮರೆಯಲಾಗದ ಪುರುಷವೇಷದ ಪೊಗರು, ಹಾರಾಡಿ ಕೃಷ್ಣ ಗಾಣಿಗರು.

ನೂರು ವರುಷಗಳೇಕೇ! ಇನ್ನು ನೂರಾದರೂ
ಹಾರಾಡಿ ಕೃಷ್ಣಗಾಣಿಗರು ಸ್ಮರಣೀಯ
ಯಕ್ಷಗಾನಾಂಬಿಕೆಯ ಶ್ರೀ ಮುಡಿಯ ಸುಮವಾಗಿ
ಮಾಸದಿಹ ಪರಿಮಳವ ಸೂಸುತ್ತಲಿಹರು

**ಬಿ. ಭುವನ ಪ್ರಸಾದ್ ಹೆಗ್ಡೆ, ಮಣಿಪಾಲ**
40 ಎ, ಅನಂತರ ನಗರ – 576 104

# ಮಗನ ಪಾದಕ್ಕೆರಗಿದ ತಂದೆ
## (ನಾಕಂಡ ಹಾರಾಡಿ ಕೃಷ್ಣ ಗಾಣಿಗರ ವೇಷಗಳು)

ಬಹಳ ವರುಷಗಳ ಹಿಂದೆ ಶ್ರೀ ಕ್ಷೇತ್ರ ಮಂದಾರ್ತಿಯಲ್ಲಿ ಮಂದಾರ್ತಿ ಮೇಳದ ಹರಕೆ ಬಯಲಾಟವಾಗಿತ್ತು. ಆ ದಿವಸ ನಮ್ಮ ಊರಿನ ಐದಾರು ಮಂದಿ ಹಿರಿಯರ ಜೊತೆ ನೆರೆ ಮನೆಯ ಕೆಲವು ಸ್ನೇಹಿತರೊಂದಿಗೆ ನಾನು ಹೋಗಿದ್ದೆ. ನನಗಾಗ 12, 13 ವರ್ಷ ಆಗಿರಬಹುದು. ಆ ದಿವಸ ಪ್ರಸಂಗ ಪ್ರಥಮ ಸುಧನ್ವ ಕಾಳಗ ಎರಡನೇಯದು ಸರಿಯಾಗಿ ನೆನಪಿಗೆ ಬರುವುದಿಲ್ಲ. ಮಾಮೂಲಿನಂತೆ ಚೌಕಿಯಲ್ಲಿ ಗಣಪತಿ ಪೂಜೆ ಮುಗಿದು ಸುಧನ್ವನ ಪ್ರವೇಶವಾಯಿತು. ಸಂಕ್ಷಿಪ್ತ ಮಾತನ್ನಾಡಿ ತಂದೆ ಹಂಸಧ್ವಜನಲ್ಲಿಗೆ ಬಂದು ವಂದಿಸಿದಾಗ ಕುದುರೆ ಬಂದ ಎಲ್ಲಾ ವಿಚಾರ ಹೇಳಿ ಅರ್ಜುನನಲ್ಲಿ ಯುದ್ಧಕ್ಕೆ ಹೋಗಲು ಸೇನಾನಾಯಕತ್ವ ವಹಿಸಿಕೊಟ್ಟು ಧುರ ವೀಳ್ಯ ನೀಡಿ ಕಳುಹಿಸುತ್ತಾನೆ. ನಂತರ ಸುಧನ್ವ ತಾಯಿಯ ಆಶೀರ್ವಾದ ಪಡೆಯಲು ಸುಗರ್ಭೆಯ ಅಂತಪುರಕ್ಕೆ ಬರುತ್ತಾನೆ. ತಾಯಿಯನ್ನು ನೋಡಿ ವಂದಿಸುತ್ತಾನೆ. ಆಗ ಸಭೆಯಲ್ಲಿ ಕುಳಿತ ಕೆಲವರು "ನೋಡಿ ....... ನಟನೆಯೆಂದರೆ ಹೀಗಿರಬೇಕು" ಎನ್ನುತ್ತಿದ್ದರು. ತಾಯಿಯ ಪಾತ್ರ ಮಾಡಿದವರು ಮಗ ...ಮಗನ ಪಾತ್ರ ಮಾಡಿದವರು ತಂದೆಯಾಗಿದ್ದರು. ಮುದುಕನಾದರೂ ಪಾತ್ರಕ್ಕೆ ತಕ್ಕಂತೆ ನಮಸ್ಕರಿಸುವುದನ್ನು ನೋಡಿಯೆನ್ನುತ್ತಿದ್ದರು!

ಯಕ್ಷಗಾನದಲ್ಲಿ ತಮ್ಮ ಪ್ರೀತಿಯ ಅಭಿಮಾನಿ ಕಲಾವಿದರನ್ನು ಏಕವಚನದಲ್ಲಿ ಕರೆಯುವುದೇ ಹೆಚ್ಚು. ಕೃಷ್ಣಗಾಣಿಗರ ಮಗ–ಮಾಣಿ ಎನ್ನುವುದು ತಿಳಿದದ್ದು ನನಗೆ ಆವತ್ತೇ! ಅವರನ್ನು ಮೇಳದವರು ಹಾಗೂ ಎಲ್ಲರೂ ಪ್ರೀತಿಯಿಂದ ಮಾಣಿ ಎನ್ನುತ್ತಿದ್ದದ್ದೇ ಖಾಯಂ ಹೆಸರಾಯಿತು. ಅವರ ಹೆಸರು ಬೇರೆಯೇ ಇರಬೇಕು. !

ಸುಗರ್ಭೆಯ ಬಳಿಯಲ್ಲಿ ಕಿರುಪದ್ಯ ಎತ್ತುಗಡೆ ಸಹಿತ ಹಿತಮಿತವಾದ ಕುಣಿತಾಭಿನಯ, ವೀರ ನಿಲುವು, ಏರು ಧ್ವನಿಯ ಕಂಚಿನ ಕಂಠದ ಕಥೆಗೆ ಪೂರಕವಾದ ಮಾತುಗಾರಿಕೆ ಬಹಳ ಸೊಗಸಾಗಿತ್ತು. ಆಶೀರ್ವಾದ ಪಡೆದು ಹೊರಟ ಸುಧನ್ವ ತಂಗಿಯ ಶುಭ ಹಾರೈಕೆ ಪಡೆದು ಮಡದಿ ಪ್ರಭಾವತಿಗೆ ಯದ್ಧಕ್ಕೆ ಹೋಗುವ ವಿಚಾರ ತಿಳಿಸಿ ಹೊರಡುತ್ತೇನೆಂದು ಹೊರಟದನ್ನು ನೋಡಿದ್ದೇನೆ. ಆ ಮೇಲೆ ಪ್ರಭಾವತಿಯ ಪ್ರವೇಶದ ದೀರ್ಘ ಪದ್ಯ ಹಾಗೂ ಚಾಲು ಕುಣಿತದಿಂದಾಗಿ ನನಗೆ ನೀರಸ ಎನಿಸಿತು. ನಾಲಕೈದು ಮೈಲು ದೂರ ನಡೆದು ಹೋಗಿದ್ದರಿಂದಾಗಿ ನಿದ್ದೆ ಬಂದು ಎಚ್ಚರವಾದಾಗ ರಂಗಸ್ಥಳದಲ್ಲಿ ಪ್ರಸಂಗ ಮುಗಿದು ವೀಳ್ಯ ಕೊಡುವ ತಯಾರಿಯಲ್ಲಿದ್ದರು. ಹಾಗಾಗಿ ಉಳಿದ ವೇಷಗಳನ್ನು ಯಾರ್‍ಯಾರು ಮಾಡಿದ್ದರೆಂದು ತಿಳಿದಿಲ್ಲ.

ಮುಂದೊಂದು ದಿನ ನಮ್ಮ ನೆರೆಮನೆಯಲ್ಲಿ ಮಂದಾರ್ತಿ ಮೇಳದ ಆಟ ಆಗಿದ್ದಾಗ ಕರ್ಣಾರ್ಜುನ ಕಾಳಗದಲ್ಲಿ ಕೃಷ್ಣ ಗಾಣಿಗರದ್ದು ಅರ್ಜುನನ ಪಾತ್ರ. ವೃಷಸೇನನನ್ನು ನೋಡಿ ಈ ಯುವಕ ಯಾರು? ಇವನನ್ನು ನೋಡಿದರೆ ನನ್ನ ಮಗ ಅಭಿಮನ್ಯುವಿನ ನೆನಪಾಗುತ್ತಿದೆ! ಎಂದು ಕೃಷ್ಣನಲ್ಲಿ ಕೇಳಿದ್ದು. ಮತ್ತು ಮುಂದೆ ವೃಷಸೇನನಿಗೆ ನೀತಿ ಮಾತು ಹೇಳುವ ಸಂದರ್ಭದಲ್ಲಿ ಅವರ ಕಿರುಪದ್ಯ ಎತ್ತುಗಡೆ ಮತ್ತು ವಿಶಿಷ್ಠವಾದ ನೃತ್ಯಾಭಿನಯ, ಸಂದರ್ಭಕ್ಕೆ ತಕ್ಕ ಮಾತುಗಾರಿಕೆ, ಕಟ್ಟು ಮೀಸೆಯ ಕಪ್ಪು ಕೇದಿಗೆ –

ಮುಂದಲೆಯ ವೇಷವೂ ಅಷ್ಟೇ ಚಂದವಿತ್ತು. ಮತ್ತೆ ನಿದ್ರೆಯಿಂದಾಗಿ ಮುಂದಿನ ಭಾಗ ನೋಡಲಾಗಲಿಲ್ಲ.!

ಆಕಾಲದಲ್ಲಿ ನಮ್ಮ ತಂದೆಯವರು ಮತ್ತು ಊರಿನ ಹಿರಿಯರೆಲ್ಲ ಮಾತನಾಡಿದ್ದನ್ನು ಕೇಳಿದ್ದೇನೆ. ಆವಾಗ ಮಂದಾರ್ತಿ ಮೇಳದಲ್ಲಿ ರಾಷ್ಟ್ರಪ್ರಶಸ್ತಿ ವಿಜೇತ ಹಾರಾಡಿ ರಾಮ ಗಾಣಿಗರು, ಕುಷ್ಟ ಗಾಣಿಗರು, ನಾರಾಯಣ ಗಾಣಿಗರು ತ್ರಿಮೂರ್ತಿಗಳಿದ್ದ ಹಾಗೇ ರಾಮ ಗಾಣಿಗರ ಎರಡನೇ ವೇಷ, ಕುಷ್ಟ ಗಾಣಿಗರ ಪುರುಷ ವೇಷ ನಾರಾಯಣ ಗಾಣಿಗರ ಮುಖ್ಯ ಸ್ತ್ರೀ ವೇಷದ ಜೋಡಿ ಬಹಳ ಜನಪ್ರಿಯವಾಗಿತ್ತಂತೆ. ರಾಮ ಗಾಣಿಗರ ಕರ್ಣ ಗಾಣಿಗರ ಅರ್ಜುನ, ನಾರಾಯಣ ಗಾಣಿಗರ ಕೃಷ್ಣನಿಗಾಗಿ ಬಹಳ ಕಡೆಯಲ್ಲಿ – ಆಟ ಆಡಿಸುವವರು ಕರ್ಣಾರ್ಜುನ ಕಾಳಗವನ್ನೇ ಇರಿಸುತ್ತಿದ್ದರಂತೆ.

ಮುಂದೆ ಕೃಷ್ಣ ಗಾಣಿಗರು ಇಳಿವಯಸ್ಸಿನಲ್ಲಿ ಮೇಳಕ್ಕೆ ವಿದಾಯ ಹೇಳಿ ಮನೆಯಲ್ಲಿದ್ದರು. ಈ ಸಂದರ್ಭ ನಾನು ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಯಾಗಿದ್ದೆ. ಆವಾಗ ದೇಶ ವಿದೇಶಗಳಿಂದ ಅನೇಕ ಮಂದಿ ವಿದ್ವಾಂಸರು ಯಕ್ಷಗಾನ ಕೇಂದ್ರಕ್ಕೆ ಸಂದರ್ಶನ ನೀಡಿದಾಗ ಹಾಗೂ ಇತರ ಸಂರ್ಭಗಳಲ್ಲಿ ಮೇಳದಿಂದ ನಿವೃತ್ತಿ ಪಡೆದು ಮನೆಯಲ್ಲಿದ್ದ ಅನೇಕ ಮಂದಿ ಮಧ್ಯ ತಿಟ್ಟಿನ ಹಿರಿಯ ಕಲಾವಿದರನ್ನು ಗುರುಗಳಾದ ಕೆ. ಶಿವರಾಮ ಕಾರಂತರು, ಪ್ರೊ. ವಿ. ಆಚಾರ್ಯರು, ಪ್ರೊ. ಕು. ಶಿ. ಹರಿದಾಸ ಭಟ್ಟರು, ಕೆ. ಪ್ರಭಾಕರ ಪೈಗಳು ಮತ್ತು ಬೈಕಾಡಿ ಆನಂದ ಕೃಷ್ಣರಾಯರೆಲ್ಲಾ ಸಂಯೋಜಿಸಿ ವಿವಿಧ ರೀತಿಯ ಕಾರ್ಯಕ್ರಮ ಮಾಡಿದ್ದುಂಟು. ಇವುಗಳಲ್ಲಿ ಗಯ ಚರಿತ್ರೆ, ಕೃಷ್ಣಾರ್ಜುನ ಕಾಳಗದಲ್ಲಿ ಕೃಷ್ಣ ಗಾಣಿಗರು ಕೆಂಪು ಮುಂಡಾಸಿನ ಗಯನ ಪಾತ್ರ ಮಾಡಿದ್ದರು. ಪ್ರವೇಶವಾಗಿ ಮೊದಲು ತನ್ನನ್ನೇ ತಾನು ಹೊಗಳಿಕೊಳ್ಳುತ್ತಾ ಕೃಷ್ಣ ಕೊಲ್ಲುವುದಾಗಿ ಶಪಥ ಮಾಡಿದ ಮೇಲೆ ವಿಚಾರ ತಿಳಿದು ದುಃಖಿಸುವ ರೀತಿಯೇ ಬೇರೆ! ಮುಂದೆ ಹರ ಬ್ರಹ್ಮರಲ್ಲಿ ದಿಕ್ಪಾಲಕರಲ್ಲಿ ಆದಿಶೇಷನಲ್ಲಿ ಹೋಗಿ ರಕ್ಷಣೆ ಕೋರಿದಾಗ ಹರಿಯ ವೈರಿಯೆಂದು ತಿಳಿದು ತಿರಸ್ಕೃತನಾದಾಗ ನಾರದರ ಸೂಚನೆಯಂತೆ ಅರ್ಜುನನಲ್ಲಿ ನಿಜ ಹೇಳದೇ ಪ್ರಾಣ ರಕ್ಷಿಸುತ್ತೇನೆಂದು ಭಾಷೆ ಪಡೆದುಕೊಂಡ ಮೇಲೆ ಅವರ ನಟನೆಯ ಮಾತುಗಾರಿಕೆ ಬಹಳ ಚೆನ್ನಾಗಿತ್ತು. ಅಂದು ಅವರ ಗಯನ ಎದುರು ಈಶ್ವರನ ಪಾತ್ರ ಮಾಡಲು ನನಗೆ ಸಿಕ್ಕಿದ್ದು ಅದೃಷ್ಟವೇ ಸರಿ!

ಯಕ್ಷ ಕೇಂದ್ರಕ್ಕೆ ಅವರು ಬಂದಾಗ ಕೇಂದ್ರದ ಗುರುಗಳಲ್ಲಿ ಸಹಕಲಾವಿದರು ಮತ್ತು ವಿದ್ಯಾರ್ಥಿಗಳಾದ ನಮ್ಮಲ್ಲಿ ಅವರು ನಡೆದು ಕೊಳ್ಳುತ್ತಿದ್ದ ರೀತಿ ಮತ್ತು ತಮಾಷೆಯ ಮಾತುಗಳು ಮರೆಯಲಾಗದ್ದು. ಕಚ್ಚೆ ಹಾಕಿ ಬಿಳಿ ಅಂಗಿಯ ಮೇಲೆ ಕರಿಯ ಕೋಟನ್ನು ಹಾಕಿಕೊಂಡು ದಪ್ಪ ಮೀಸೆಯೊಂದಿಗೆ ಬರುತ್ತಿದ್ದ ಚಿತ್ರ ಇನ್ನೂ ಹಾಗೇ ಇದೆ! ಕೇಂದ್ರದ ಗುರುಗಳಾಗಿದ್ದ ವೀರಭದ್ರ ನಾಯಕರು, ಹಿರಿಯಡ್ಕ ಗೋಪಾಲರಾಯರು. ನೀಲಾವರ ರಾಮ ಕೃಷ್ಣಯ್ಯ, ಮಣೂರು ಮಹಾಬಲ ಕಾರಂತರು ಅವರ ವಿವಿಧ ಪ್ರಸಂಗಗಳ ಅರ್ಜುನ ಭೀಷ್ಮ ವಿಜಯದ ಪರಶುರಾಮ ಹಾಗೂ ಸೈಂದವ ವಧೆಯ ಅರ್ಜುನನ ಆರತಿ ಬಟ್ಟಲನ್ನು ಹಿಂದೆ ಹಾರಿಸುವುದನ್ನು ಇತ್ಯಾದಿ ಹಲವು ವೇಷಗಳನ್ನು ನೆನಪಿಸಿಕೊಂಡದ್ದನ್ನು ಕೇಳಿದ್ದೇನೆ. ಇನ್ನು ಯಕ್ಷಗಾನ ಕೇಂದ್ರದಲ್ಲಿ ಪ್ರಮೀಳಾರ್ಜುನ ಕಾಳಗದಲ್ಲಿ ಕೃಷ್ಣ ಗಾಣಿಗರ ಅರ್ಜುನ, ಕೋಟ ವೈಕುಂಠರ ಪ್ರಮಿಳೆ ನೋಡಿದ್ದ ನೆನಪಿದೆ

....... ಇಲ್ಲಿಯೂ ಕಿರುಪದ್ಯ ಎತ್ತುಗಡೆಯೊಂದಿಗೆ ವಿಶಿಷ್ಟ ನೃತ್ಯಾಭಿನಯ, ಪೂರಕ ಮಾತು ನೆನಪಿನಲ್ಲುಳಿದಿದೆ ...... ಎಲ್ಲಿರಿಗಿಂತ ಭಿನ್ನವಾದ ಪದ್ಯ ಎತ್ತುಗಡೆ ಇವರದ್ದು, ಎರಡು ಮೂರು ಅಕ್ಷರದ ಪದ್ಯ ಎತ್ತುಗಡೆಯ ವಿಶೇಷತೆ ಇವರದ್ದು.

ಕೃಷ್ಣಗಾಣಿಗರು ಬ್ರಹ್ಮಾವರ ಯಕ್ಷಗಾನ ಕೇಂದ್ರದಲ್ಲಿ ನೃತ್ಯಗುರುಗಳಾಗಿದ್ದರು. ಮುಂದೆ ಇದೇ ಕೇಂದ್ರ ಉಡುಪಿಯಲ್ಲಿ ಆದಾಗ ಮಟಪಾಡಿ ತಿಟ್ಟಿನ ಹಿರಿಯರಾದ ಗುರುವೀರಭದ್ರ ನಾಯಕರು ನೃತ್ಯ ಗುರುಗಳಾಗಿದ್ದರು. ಶ್ರೀ ಕೃಷ್ಣ ಗಾಣಿಗರು ಕೇದಗೆ ಮುಂದಲೆ ಕಟ್ಟುವಾಗ ಅವರದೇ ಒಂದು ಕ್ರಮವಿತ್ತು. ಅಟ್ಟೆ ಕಟ್ಟಿ ಲಾಡಿ ಹಾಕಿ ಮುಸುಕು ಹಾಕಿದ ನಂತರ ಮುಂದಲೆ ಕಟ್ಟುವ ಕ್ರಮ ಇವರದ್ದು. ಮುಂದೆ ಇದನ್ನು ಮೊಳಹಳ್ಳಿ ಹೆರಿಯಣ್ಣನವರು ಮುಂದುವರಿಸಿದ್ದನ್ನು ನೋಡಿದ್ದೇನೆ.

ವೇಷ ರಚನೆ ಮಾತ್ರವಲ್ಲ ಹಿರಿಯಣ್ಣನವರ ಯಾವುದೇ ಪ್ರಸಂಗದ ಅರ್ಜುನನ ವೇಷವು ಕೃಷ್ಣ ಗಾಣಿಗರ ಕೆಲವು ವಿಶಿಷ್ಟ ಕುಣಿತಾಭಿನಯ (ಬಿಲ್ಲಿನ ಜತೆ), ಶ್ರೀ ಕೃಷ್ಣ ಗಾಣಿಗರ ನೆನಪನ್ನು ಸದಾ ತರುತ್ತಿದ್ದವು. ಗುರುವಿನಂತೆ ಶಿಷ್ಯ ಎಂಬ ಮಾತಿಗೆ ಉದಾಹರಣೆಯಾಗಿದ್ದವರು ಹಿರಿಯಣ್ಣನವರು. ಯಕ್ಷಗಾನದ ಅರ್ಜುನ ದಿ. ಕೃಷ್ಣಗಾಣಿಗರನ್ನು ನೆನಪಿಸಿಕೊಳ್ಳುತ್ತಾ ನೂರರ ಸಂಭ್ರಮದ ನೆನಪು ಅವರ ಬಂಧುಗಳಿಗೂ, ಅಭಿಮಾನಿಗಳಿಗೂ ಸಂತಸ ತರಲಿ ಎಂದು ಆಶಿಸುತ್ತೇನೆ.

**ಎಳ್ಳಂಪಳ್ಳಿ ಜಗನ್ನಾಥ ಆಚಾರ್ಯ**
ಖ್ಯಾತ ಬಣ್ಣದ ವೇಷಧಾರಿ

## ಸಾಹಿತ್ಯ ಕುಣಿಯುವ ಕುಷ್ಟ:

ನನಗಿಂತ ಸುಮಾರು ಹದಿನೈದು ವರ್ಷಗಳಿಗಾದರೂ ಹಿರಿಯವರಾದ ಹಾರಾಡಿ ಕುಷ್ಟ ಗಾಣಿಗರು 'ಅರ್ಜುನ'ನಾಗಿ ರಂಗಸ್ಥಳದಲ್ಲಿ ಕೆಂಡವಾಗುವ ವೇಷಧಾರಿ.

ಮೊದಲ ಬಾರಿ ಅವರನ್ನು ಕಂಡದ್ದು ನಾನು ಮದ್ದಳೆಗಾರನಾಗಿ ಮಂದರ್ತಿ ಮೇಳಕ್ಕೆ ಸೇರಿದಾಗ.

ಹೆಜ್ಜೆಗಾರಿಕೆಯಲ್ಲಿ ಕುಷ್ಟ ಗಾಣಿಗರದೆ ಒಂದು ಪ್ರತ್ಯೇಕತೆ ಇದೆ. ಅವರ ತಾಳ ಮತ್ತು ಅದರ ಘಾತಕ್ಕೆ ಸರಿಯಾಗಿ ಹೆಜ್ಜೆ ಹಾಕುವವರಲ್ಲ. ಪದ್ಯದ ಸಾಹಿತ್ಯದ ನಡಿಗೆಯನ್ನು ಅನುಸರಿಸಿ ಅವರ ಹೆಜ್ಜೆಯ ತಟ್ಟುಗಳು ಬರುತ್ತವೆ.

ಈ ಬಗೆಯ ಹೆಜ್ಜೆಗಾರಿಕೆಗೆ ಮದ್ದಳೆ ಬಾರಿಸುವುದು ಬಹಳ ಕಷ್ಟ. ತಾಳದ ಬಗೆಗೆ ತುಂಬ ಖಚಿತತೆ ಬೇಕಾಗುತ್ತದೆ.

ಅವರ ಆಳಂಗ ಅತ್ತ ಮೂರನೆ ವೇಷವೂ ಅಲ್ಲ. ಇತ್ತ ಪುರುಷ ವೇಷವೂ ಅಲ್ಲ, ಅಂಥ ಒಂದು ಮಧ್ಯಮ ರೀತಿಯದು.

ನೀಲಾವರ ಸುಬ್ಬಣ್ಣ ಶೆಟ್ಟರ ಕೃಷ್ಣನಿಗೆ ಅವರ ಅರ್ಜುನ ಸಾಟಿಯಾದ ಜೋಡಿ. ಅವರು ಪದವನ್ನು ಎತ್ತುಗಡೆ ಮಾಡುವುದು ಇತರರಂತೆ ಹಾಡುವ ಮೂಲಕ ಅಲ್ಲ. ಶ್ರುತಿಯಲ್ಲಿ ತಾಳದ ಗತಿಗೆ ಸರಿಯಾಗಿ ಪದದ ಮೊದಲ ಒಂದೋ ಎರಡೊ ಶಬ್ದವನ್ನು ಹೇಳುವರು.

ಉದಾಹರಣೆಗೆ ಅವರು ತಾಳಬದ್ಧವಾಗಿ 'ಸಾಕು ಸಾಕು' ಎಂದು ಶ್ರುತಿಯಲ್ಲಿ ಹೇಳಿದರೆ ಅದೇ ಲಯದಲ್ಲಿ ಮುಂದಿನ ತುಣುಕಾದ 'ನಿನ್ನ ಸಾಹಸ' ಎಂದು ಭಾಗವತರು ಹಾಡಾಗಿ ಮುಂದುವರಿಸುತ್ತಾರೆ.

ಕುಷ್ಟ ಗಾಣಿಗರು ಸರ್ವೇಸಾಮಾನ್ಯವಾಗಿ ಪದದ ಮೊದಲ ಅರ್ಧಭಾಗವನ್ನು ಅಭಿನಯದಿಂದಲೆ ನಿರೂಪಿಸಿ ಅಪರಾರ್ಧವನ್ನು ಕುಣಿತದಲ್ಲಿ ಒಯ್ಯುವರು.

ಇವರು ನಿಲುವು, ಜಾಪುಗಳು ಬಹುವಾದ ಪರಿಣಾಮ ಮಾಡುತ್ತಿದ್ದವು.

ಕುಣಿತದಲ್ಲಿ, ಅವರು ಇವತ್ತಿನಂತೆ ನಾಳೆ ಕುಣಿಯುವರು ಎನ್ನುವಂತಿಲ್ಲ. ಆದರೆ ಎತ್ತುಗಡೆ ಮತ್ತು ನಿಲುಗಡೆ ಮಾತ್ರ ನಿಶ್ಚಿತ ರೂಪದ್ದು.

ಅವರು ಹಾವಿನ ಗತಿಯಂತೆ ಮಿಂಚಿ ಸಾಗುವ ಬಗೆ ಇನ್ನಾರಿಗೂ ಅನುಕರಿಸಲು ಸಿಗಲಿಲ್ಲ. ಇದು ಪಾಂಡೇಶ್ವರ ಪುಟ್ಟಯ್ಯನವರ ರೀತಿ ಎನ್ನುತ್ತಿದ್ದರು. ಪುಟ್ಟಯ್ಯ ಇವರ ಗುರು.

ಅವರು ಕೇದಗೆ ಮುಂದಲೆಯನ್ನು ಕಟ್ಟಿಕೊಳ್ಳುವುದರಲ್ಲಿ ನಿಸ್ಸೀಮ. ತನ್ನ ಕೇದಗೆ ಮುಂದಲೆಗೆ ಬೇಕಾದ ಅಟ್ಟೆಗಳನ್ನು ತಾನೇ ತಯಾರಿಸಿಕೊಳ್ಳುತ್ತಿದ್ದು. ತನ್ನ ಮುಖದ ಗಾತ್ರಕ್ಕೆ ತಕ್ಕ ಆಕಾರಕ್ಕೆ ಎಷ್ಟು ಅಟ್ಟೆಗಳು, ಅಟ್ಟೆಯ ಗಾತ್ರ ಹೇಗಿರಬೇಕು ಎಂಬುದನ್ನು ಅವರೇ ನಿರ್ಣಯಿಸುತ್ತಿದ್ದರು.

ಕಟ್ಟುವುದು ಅಷ್ಟು ಬೇಗ. ಅಷ್ಟು ಅಚ್ಚುಕಟ್ಟು.

ಕಟ್ಟಿಕೊಳ್ಳುವ ವಿಧಾನದಲ್ಲೂ ಅವರದೊಂದು ಪ್ರತ್ಯೇಕತೆ ಇದೆ. ಎಲ್ಲರೂ ಪೇಟ ಕಟ್ಟಿಕೊಂಡು ಮುಂದಲೆಯನ್ನು ಬಿಗಿದು, ಅಟ್ಟೆಗಳನ್ನು ಕಟ್ಟುವುದಾದರೆ ಹಾರಾಡಿ ಕುಷ್ಟ ಮೊದಲು ಉಳಿದೆಲ್ಲ ಕೆಲಸ ಮಾಡಿ, ಜರಿ ಸುತ್ತುವುದನ್ನು ಮುಗಿಸಿ, ಆ ಮೇಲೆ ಮುಂದಲೆ ಕಟ್ಟಿಕೊಳ್ಳುವರು.

ಅವರ ತಲೆಯಲ್ಲಿ ಕೇದಗೆ ಮುಂದಲೆ ಹೊತ್ತದ್ದಲ್ಲವೊ ಎನ್ನುವಷ್ಟು ಸಲೀಸಾಗಿರುತ್ತದೆ ಅವರ ಓಡಾಟ.

ಅದಕ್ಕೆ ಅಂಥ ಬಿಗಿತವೂ ಇರುವುದಿಲ್ಲ. ತಲೆ ತುರಿಕೆ ಕಾಣಿಸಿದರೆ ಕೆನ್ನೆಯಿಂದ ಕೇದಗೆ ಮುಂದಲೆಯ ಒಳಕ್ಕೆ ಬಾಣ ಚುಚ್ಚಿ ತುರಿಕೆ ಕಳೆದಾರು.

ಮಲಗುವ ವೇಳೆಗೆ ಕರ್ಣಪತ್ರದ ಹಗ್ಗವನ್ನೆತ್ತಿ ಕರ್ಣಪತ್ರವನ್ನು ಕೇದಗೆ ಮೇಲೆ ಇರಿಸಿಕೊಳ್ಳುವರು. ಇತರರು ಅಷ್ಟು ಮಾಡಿದರೆ ಒಂದೆ ಪದಕ್ಕೆ ಕೇದಗೆ ಮುಂದಲೆಯನ್ನು ನೆಲದಿಂದ ಹೆಕ್ಕಬೇಕಾದೀತು.

ಅವರು ತಮ್ಮ ಕರ್ಣಪತ್ರಗಳ ಬುಡಗಳನ್ನು ದಾರದ ಬದಲು ಕಪ್ಪು ಸೈಕಲ್ ಟ್ಯೂಬಿನಿಂದ ಜೋಡಿಸುತ್ತಿದ್ದರು.

ತನ್ನ ಕೈಚಿನ್ನ[66]ಕ್ಕೆ ಅವರ ಸ್ವಂತ ದುರಸ್ತಿ ಮಾಡಲು ಇದೆ. ಕೈಚಿನ್ನ ಇನ್ನಾರದೊ ಕೈಯ ಅಳತೆಗೆ ಸರಿಯಾಗಿರುತ್ತದೆ. ಇವರು ಗಿಡ್ಡಾಳಲ್ಲವೇ? ಒಂದೊ ಎರಡೊ ಸರವನ್ನು ಅದರಿಂದ ಕಿತ್ತು ತನ್ನ ಕೈಗೆ ಒಪ್ಪುವಂತೆ ಕೈಚಿನ್ನವನ್ನು ಕಿರಿದುಗೊಳಿಸುತ್ತಿದ್ದರು.

ಅರ್ಜುನ, ಕೃಷ್ಣ, ಸುಧನ್ವ, ಪುಷ್ಕಳ, 'ಭೀಷ್ಮವಿಜಯ'ದ ಪರಶುರಾಮ, ವಲಲಭೀಮ (ನಾಟಕದವೇಷ) ಇಂಥ ಪಾತ್ರಗಳಲ್ಲಿ ಅವರು ಪ್ರಸಿದ್ಧರು.

ಅವರಿಗೆ ವೀರರಸ ಅಚ್ಚುಮೆಚ್ಚಿನದು. ವಿದ್ಯುನ್ಮತಿ ಕಲ್ಯಾಣದ 'ಜಯಂತ' ಮಾತ್ರ ಅವರಿಗೆ ಶೃಂಗಾರ ರಸದ ಸ್ಪರ್ಶ ಒದಗಿಸುತ್ತಿದ್ದ ಪಾತ್ರ.

ಅವರದು ಕೀರುಸ್ವರ. ಎಷ್ಟೂ ತಾರಸ್ಥಾಯಿಗೆ ಏರೀತು. ಮಂದ್ರ ಸ್ವರ ಅವರಿಗಿರಲಿಲ್ಲ.

ಅವರಿಗೆ ಹಿಮ್ಮೇಳದವರ ಮೇಲೆ ತುಂಬ ಪ್ರೀತಿ. ನಾನು ಮದ್ದಳೆಯನ್ನು ಬೇರೆಯವರಿಗೆ ಒಪ್ಪಿಸಿದರೆ ಅವರಿಗೆ ಬೇಸರವಾಗುತ್ತಿತ್ತು.

ಅವರ ವೇಷಗಾರಿಕೆಯಲ್ಲಿ ಅವರ ವೈಯಕ್ತಿಕ ಉಲ್ಲಾಸವೂ ಮುಖ್ಯವಾಗುತ್ತಿತ್ತು. ಒಂದು ದಿನ ಮನಸ್ಸಾದರೆ ಅವರ ಪಾತ್ರ ಎಷ್ಟೂ ಒಳ್ಳೆಯದಾದೀತು. ಕೆಟ್ಟದಾದರೆ ಅದಕ್ಕಿಂತ ಕಳಪೆ ಇನ್ನೊಂದು ಕಾಣಸಿಗಲಾರದು.

ಕುಷ್ಟ ಗಾಣಿಗರಿಗೆ ಯಾವ ಭಾಗವತರಾದರೂ, ಯಾವ ಶೈಲಿಯ ಭಾಗವತಿಗೆಯಾದರೂ ಪರಿವೆಯಿಲ್ಲ. ಯಾವುದಕ್ಕೂ ಅವರು ಕ್ಷಣಮಾತ್ರದಲ್ಲಿ ಹೊಂದಿಕೊಳ್ಳಬಲ್ಲರು.

ಅವರಿಗೆ ತನ್ನ ಪ್ರದರ್ಶನ ಉತ್ತಮಗೊಳ್ಳಲು ಯಾರ ಸಹಾಯವೂ ಬೇಕಾಗಿಲ್ಲ. ಅವರು ಮಂದರ್ತಿ, ಅಮೃತೇಶ್ವರಿ ಮೇಳದ ಯಜಮಾನಿಕೆ ನಡೆಸಿದ್ದೂ ಇದೆ.

ಕುಷ್ಟ ಗಾಣಿಗರು ವಿನೋದಪ್ರಿಯರು. ಅವರ ಕೀಟಲೆ ಎಲ್ಲರೊಂದಿಗೆಲ್ಲ. ಆತ್ಮೀಯರಲ್ಲಿ ಮಾತ್ರ.

ಭಾಗವತರು ತಾಳವನ್ನು ಮಂಚದಲ್ಲಿಟ್ಟರೆ ಅರ್ಥ ಹೇಳುತ್ತ ತಾಳವನ್ನು ಎತ್ತಿಕೊಳ್ಳುವರು. ಜಾನುವಾರುಕಟ್ಟೆ ಭಾಗವತರು ಪದ ಎತ್ತುಗಡೆ ಮಾಡಿ ತಾಳಕ್ಕಾಗಿ ಅಲ್ಲಿ ಇಲ್ಲಿ ಕೈ ಹರಡುವುದನ್ನು ಎಣಿಸಿದರೆ ನಗೆ ಬರುತ್ತದೆ.

ಅವರಿಬ್ಬರ ಒಳಜಗಳ ನೋಡುವುದು ನನಗೊಂದು ಗಮ್ಮತ್ತು.

ನಾನು ಆಚೆ ಈಚೆ ನೋಡಿದರೆ ಸಾಕು, ಕುಳಿತಲ್ಲೆ ಅರ್ಥ ಹೇಳುತ್ತಲೆ ಮದ್ದಳೆ ಎಡದ ಬೋನವನ್ನು ಮೆಲ್ಲಗೆ ಕಿತ್ತು ಹಾಕುವರು.

ಇಷ್ಟೆಲ್ಲ ಮಾಡುವಾಗಲೂ ಅವರ ಪಾತ್ರಾಭಿನಯದಲ್ಲಿ ಈ ಕೀಟಲೆಗಳ ಸೋಕಿಲ್ಲ.

ವಲಲಭೀಮನಾಗಿ 'ಬಡಿವೆ ಕೀಚಕ' ಎನ್ನುವಲ್ಲಿ ಹಿಮ್ಮೇಳದವರ ಬದಿಗೆ ಬಟ್ಟೆಯನ್ನು ಹೊಡೆದು ಧೂಳೆಬ್ಬಿಸಿಯಾರು. ಆಗ 'ಸಾಬೂನಿಗೆ ನಾಳೆ ನೀವು ದುಡ್ಡು ಕೊಡಬೇಕಾದೀತು' ಎಂದು ನಾನು ಹೇಳುವುದಿತ್ತು.

ಹಾರಾಡಿ ಕುಷ್ಟ–ಹಾರಾಡಿ ನಾರಾಯಣ ಇವರ ಅರ್ಜುನ–ಸುಭದ್ರೆ, ವಲಲ–ಸೈರಂಧ್ರಿ ಇತ್ಯಾದಿ ಜೋಡಿಗಳು ಉನ್ನತಮಟ್ಟದ ಕಲಾಕೃತಿಗಳು.

ಕುಷ್ಟ ಗಾಣಿಗರಲ್ಲಿ ಯಾರಾದರೂ ಯಾವ ಪ್ರಸಂಗ ಒಳ್ಳೆಯದು ಎಂದು ಕೇಳಿದರೆ, ಅವರು ನಮ್ಮ ಮೇಳದ ಉತ್ತಮ ಪ್ರಸಂಗ ಅಂದರೆ 'ಲವಕುಶ ಕಾಳಗ' ಅದರ ಬೆನ್ನಿಗೆ 'ರತಿಕಲ್ಯಾಣ'ದಲ್ಲಿ ನನ್ನ ಅರ್ಜುನ ಪ್ರಸಿದ್ಧ ಎನ್ನುವರು. ಕಾರಣ ಮೊದಲ ಪ್ರಸಂಗದಲ್ಲಿ ಅವರಿಗೆ ವೇಷ ಇಲ್ಲ. ಎರಡನೆ ಪ್ರಸಂಗದ ಅವರ 'ಪ್ರಸಿದ್ಧಿಯ ಅರ್ಜುನ'ನಿಗೆ ಇರುವುದು ಮೂರೇ ಪದಗಳು.

ಆದರೆ ಒಂದುಂಟು–ಅವರಿಗೆ ಆ ಮೂರು ಪದಗಳೂ ಸಾಕು, ತಾನು ಕುಷ್ಟ ಎಂಬುದನ್ನು ತೋರಿಸುವುದಕ್ಕೆ.

ಅವರು ಅಷ್ಟು ಮಾಡಿದರೂ ಆಟ ಆಡಿಸಿದವರಿಗೆ ಹೊಟ್ಟೆ ತಣಿಯುತ್ತದೆ.

66. ಕೈಚಿನ್ನ: ಮುಂಗೈಯನ್ನು ಅಲಂಕರಿಸುವ ಮರದ ಆಭರಣ

**(ಹಿರಿಯಡಕ ಗೋಪಾಲರಾವ್‌ರ ಆತ್ಮಕಥನ 'ಮದ್ದಳೆಯ ಮಾಯಾಲೋಕ' ನಿರೂಪಣೆ: ಡಾ. ಕೆ. ಎಂ. ರಾಘವ ನಂಬಿಯಾರ್)**

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು

**ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಬೆಂಗಳೂರು**

ಸಂಯುಕ್ತ ಆಶ್ರಯದಲ್ಲಿ



**ಬಡಗುತಿಟ್ಟು ಯಕ್ಷಗಾನದ ದಂತಕಥೆ**

**ಹಾರಾಡಿ ಕುಷ್ಟ ಗಾಣಿಗರ ಜನ್ಮಶತಮಾನೋತ್ಸವ ಆಚರಣೆ**

ದಿನಾಂಕ : 20-8-2017, ಭಾನುವಾರ

ಸ್ಥಳ : ವರುಣತೀರ್ಥ ಶ್ರೀ ವಾಸುದೇವ ಮಂಟಪ ಕೋಟ (ಶ್ರೀ ರಾಜಶೇಖರ ದೇವಸ್ಥಾನದ ಬಳಿ)

ಆತ್ಮೀಯ ಸ್ವಾಗತ ಬಯಸುವ

**ನಾಡೋಜ ಬೆಳಗಲ್ಲು ವೀರಣ್ಣ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

**ಎಸ್. ಹೆಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

**ಪಿ. ಕಿಶನ್ ಹೆಗ್ಡೆ**
ಸದಸ್ಯ ಸಂಚಾಲಕರು
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

**ಮಹದೇವಪ್ಪ**
ಸಹಾಯಕ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಉಡುಪಿ ಜಿಲ್ಲೆ.

**ಹಾಗೂ ಸರ್ವ ಸದಸ್ಯರು**
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು



ಮಧ್ಯಾಹ್ನ 3.00ರಿಂದ

ಕುಷ್ಟ ಗಾಣಿಗರಿಗೆ ಪ್ರಸಿದ್ಧಿ ತಂದಿತ್ತ ವೇಷಗಳ ಪ್ರಾತ್ಯಕ್ಷಿಕೆ

(ಪ್ರಮೀಳಾರ್ಜುನದ ಅರ್ಜುನ, ವೀರಮಣಿಯ ಪುಷ್ಕಳ, ಕಾರ್ತವೀರ್ಯಾರ್ಜುನದ ಅರ್ಜುನ)

ಪ್ರಸ್ತುತಿ : ನಡುತಿಟ್ಟಿನ ಪ್ರಸಿದ್ಧ ಕಲಾವಿದರಿಂದ

**ಕಲಾವಿದರು :**

**ಭಾಗವತರು :** ಬನ್ನಂಜೆ ಶೀನಪ್ಪ ಸುವರ್ಣ, ಉದಯಕುಮಾರ್ ಹೊಸಾಳ, ರವಿಕುಮಾರ್ ಸೂರಾಲು

ಮದ್ದಳೆ : ಗಣೇಶ ಶೆಣೈ ಶಿವಪುರ **ಚಂಡೆ :** ರಾಕೇಶ ಮಲ್ಯ ಹಳ್ಳಾಡಿ



**ಪಾತ್ರಧಾರಿಗಳು :**

**ಅರ್ಜುನ :** ಹಾರಾಡಿ ಸರ್ವೋತ್ತಮ ಗಾಣಿಗ **ಪ್ರಮೀಳೆ :** ಹಾರಾಡಿ ರಮೇಶ ಗಾಣಿಗ

**ಪುಷ್ಕಳ :** ಪ್ರವೀಣ ಗಾಣಿಗ ಕೆಮ್ಮಣ್ಣು **ತಾರಾವಳಿ :** ಬೇಳಂಜೆ ಸುಂದರ ನಾಯ್ಕ

**ಅರ್ಜುನ :** ಪೇತ್ರಿ ಬಾಲಕೃಷ್ಣ ನಾಯಕ್ **ವೃಷಸೇನ :** ಕೊಳಲಿ ಕೃಷ್ಣ ಶೆಟ್ಟಿ

**ಸಂಯೋಜನೆ : ರವಿಕುಮಾರ್ ಸೂರಾಲು**



ಸಂಜೆ 6.00ರಿಂದ

ಸಂಪ್ರದಾಯಬದ್ಧ ಬಡಗುತಿಟ್ಟು ಯಕ್ಷಗಾನ

"ತಾಮ್ರಧ್ವಜ ಕಾಳಗ"

ಪ್ರಸ್ತುತಿ : ನಡು ಪ್ರಾಂತ್ಯದ ಹಿರಿಯ ಬಯಲಾಟ ಕಲಾವಿದರಿಂದ

**ಕಲಾವಿದರು :**

ಭಾಗವತರು : ಹೆರಂಜಾಲು ಗೋಪಾಲ ಗಾಣಿಗ, ಉದಯಕುಮಾರ್ ಹೊಸಾಳ, ರವಿಕುಮಾರ್ ಸೂರಾಲು

ಮದ್ದಳೆ : ರಾಘವೇಂದ್ರ ಹೆಗಡೆ ಯಲ್ಲಾಪುರ **ಚಂಡೆ :** ಶಿವಾನಂದ ಕೋಟ

**ಪಾತ್ರಧಾರಿಗಳು :**

**ತಾಮ್ರಧ್ವಜ :** ಆಜ್ರಿ ಗೋಪಾಲ ಗಾಣಿಗ **ಅರ್ಜುನ :** ಕೋಡಿ ವಿಶ್ವನಾಥ ಗಾಣಿಗ

**ಮಯೂರಧ್ವಜ :** ಚಂದ್ರಕುಮಾರ್ ನೀರ್ಜಡ್ಡು **ನಕುಲಧ್ವಜ :** ಹಾರಾಡಿ ಸರ್ವ ಗಾಣಿಗ

**ಕುಮುದ್ವತಿ :** ಉಳ್ಳೂರು ಶಂಕರ ದೇವಾಡಿಗ **ಬ್ರಾಹ್ಮಣ :** ಹಳ್ಳಾಡಿ ಜಯರಾಮ ಶೆಟ್ಟಿ

**ಅರ್ಜುನ ದೂತ :** ಮಹಾಬಲ ದೇವಾಡಿಗ ಕಮಲಶಿಲೆ

**ತಾಮ್ರಧ್ವಜ ದೂತ :** ಸಂಜೀವ ಕೊಠಾರಿ **ಅನಿರುದ್ಧ :** ಪ್ರವೀಣ ಗಾಣಿಗ ಕೆಮ್ಮಣ್ಣು

**ಸಂಯೋಜನೆ :** ಎಸ್. ವಿ. ಉದಯಕುಮಾರ್ ಶೆಟ್ಟಿ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಬೆಂಗಳೂರು

ಸಂಯುಕ್ತ ಆಶ್ರಯದಲ್ಲಿ

# ಬಡಗುತಿಟ್ಟು ಯಕ್ಷಗಾನದ ದಂತಕಥೆ
# ಹಾರಾಡಿ ಕುಷ್ಟ ಗಾಣಿಗರ ಜನ್ಮಶತಮಾನೋತ್ಸವ ಆಚರಣೆ

ದಿನಾಂಕ : 20-8-2017, ಭಾನುವಾರ

ಸ್ಥಳ : ವರುಣತೀರ್ಥ ಶ್ರೀ ವಾಸುದೇವ ಮಂಟಪ ಕೋಟ (ಶ್ರೀ ರಾಜಶೇಖರ ದೇವಸ್ಥಾನದ ಬಳಿ)

## ಸಂಜೆ ಘಂಟೆ 5.00ಕ್ಕೆ : ಸಭಾ ಕಾರ್ಯಕ್ರಮ

ಅಧ್ಯಕ್ಷತೆ : **ನಾಡೋಜ ಬೆಳಗಲ್ಲು ಶ್ರೀ ವೀರಣ್ಣ**
ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

ಮುಖ್ಯಅತಿಥಿಗಳು : **ಶ್ರೀ ಆನಂದ ಸಿ. ಕುಂದರ್**
ಆಡಳಿತ ಮೊಕ್ತೇಸರರು, ಶ್ರೀ ಅಮೃತೇಶ್ವರಿ ಹಲವು ಮಕ್ಕಳ ತಾಯಿ ದೇವಸ್ಥಾನ, ಕೋಟ

**ಶ್ರೀ ಎಚ್. ಧನಂಜಯ ಶೆಟ್ಟಿ**
ಆಡಳಿತ ಮೊಕ್ತೇಸರರು, ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಮಂದಾರ್ತಿ

**ಶ್ರೀ ಎಸ್. ವಿ. ಭಟ್**
ಉಪಾಧ್ಯಕ್ಷರು, ಯಕ್ಷಗಾನ ಕಲಾರಂಗ (ರಿ) ಉಡುಪಿ

ಪ್ರಸ್ತಾವನೆ : **ಶ್ರೀ ಪಿ. ಕಿಶನ್ ಹೆಗ್ಡೆ**
ಸದಸ್ಯರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

ಸಂಸ್ಮರಣ ಭಾಷಣ : **ಶ್ರೀ ಅಂಬಾತನಯ ಮುದ್ರಾಡಿ**
ಸದಸ್ಯರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

'ಪುರುಷ ವೇಷದ ಪೊಗರು ಹಾರಾಡಿ ಕುಷ್ಟ ಗಾಣಿಗ' ಕೃತಿ ಲೋಕಾರ್ಪಣೆ

ಲೋಕಾರ್ಪಣೆಗೊಳಿಸುವವರು : **ಶ್ರೀ ಕೋಟ ಶ್ರೀನಿವಾಸ ಪೂಜಾರಿ**
ವಿಧಾನಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ

ಕೃತಿ ಪರಿಚಯ : **ಶ್ರೀ ಎಸ್. ವಿ. ಉದಯಕುಮಾರ್ ಶೆಟ್ಟಿ**
ಪ್ರಾಧ್ಯಾಪಕರು ಎಂ.ಐ.ಟಿ. ಮಣಿಪಾಲ ಹಾಗೂ ಯಕ್ಷಗಾನ ವಿಮರ್ಶಕರು

ಕುಷ್ಟ ಗಾಣಿಗ-ವ್ಯಕ್ತಿ ಪರಿಚಯ : **ಶ್ರೀ ಶ್ರೀನಿವಾಸ ಗಾಣಿಗ** ಜಾರ್ಜಡ್ಕು ಬೇರ್ಕಾಡಿ

ಗೌರವ ಉಪಸ್ಥಿತಿ : **ಶ್ರೀ ಮತ್ಯಾಡಿ ನರಸಿಂಹ ಶೆಟ್ಟಿ**
ಹಿರಿಯ ಯಕ್ಷಗಾನ ಭಾಗವತರು

**ಶ್ರೀ ಕೊಂಡದಕುಳಿ ರಾಮಚಂದ್ರ ಹೆಗಡೆ**
ಸದಸ್ಯರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

**ಶ್ರೀ ಕೆ. ಎಂ. ಶೇಖರ್**
ಸದಸ್ಯರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

**ಶ್ರೀ ಜಿ. ಪ್ರಭಾಕರ ಅಡಿಗ**
ಆಡಳಿತ ಮೊಕ್ತೇಸರರು, ಶ್ರೀ ರಾಜಶೇಖರ ದೇವಸ್ಥಾನ, ಕೋಟ

ಹಾರಾಡಿ ಕುಷ್ಟ ಗಾಣಿಗ ಕುಟುಂಬದ ಹಿರಿಯ ಸದಸ್ಯರಿಗೆ ಅಕಾಡೆಮಿ ಗೌರವ ಪುರಸ್ಕಾರ

ಕುಷ್ಟ ಗಾಣಿಗ ಜನ್ಮಶತಮಾನೋತ್ಸವ ಕಲಾ ಗೌರವಾರ್ಪಣೆ
(ಹಿರಿಯ ಯಕ್ಷಗಾನ ಕಲಾವಿದರಿಗೆ)

**ಶ್ರೀ ಐರೋಡಿ ಗೋವಿಂದಪ್ಪ**

**ಶ್ರೀ ಮಜ್ಜಿಗೆಬೈಲು ಆನಂದ ಶೆಟ್ಟಿ**

**ಶ್ರೀ ಹಾರಾಡಿ ಸರ್ವ ಗಾಣಿಗ**

**ಶ್ರೀ ಜಂಬೂರು ರಾಮಚಂದ್ರ ಶ್ಯಾನುಭಾಗ್**

**ಶ್ರೀ ಹಳ್ಳಾಡಿ ಕೃಷ್ಣ ನಾಯ್ಕ**

ನಿರೂಪಣೆ : **ಶ್ರೀ ಚಂದ್ರ ಆಚಾರ್** ಕೋಟ

## – ಕಲಾ ಕಾರ್ಯಕ್ರಮಗಳು –

ಉದ್ಘಾಟಕರು : **ಶ್ರೀ ಎಚ್. ಶ್ರೀಧರ ಹಂದೆ**
ಸಂಚಾಲಕರು, ವಿಶ್ವವಿಖ್ಯಾತ ಮಕ್ಕಳ ಮೇಳ, ಕೋಟ


ಮಧ್ಯಾಹ್ನ 2.00ರಿಂದ ಯಕ್ಷಗಾನ ಚಿಕ್ಕಮೇಳ (ತೆಂಕುತಿಟ್ಟು)

ಪ್ರಸ್ತುತಿ : ಶಾರದಾ ಯಕ್ಷಗಾನ ಮಂಡಳಿ ಆಶ್ರಿತ ಚಿಕ್ಕಮೇಳ
ಸೋಮನಾಥ ಧಾಮ, ಪೆರ್ಮುದೆ
ಸುಕೇಶ್ ಶೆಟ್ಟಿ ಮತ್ತು ಬಳಗ

# ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

(ಕನ್ನಡ ಮತ್ತು ಸಂಸ್ಕೃತಿ ಇಲಾಖೆ)

## 2014–17 ಸಮಿತಿ




ನಾಡೋಜ ಬೆಳಗಲ್ಲು ವೀರಣ್ಣ
ಅಧ್ಯಕ್ಷರು



ಎಸ್.ಹೆಚ್.ಶಿವರುದ್ರಪ್ಪ
ರಿಜಿಸ್ಟ್ರಾರ್

## ಸದಸ್ಯರುಗಳು



ಅಂಬಾತನಯ ಮುದ್ರಾಡಿ



ಡಾ. ವಿಜಯ ನಳಿನಿ ರಮೇಶ್



ಕೆಂಪವ್ವ ಹರಿಜನ



ಹಸನಸಾಬ ಮೌಲಾಸಾಬ ನದಾಫ್



ಕೊಂಡದಕುಳಿ ರಾಮಚಂದ್ರ ಹೆಗಡೆ



ಬಿ. ಗಣಪತಿ



ಕೆ.ಎಂ.ಶೇಖರ್



ದತ್ತಾತ್ರೇಯ ಅರಳೀಕಟ್ಟೆ



ಪಿ.ಕಿಶನ್ ಹೆಗ್ಡೆ



ಡಾ. ಬಿ.ಎಂ. ಗುರುನಾಥ



ಡಾ. ಚಕ್ಕೆರೆ ಶಿವಶಂಕರ್



ತಾರಾನಾಥ ವರ್ಕಾಡಿ

